ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಜೂನ್ 15 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 60 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನನ್ನೀ ಕೇಂದ್ರ ಮಂತ್ರಿ ಸ್ಥಾನ ರಾಜ್ಯದ ಜನರಿಗೆ ಅರ್ಪಣೆ

● ಅಭಿನಂದನಾ ಸಮಾರಂಭದಲ್ಲಿ ಕೇಂದ್ರದ ಉಕ್ಕು, ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭಾವುಕ ನುಡಿ ● ಅಂದು ನಾನೂ ಕುತಂತ್ರಕ್ಕೆ ಬಲಿಯಾಗಿದ್ದೆ; ಮೋದಿ ಮಾತು ಕೇಳಿದ್ದರೆ ನಾನೇ ಸಿಎಂ ಆಗಿರುತ್ತಿದ್ದೆ



ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಮೊದಲ ಬಾರಿ ರಾಜ್ಯಕ್ಕೆ ಆಗಮಿಸಿದ ಮಾಜಿ ಮುಖ್ಯಮಂತ್ರಿಗಳೂ ಆದ ಹೆಚ್.ಡಿ.ಕುಮಾರಸ್ವಾಮಿಯವರನ್ನು ಅದ್ಧೂರಿಯಾಗಿ ಸ್ವಾಗತಿಸಿ, ರೋಡ್ ಶೋ ಮೂಲಕ ಬೆಂಗಳೂರಿನ ಶೇಷಾದ್ರಿಪುರಂನಲ್ಲಿರುವ ಜೆಡಿಎಸ್ ಕಚೇರಿಗೆ ಕರೆತರಲಾಯಿತು. ಈ ವೇಳೆ ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಸಮೃದ್ಧಿ ಮಂಜುನಾಥ್ ಮತ್ತಿತರ ಮುಖಂಡರಿದ್ದರು.

ಬೆಂಗಳೂರು, ಜೂ.14–ಕೇಂದ್ರ ಸಚಿವರಾಗಿ ರಾಜ್ಯಕ್ಕೆ ಮೊದಲ ಬಾರಿಗೆ ಆಗಮಿಸಿದ ಹೆಚ್.ಡಿ.ಕುಮಾರಸ್ವಾಮಿ (ಹೆಚ್‌ಡಿಕೆ) ಅವರಿಗಿಂದು ಬೆಂಗಳೂರಲ್ಲಿ ಅದ್ಧೂರಿ ಸ್ವಾಗತ ಕೋರಲಾಯಿತು. ಮಹಿಳಾ ಘಟಕದ ಕಾರ್ಯಕರ್ತರು ಆರತಿ ಬೆಳಗಿ, ಸ್ವಾಗತ ಕೋರಿದರು. ಅಲ್ಲದೇ ಜೆಡಿಎಸ್ ವತಿಯಿಂದ ಇಲ್ಲಿನ ಜೆಪಿ ಭವನದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದಿಸಿ, ಗೌರವಿಸಲಾಯಿತು. ಕಾರ್ಯಕರ್ತರು ಪುಷ್ಪವೃಷ್ಟಿಗರೆದು ಕುಣಿದು ಕುಪ್ಪಳಿಸಿದರು.

ಮಂತ್ರಿ ಸ್ಥಾನ ಕರ್ನಾಟಕದ ಜನರಿಗೆ ಅರ್ಪಣೆ: ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕೇಂದ್ರ ಸಚಿವ ಹೆಚ್‌ಡಿಕೆ, ಪಕ್ಷದ ಕಾರ್ಯಕರ್ತರ ದುಡಿಮೆಗೆ 2008ರಿಂದ ಯಾವುದೇ ರೀತಿಯ ಪ್ರತಿಫಲ ಸಿಕ್ಕಿರಲಿಲ್ಲ. ಅಂತಹ ಸಮಯದಲ್ಲಿ ಪಕ್ಷವನ್ನು ಉಳಿಸಿ–ಬೆಳೆಸಿದ ಲಕ್ಷಾಂತರ ಕಾರ್ಯಕರ್ತರು ಈ ರಾಜ್ಯದಲ್ಲಿ ಇದ್ದೀರಿ. ನಿಮಗೆ ಸಾಷ್ಟಾಂಗ ನಮಸ್ಕಾರ ಮಾಡ್ತೀನಿ. ಮೋದಿ ಅವರು 2 ಬಾರಿ ಪ್ರಧಾನಿಯಾಗಿ ಉತ್ತಮವಾಗಿ ಕೆಲಸ ಮಾಡಿ, 3ನೇ ಬಾರಿಗೆ ದೇಶದ ಪ್ರಧಾನಿಯಾಗಿ ಅಧಿಕಾರ ಸ್ವೀಕಾರ ಮಾಡಿದ್ದಾರೆ. ಅವರ ಮಂತ್ರಿ ಮಂಡಲದಲ್ಲಿ ಕೇಂದ್ರದ ಮಂತ್ರಿ ಆಗಿದ್ದೇನೆ. ನನ್ನ ಪಾಲಿಗೆ ಬಂದಿರೋ ಈ ಮಂತ್ರಿ ಸ್ಥಾನವನ್ನು ಕರ್ನಾಟಕದ ಜನರಿಗೆ ಅರ್ಪಣೆ ಮಾಡ್ತೀನಿ ಎಂದು ಭಾವುಕರಾದರು.

ಮೋದಿಗೆ ಧನ್ಯವಾದ: 2018ರ ದಿನವನ್ನ ನಾನು ನೆನಪು ಮಾಡಿಕೊಳ್ತೀನಿ. ಅವತ್ತು ಬಹುಮತ ಬಾರದೇ ಇದ್ದಾಗ ಕಾಂಗ್ರೆಸ್‌ನ ದೆಹಲಿ ನಾಯಕರು ದೇವೇಗೌಡರ ಮನೆಗೆ ● 7ನೇ ಪುಟಕ್ಕೆ

ಹೆಚ್.ಡಿ.ಕುಮಾರಸ್ವಾಮಿ ಮುಂದೆ ದೇಶದ ಪ್ರಧಾನಿ ಆಗಬಹುದು!

ಹಿರಿಯ ಜೆಡಿಎಸ್ ಶಾಸಕ ಜಿಟಿ ದೇವೇಗೌಡರ ಭವಿಷ್ಯ

ಬೆಂಗಳೂರು, ಜೂ.14– ಎಚ್.ಡಿ. ದೇವೇಗೌಡರು ಈ ದೇಶದ ಪ್ರಧಾನಿಯಾಗಿ ಈಗಾಗಲೇ ಸಾಧನೆ ಮಾಡಿದ್ದಾರೆ. ಮುಂದೆ ಅಂತಹ ಅವಕಾಶ ಒದಗಿಬಂದರೆ ಎಚ್.ಡಿ. ಕುಮಾರಸ್ವಾಮಿಯವರು ದೇಶದ ಪ್ರಧಾನಿ ಆಗಬಹುದು ಎಂದು ಜಿ.ಟಿ.ದೇವೇಗೌಡ ಭವಿಷ್ಯ ನುಡಿದರು.

ಹೆಚ್.ಡಿ. ಕುಮಾರಸ್ವಾಮಿ ಕೇಂದ್ರ ಸಚಿವರಾದ ಹಿನ್ನೆಲೆಯಲ್ಲಿ ಜೆಪಿ ಭವನದಲ್ಲಿ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಎಚ್.ಡಿ. ದೇವೇಗೌಡರಂತೆ ಕುಮಾರಸ್ವಾಮಿಯವರು ಸಹ ಪ್ರಧಾನಿ ಆಗಬಹುದು. ಅವರು ಕೂಡ ತಂದೆಯ ರೀತಿ ಸಾಧನೆ ಮಾಡಬೇಕು. ಅದಕ್ಕೆ ನಿಮ್ಮೆಲ್ಲರ ಸಹಕಾರ, ಶ್ರಮ, ತ್ಯಾಗದ ಅಗತ್ಯವಿದೆ ಎಂದರು. ಈ ಬಾರಿ ನಾವು ಬಿಜೆಪಿಯೊಂದಿಗೆ ಒಂದಾಗಿ ಕೆಲಸ ಮಾಡಿದೆವು. ಮೈಸೂರಿನಲ್ಲಿ ಯದುವೀರ್ ಗೆದ್ದಿದ್ದರೆ ಅದು ಜೆಡಿಎಸ್ ಓಟಿನಿಂದ. ಹಾಗೇ ಕೋಲಾರದಲ್ಲಿ ಮಲ್ಲೇಶ್ ಬಾಬು ಗೆದ್ದಿದ್ದರೆ ಅದಕ್ಕೆ ಬಿಜೆಪಿ ಓಟುಗಳೇ ಕಾರಣ. ● 7ನೇ ಪುಟಕ್ಕೆ

ದರ್ಶನ್ ಗ್ಯಾಂಗ್‌ನಿಂದ ಹತ್ಯೆ ಪ್ರಕರಣ; ಕಾರು ಚಾಲಕ ರವಿಕುಮಾರ್ ಶರಣಾದ ಬೆನ್ನಲ್ಲೇ...

ಮತ್ತಿಬ್ಬರು ಶರಣು



ಜಗದೀಶ್



ಅನುಕುಮಾರ್

ಚಿತ್ರದುರ್ಗ, ಜೂ. 14–ರೇಣುಕಾಸ್ವಾಮಿ ಹತ್ಯೆ ಪ್ರಕರಣದ 8ನೇ ಆರೋಪಿ, ಕಾರು ಚಾಲಕ ರವಿಕುಮಾರ್ ಗುರುವಾರ ಚಿತ್ರದುರ್ಗ ಡಿವೈಎಸ್ಪಿ ದಿನಕರ್ ಮುಂದೆ ಶರಣಾದ ಬೆನ್ನಲ್ಲೇ ಇಂದು ಈ ಪ್ರಕರಣದ 6 ಮತ್ತು 7ನೇ ಆರೋಪಿಗಳಾದ ಚಿತ್ರದುರ್ಗದ ಜಗದೀಶ್ ಅಲಿಯಾಸ್ ಜಗ್ಗ ಮತ್ತು ಅನುಕುಮಾರ್ ಅಲಿಯಾಸ್ ಅನು ಪೊಲೀಸರಿಗೆ ಶರಣಾಗಿದ್ದಾರೆ.

ಈ ಮೂವರು ಆರೋಪಿಗಳಲ್ಲಿ ರೇಣುಕಾಸ್ವಾಮಿಯನ್ನು ಬೆಂಗಳೂರಿಗೆ ಕರೆದೊಯ್ದ ಕಾರಿನ ಮಾಲೀಕ ಹಾಗೂ ಚಾಲಕ ರವಿಕುಮಾರ್ ಆಗಿದ್ದರೆ, ಕಾರು ಬುಕ್ ಮಾಡಿದ್ದು ಜಗದೀಶ್. ಇವರ ಜೊತೆ ಸ್ನೇಹದಿಂದ ಬೆಂಗಳೂರಿಗೆ ಕಾರಿನಲ್ಲಿ ತೆರಳಿದವನು ಅನುಕುಮಾರ್. ವಿಚಿತ್ರವೆಂದರೆ ಈ ಮೂವರಿಗೂ ರೇಣುಕಾಸ್ವಾಮಿಯನ್ನು ಹತ್ಯೆ ಮಾಡಬಹುದು ಎಂಬ ಸುಳಿವು ಇರಲಿಲ್ಲ. ಇವರ್ಯಾರೂ ನಟ ದರ್ಶನ್‌ನ ಅಪ್ಪಟ ಅಭಿಮಾನಿಗಳಲ್ಲ. ಚಿತ್ರದುರ್ಗ ಜಿಲ್ಲೆಯ ದರ್ಶನ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಘವೇಂದ್ರ ಅಲಿಯಾಸ್ ರಾಘು ಕರೆದಿದ್ದರಿಂದ ● 7ನೇ ಪುಟಕ್ಕೆ

ಹೃದಯಾಘಾತದಿಂದ ಅನು ತಂದೆ ಸಾವು



ಚಂದ್ರಣ್ಣ

ಚಿತ್ರದುರ್ಗ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಇಂದು ಪೊಲೀಸರಿಗೆ ಶರಣಾದ ಅನುಕುಮಾರ್ ಅಲಿಯಾಸ್ ಅನು ಮನೆಯಲ್ಲಿ ಇನ್ನೊಂದು ದುರಂತ ನಡೆದಿದೆ. ಮಗನ ಬಂಧನದ ಬಳಿಕ ಚಿಂತೆಗೆ ಒಳಗಾಗಿದ್ದ ಅನುಕುಮಾರ್ ತಂದೆ ಚಂದ್ರಣ್ಣ, ಹೃದಯಾಘಾತದಿಂದ ಅಸುನೀಗಿದ್ದಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಗ ಅನುಕುಮಾರ್ ಪೊಲೀಸರಿಂದ ಬಂಧನಕ್ಕೊಳಗಾಗಿದ್ದಾನೆ ಎಂಬ ಸುದ್ದಿ ತಿಳಿಯುತ್ತಿದ್ದಂತೆಯೇ ತಂದೆ ಚಂದ್ರಣ್ಣ (60) ಆಘಾತಕ್ಕೆ ಒಳಗಾಗಿದ್ದರು. ಹೀನಾಯ ಕೃತ್ಯದಲ್ಲಿ ಮಗ ಭಾಗಿ ಆಗಿದ್ದಾನೆ ಎಂಬ ಆರೋಪ ಎದುರಾಗಿದ್ದರಿಂದ ಚಂದ್ರಣ್ಣ ಮಾನಸಿಕವಾಗಿ ನೊಂದಿದ್ದರು. ನನ್ನ ಮಗ ಅಮಾಯಕ, ಅವನು ಯಾವುದೇ ಕಾರಣಕ್ಕೂ ಕೊಲೆ ಮಾಡುವವನಲ್ಲ ಎಂದು ಮಾಧ್ಯಮಗಳೊಂದಿಗೆ ಅಳಲು ತೋಡಿಕೊಂಡಿದ್ದರು. ಅದಾದ ಕೆಲ ನಿಮಿಷಗಳಲ್ಲೇ ಚಿತ್ರದುರ್ಗದ ಸಿಹಿ ನೀರು ಹೊಂಡ ಬಳಿಯಿರುವ ಮನೆಯಲ್ಲಿ ಹೃದಯಾಘಾತಕ್ಕೊಳಗಾಗಿ ಕೊನೆಯುಸಿರೆಳೆದಿದ್ದಾರೆ.



ಖಾಸಗಿ ಇಂಜಿನಿಯರಿಂಗ್ ಪ್ರವೇಶಾತಿ ಶುಲ್ಕ ಶೇ.10ರಷ್ಟು ಹೆಚ್ಚಳ

ಬೆಂಗಳೂರು, ಜೂ.14–ಖಾಸಗಿ ಇಂಜಿನಿಯರಿಂಗ್ ಪ್ರವೇಶಾತಿ ಶುಲ್ಕ ಶೇ.10ರಷ್ಟು ಹೆಚ್ಚಳ ಮಾಡಿ ರಾಜ್ಯ ಸರ್ಕಾರ ವಿದ್ಯಾರ್ಥಿಗಳಿಗೆ ಶಾಕ್ ಕೊಟ್ಟಿದೆ. ಖಾಸಗಿ, ಅನುದಾನ ರಹಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಶುಲ್ಕ ಹೆಚ್ಚಳ ಮಾಡಲಾಗಿದೆ. ಆ ಮೂಲಕ ಹೆಚ್ಚುವರಿ ಶುಲ್ಕದಿಂದ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆ ಹೆಚ್ಚಾಗಲಿದೆ. ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ನೇತೃತ್ವದಲ್ಲಿ ಖಾಸಗಿ ● 6ನೇ ಪುಟಕ್ಕೆ

ಪೋಕ್ಸೋ ಪ್ರಕರಣದಲ್ಲಿ ಬಿಎಸ್‌ವೈಗೆ ಬಿಗ್ ರಿಲೀಫ್

ಬಂಧಿಸದಂತೆ ಹೈಕೋರ್ಟ್ ಆದೇಶ



ಬೆಂಗಳೂರು, ಜೂ.14(ಕೆಎಂಶಿ)– ಪೋಕ್ಸೋ ಪ್ರಕರಣದಡಿ ಬಂಧನ ಭೀತಿ ಎದುರಿಸುತ್ತಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಬಂಧಿಸದಂತೆ ರಾಜ್ಯ ಹೈಕೋರ್ಟ್ ಆದೇಶಿಸಿದೆ.

ಯಡಿಯೂರಪ್ಪ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರ ಏಕಸದಸ್ಯ ಪೀಠ ಈ ಆದೇಶ ಮಾಡಿದೆ.

ಜೂನ್ 17ರಂದು ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಮುಂದೆ ವಿಚಾರಣೆಗೆ ಹಾಜರಾಗಬೇಕು ಎಂದು ನಿರ್ದೇಶನ ನೀಡಿದ್ದಲ್ಲದೆ, ಮುಂದಿನ ಶುಕ್ರವಾರಕ್ಕೆ ವಿಚಾರಣೆಯನ್ನು ಮುಂದೂಡಿದರು. ಯಡಿಯೂರಪ್ಪ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿ, ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ಅರ್ಜಿಗಳಿದ್ದು ಒಂದು ಪ್ರಕರಣವನ್ನು ರದ್ದುಗೊಳಿಸುವಂತೆ ಇನ್ನೊಂದು ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿದ್ದರು. ಪ್ರಕರಣದ ದೂರುದಾರೆಗೆ ಬ್ಲ್ಯಾಕ್‌ಮೇಲ್ ಮಾಡುವುದೇ ಕಸುಬು. ಆಕೆ ಸಾಕಷ್ಟು ಪ್ರಭಾವಿಗಳ ವಿರುದ್ಧವೂ ದೂರು ದಾಖಲಿಸಿದ್ದಾರೆ. ಇಲ್ಲಿ ಭಾವನಾತ್ಮಕ ಅಂಶಗಳಿಗಿಂತ ವಾಸ್ತವಾಂಶಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದಾಗ, ಎಫ್‌ಐಆರ್ ಯಾರು ದಾಖಲಿಸಿದ್ದಾರೆ ಎಂದು ನ್ಯಾಯಾಧೀಶರು ಪ್ರಶ್ನಿಸಿದರು. ಆಗ ಯಡಿಯೂರಪ್ಪ ವಕೀಲರು, ಸಂತ್ರಸ್ತೆಯ ● 6ನೇ ಪುಟಕ್ಕೆ

ಕಾಂಗ್ರೆಸ್ ಎಂದೂ ದ್ವೇಷದ ರಾಜಕಾರಣ ಮಾಡಲ್ಲ

● ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ● ಯಡಿಯೂರಪ್ಪ ವಿರುದ್ಧದ ಪೋಕ್ಸೋ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಣೆ



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮಗಳೊಂದಿಗೆ ಮಾತನಾಡಿದರು. ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಸಂಸದ ಸುನೀಲ್ ಬೋಸ್, ಶಾಸಕ ರವಿಶಂಕರ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತ್ತಿತರರಿದ್ದರು.

ಗ್ಯಾರಂಟಿಗಳು ಗ್ಯಾರಂಟಿ!

ಮೈಸೂರು: ರಾಜ್ಯ ಸರ್ಕಾರದ ಐದು ಗ್ಯಾರಂಟಿ ಕಾರ್ಯಕ್ರಮಗಳೂ ಮುಂದುವರೆಯುತ್ತವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಕೆಲ ಕಾಂಗ್ರೆಸ್ ನಾಯಕರು ಐದು ಗ್ಯಾರಂಟಿ ಕಾರ್ಯಕ್ರಮಗಳ ಬಗ್ಗೆ ವ್ಯತಿರಿಕ್ತವಾಗಿ ಮಾತನಾಡಿದ್ದರು. ಈ ಬಗ್ಗೆ ಪರ–ವಿರೋಧ ಹೇಳಿಕೆ ನೀಡಿ, ಗೊಂದಲ ಸೃಷ್ಟಿಸಿದ್ದರು. ಯೋಜನೆಯಲ್ಲಿ ಬದಲಾವಣೆ ಸಾಧ್ಯತೆ ಬಗ್ಗೆಯೂ ಕೆಲವರು ಮಾತನಾಡಿದ್ದರು. ಈ ವಿಚಾರವಾಗಿ ಮೈಸೂರಿನಲ್ಲಿ ಪ್ರತಿಕ್ರಿಯಿಸಿದ ಸಿಎಂ, ಐದು ಗ್ಯಾರಂಟಿಗಳೂ ಕೂಡ ಮುಂದುವರೆಯುತ್ತವೆ. ಇವು ಬಡವರ ಕಾರ್ಯಕ್ರಮಗಳು. ಚುನಾವಣೆಗೋಸ್ಕರ ಮಾಡಿದಲ್ಲ. ಬಡವರಿಗೆ ಆರ್ಥಿಕ ಹಾಗೂ ಸಾಮಾಜಿಕವಾಗಿ ಶಕ್ತಿ ತುಂಬುವ ಉದ್ದೇಶದಿಂದ ಮಾಡಿದ್ದು. ಬಡವರ ಕಾರ್ಯಕ್ರಮಗಳನ್ನು ಯಾವ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು.

ಮೈಸೂರು, ಜೂ.14(ಎಸ್‌ಬಿಡಿ)– 17 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಪ್ರಕರಣದಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಬಂಧಿಸದಂತೆ ಹೈಕೋರ್ಟ್ ನೀಡಿರುವ ಆದೇಶದ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಕಾಂಗ್ರೆಸ್ ಪಕ್ಷ ಎಂದಿಗೂ ದ್ವೇಷದ ರಾಜಕಾರಣ ಮಾಡುವುದಿಲ್ಲ ಎಂದು ಪ್ರತಿಪಕ್ಷದವರ ಆರೋಪಕ್ಕೆ ತಿರುಗೇಟು ನೀಡಿದರು.


ಮೈಸೂರಿಗೆ ಶುಕ್ರವಾರ ಸಂಜೆ ಆಗಮಿಸಿದ ವೇಳೆ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸಿಎಂ, ನ್ಯಾಯಾಲಯದ ಆದೇಶದ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಬಿಎಸ್‌ವೈ ಪ್ರಕರಣವನ್ನು ರಾಜಕೀಯ ಷಡ್ಯಂತ್ರ ಎನ್ನಲು ಸರ್ಕಾರ ಏನಾದರೂ ದೂರು ಕೊಟ್ಟಿದೆಯೇ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಪಕ್ಷ ಎಂದೂ ಕೂಡ ದ್ವೇಷದ ರಾಜಕಾರಣ ಮಾಡುವುದಿಲ್ಲ. ಕಾನೂನು ರೀತ್ಯ ಕಾರ್ಯನಿರ್ವಹಿಸುವ ಪೊಲೀಸರ ಮೇಲೆ ಯಾವುದೇ ಪ್ರಭಾವ ಬೀರುವುದಾಗಲೀ, ತನಿಖೆಯಲ್ಲಿ ಮಧ್ಯಪ್ರವೇಶವಾಗಲೀ ಮಾಡುವುದಿಲ್ಲ. ಕೋರ್ಟ್ ಆದೇಶವನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಹಾಗೂ ಅದರಂತೆ ಎಲ್ಲರೂ ನಡೆದುಕೊಳ್ಳಬೇಕಾಗುತ್ತದೆ ಎಂದರು.

ದೇವೇಗೌಡರ ಕುಟುಂಬ ಮುಗಿಸುವ ಪ್ರಯತ್ನ ಫಲಿಸಲಿಲ್ಲ, ಈಗ ಯಡಿಯೂರಪ್ಪನವರ ಮೇಲೆ ಪ್ರಯೋಗ ಮಾಡುತ್ತಿದ್ದಾರೆ ● 6ನೇ ಪುಟಕ್ಕೆ



ಮಿದುಳು ಟ್ಯೂಮರ್‌ನಿಂದ ಬಳಲುತ್ತಿರುವವರಿಗೆ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಸೌಲಭ್ಯ



ಮೈಸೂರು, ಜೂ.14(ಜಿಎ)–ಮಿದುಳು ಟ್ಯೂಮರ್(ಗಡ್ಡೆ) ಸಮಸ್ಯೆಯಿಂದ ಬಳಲುತ್ತಿರುವವರಿಗೆ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಸ್ಟಿರಿಯೊಟ್ಯಾಕ್ಟಿಕ್ ರೇಡಿಯೊ ಸರ್ಜರಿ (ಎಸ್‌ಆರ್‌ಎಸ್) ಹಾಗೂ ಸ್ಟಿರಿಯೊಟ್ಯಾಕ್ಟಿಕ್ ರೇಡಿಯೇಶನ್ ಥೆರಪಿ (ಎಸ್‌ಆರ್‌ಟಿ) ಚಿಕಿತ್ಸೆ ಸೌಲಭ್ಯ ವಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಮಾಧವಿ ತಿಳಿಸಿದರು

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಿದುಳು ಟ್ಯೂಮರ್(ಗಡ್ಡೆ) ಕುರಿತಂತೆ ಪ್ರತಿ ತಿಂಗಳು 8ರಿಂದ 10 ಪ್ರಕರಣಗಳು ವರದಿಯಾಗುತ್ತಿದ್ದು, ಎಲ್ಲಾ ವಯೋಮಾನದವರೂ ಮಿದುಳು ಗಡ್ಡೆ ಸಮಸ್ಯೆ ಎದುರಿಸುತ್ತಿದ್ದಾರೆ. ಇದಕ್ಕೆ ಸುಧಾರಿತ ರೇಡಿಯೊಥೆರಪಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು. ದೇಶದಲ್ಲಿ ವರ್ಷಕ್ಕೆ 24 ಸಾವಿರ ಮಂದಿ ಮಿದುಳು ಟ್ಯೂಮರ್ (ಗಡ್ಡೆ) ರೋಗಕ್ಕೆ ಬಲಿಯಾಗುತ್ತಿದ್ದು, ರೋಗಲಕ್ಷಣಗಳನ್ನು ಅರಿಯಬೇಕು. ತಲೆನೋವು, ವಾಂತಿ, ದೃಷ್ಟಿ ಮಂದವಾಗುವುದು, ದೇಹದಲ್ಲಿ ಅಸಮತೋಲನ, ಸ್ನಾಯು ನೋವು ಉಂಟಾದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು ಎಂದರು. ಅಂಕಾಲಜಿಸ್ಟ್ ಡಾ.ವಿನಯ್ ಕುಮಾರ್ ಮುತ್ತಗಿ ಮಾತನಾಡಿ, ಜೂ.8ರಂದು ವಿಶ್ವ ಮಿದುಳು ಗಡ್ಡೆ ದಿನ ಆಚರಿಸಲಾಗುತ್ತಿದ್ದು, ಮಿದುಳಿನ ಆರೋಗ್ಯ ಮತ್ತು ತಡೆಗಟ್ಟುವಿಕೆ ಈ ವರ್ಷದ ಧ್ಯೇಯವಾಕ್ಯವಾಗಿದೆ. ಗೆಡ್ಡೆ ಬೆಳೆದಾಗ ಮಿದುಳಿನ ಚಿಪ್ಪು ಅಗಲವಾಗುವುದಿಲ್ಲ. ಅದರಿಂದ ಅಪಾಯವು ಹೆಚ್ಚಿರುತ್ತದೆ. ಹೀಗಾಗಿ ಮುನ್ನೆಚ್ಚರಿಕೆ ವಹಿಸಬೇಕು. ಟ್ಯೂಮರ್ ಬಗ್ಗೆ ಜಾಗೃತಿ ಅಗತ್ಯ. ಇದಕ್ಕಾಗಿ ಆರೋಗ್ಯಕರ ಜೀವನಶೈಲಿ ನಡೆಸಬೇಕು. ನಿತ್ಯ 40 ನಿಮಿಷ ವ್ಯಾಯಾಮ, 8 ಗಂಟೆ ನಿದ್ದೆ ಮಾಡಬೇಕು. ಮೊಬೈಲ್ ನೋಡುವ ಸಮಯ ಕಡಿಮೆ ಮಾಡಬೇಕು ಎಂದು ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಮಾರುಕಟ್ಟೆ ವ್ಯವಸ್ಥಾಪಕ ಆನಂದ್, ಗೌತಮ್ ಧರ್ಮೇರ್ಲಾ ಉಪಸ್ಥಿತರಿದ್ದರು.

ಇಂದಿನಿಂದ ವಧುವಿನ ಆಭರಣ, ಪರಿಕರಗಳ ಹೈಲೈಫ್ ಪ್ರದರ್ಶನ, ಮಾರಾಟ



ಮೈಸೂರು, ಜೂ.14(ಜಿಎ)–ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಹೈ ಲೈಫ್ ವತಿಯಿಂದ ವಧುವಿನ ಆಭರಣ ಮತ್ತು ಪರಿಕರಗಳ ಪ್ರದರ್ಶನ ಹಾಗೂ ಮಾರಾಟವನ್ನು ಜೂ.15 ಮತ್ತು 16ರಂದು ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹೈ ಲೈಫ್‌ನ ಆಯೋಜಕರಾದ ಶೋಮೀಕಾ ಎಸ್ ರಾವ್ ಈ ವಿಷಯ ತಿಳಿಸಿ, ಹೈ ಲೈಫ್ ವತಿಯಿಂದ ಕಳೆದ 3 ವರ್ಷಗಳಿಂದ ಪ್ರದರ್ಶನ ಏರ್ಪಡಿಸುತ್ತಿದ್ದು, ಈವರೆಗೂ 10 ಪ್ರದರ್ಶಗಳು ಯಶಸ್ವಿಯಾಗಿ ಉತ್ತಮ ಪ್ರತಿಕ್ರಿಯೆ ದೊರೆತ್ತಿದೆ ಎಂದರು.

ಈ ಬಾರಿ 50 ಮಳಿಗೆಗಳಲ್ಲಿ ಹೈದರಾಬಾದ್, ರಾಜಸ್ಥಾನ್, ಮುಂಬೈ, ದೆಹಲಿ ಸೇರಿದಂತೆ ದೇಶದ ವಿವಿಧ ಭಾಗಗಳ ವೈವಿಧ್ಯಮಯವಾದ ಆಭರಣ ಮತ್ತು ವಸ್ತ್ರಗಳನ್ನು ಖರೀದಿಸಬಹುದಾಗಿದ್ದು, ಕಳೆದ ಬಾರಿಗಿಂತ ಈ ಬಾರಿ ನವೀನ ವಿನ್ಯಾಸದ ಆಭರಣ, ಪರಿಕರಗಳು, ಕಸೂತಿಯ ವಸ್ತ್ರಗಳು ಆಕರ್ಷಿಸಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಯೋಜಕ ಶ್ರೀಕಾಂತ್ ಉಪಸ್ಥಿತರಿದ್ದರು.

ಜೂ.24ರಂದು ಸಾಮೂಹಿಕ ಉಪನಯನ

ಮೈಸೂರು, ಜೂ.14–ನಗರದ ಕೆಆರ್‌ಎಸ್ ಮುಖ್ಯರಸ್ತೆಯಲ್ಲಿರುವ (ಮೊಗರಹಳ್ಳಿ ಸಮೀಪ) ಸಾಧನಹಳ್ಳಿ ಸಪ್ತರ್ಷಿ ಗುರುಕುಲ ಸೇವಾಕೇಂದ್ರದಲ್ಲಿ ಜೂ.24ರಂದು ಸೋಮವಾರ ಬೆಳಿಗ್ಗೆ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.



ಅಂದು ಬೆಳಿಗ್ಗೆ ಮಹಾಸುದರ್ಶನ ಹೋಮ, ಗೃಹದೇವತಾ ಆರಾಧನೆ, ಮಹಾಮಂಗಳಾರತಿ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ ನಂತರ ಶ್ರೀಮಠದ ಸಂಸ್ಥಾಪಕರಾದ ಶ್ರೀ ಅಭಿನವ ರಾಮಾನುಜ ಜೀಯರ್ ಅವರಿಂದ ಆಶೀರ್ವಚನ ಏರ್ಪಡಿಸಲಾಗಿದೆ.

ಜೂ.23ರಂದು ಭಾನುವಾರ ಉದಕಶಾಂತಿ ಪೂಜೆ ಏರ್ಪಡಿಸಲಾಗಿದೆ. ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶಾಲಾ–ಕಾಲೇಜಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಲಭ್ಯವನ್ನು ಕಲ್ಪಿಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊಬೈಲ್ 9481319111 ಅಥವಾ ಆಶ್ರಮದ ವ್ಯವಸ್ಥಾಪಕರಾದ ರಂಗನಾಥ್ 8861573934 ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ಜೂ.26ರಿಂದ ಮೈಸೂರಲ್ಲಿ 25ನೇ ರಾಜ್ಯಮಟ್ಟದ ಅಂತರ ವಿದ್ಯಾಲಯ ಅಥ್ಲೇಟಿಕ್ ಕ್ರೀಡಾಕೂಟ


ಮೈಸೂರು, ಜೂ.14(ಜಿಎ)–ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೈಸೂರು ಪ್ರಾದೇಶಿಕ ಕೇಂದ್ರದ ವತಿಯಿಂದ ಜೂ.26ರಿಂದ 29ರವರೆಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ 25ನೇ ರಾಜ್ಯಮಟ್ಟದ ಅಂತರ ವಿದ್ಯಾಲಯ ಪುರುಷ ಮತ್ತು ಮಹಿಳಾ ಅಥ್ಲೆಟಿಕ್ ಕ್ರೀಡಾಕೂಟವನ್ನು ಏರ್ಪಡಿಸಲಾಗಿದೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕ ಡಾ. ಟಿ.ಪಿ.ರೇಣುಕಾ ಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರೀಡಾಕೂಟಕ್ಕೆ ಅಂದು ಬೆಳಗ್ಗೆ 10 ಗಂಟೆಗೆ ಅಂತರಾಷ್ಟ್ರೀಯ ಅಥ್ಲೀಟ್ ಮತ್ತು ಅರ್ಜುನ ಪ್ರಶಸ್ತಿ ವಿಜೇತರಾದ ಅಶ್ವಿನಿ ನಾಚಪ್ಪ ಚಾಲನೆ ನೀಡಲಿದ್ದಾರೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಪ್ರೊ.ಎಸ್. ವಿದ್ಯಾಶಂಕರ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಕ್ರೀಡಾ ಕೂಟದಲ್ಲಿ ರಾಜ್ಯದ ಎಲ್ಲಾ ಭಾಗಗಳ ತಾಂತ್ರಿಕ ವಿದ್ಯಾಲಯಗಳಿಂದ ಸುಮಾರು 1500ರಿಂದ 2000 ಕ್ರೀಡಾಪಟುಗಳು ಭಾಗವಹಿಸುತ್ತಿದ್ದು, 23 ವಿವಿಧ ಪುರುಷ ಮತ್ತು ಮಹಿಳಾ ಅಥ್ಲೆಟಿಕ್ ಸ್ಪರ್ಧಿಸಲಿವೆ ಎಂದರು.

ಕ್ರೀಡಾಕೂಟವನ್ನು ವ್ಯವಸ್ಥಿತವಾಗಿ ನಡೆಸುವ ದೃಷ್ಟಿಯಿಂದ ಬೋಧಕ, ಬೋಧಕೇತರ ಹಾಗೂ ಕ್ರೀಡಾ ಸಿಬ್ಬಂದಿಗಳನ್ನೊಳಗೊಂಡ 21 ಸಮಿತಿಗಳನ್ನು ರಚಿಸಲಾಗಿದ್ದು ವಿವಿಧ ಜವಾಬ್ದಾರಿಗಳನ್ನು ನೀಡಲಾಗಿದೆ. ಮೊದಲನೆ ಬಾರಿಗೆ ಈ ಕ್ರೀಡಾ ಕೂಟದಲ್ಲಿ ಸ್ಪರ್ಧೆಗಳ ಫಲಿತಾಂಶಗಳನ್ನು ಫೋಟೋ ಫಿನಿಶ್ ತಂತ್ರಜ್ಞಾನ ಬಳಸಿ ನಿಖರವಾಗಿ ನೀಡುವ ವ್ಯವಸ್ಥೆ ಮಾಡಲಾಗಿದೆ. ಸರಿ ಸುಮಾರು 200 ಕ್ರೀಡಾಧಿಕಾರಿಗಳು ತೀರ್ಪುಗಾರರಾಗಿ ಭಾಗವಹಿಸಲಿದ್ದಾರೆ. ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳ ವಿಜೇತರಿಗೆ ಕ್ರಮವಾಗಿ 25, 20 ಮತ್ತು 15 ಗ್ರಾಂ ತೂಕದ ಶುದ್ಧ ಬೆಳ್ಳಿ ಪದಕಗಳನ್ನು ಇಡೀ ದೇಶದಲ್ಲೇ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿಶೇಷವಾಗಿ ನೀಡುತ್ತಾ ಬಂದಿದ್ದು, ಕ್ರೀಡಾಕೂಟದ ದೃಶ್ಯಾವಳಿಗಳನ್ನು ಯು ಟ್ಯೂಬ್ ಚಾನೆಲ್‌ನಲ್ಲಿ ವೀಕ್ಷಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಟಿಯು ಆಯೋಜನ ಕಾರ್ಯದರ್ಶಿ ಪ್ರಸನ್ನ ಕುಮಾರ್, ಎಂಬಿಎ ವಿಭಾಗದ ಮುಖ್ಯಸ್ಥ ಡಾ.ಎಂ.ಎಸ್.ಯತೀಶ್ ಚಂದ್ರ, ಡಾ. ಜಿ.ಎಫ್ ಅಲಿ ಅಹಮದ್, ಕ್ರೀಡಾ ಸಂಯೋಜಕ ರಘುನಾಥ್ ಉಪಸ್ಥಿತರಿದ್ದರು.

ನಿಧನ



ಜೆ.ಎನ್.ಶ್ರೀಕಂಠಮೂರ್ತಿ

ಮೈಸೂರು, ಜೂ.14– ಮೂಲತಃ ಹೆಚ್.ಡಿ.ಕೋಟೆ ತಾಲೂಕು ಜಿನ್ನಹಳ್ಳಿ ಗ್ರಾಮದ ಲೇಟ್ ನಂಜುಂಡಯ್ಯರವರ ಪುತ್ರ, ಮೈಸೂರು ಅರವಿಂದನಗರ ನಿವಾಸಿ, ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್ ಜೆ.ಎನ್. ಶ್ರೀಕಂಠಮೂರ್ತಿ(74) ಅವರು ಇಂದು ಬೆಳಗ್ಗೆ ನಿಧನರಾದರು.

ಮೃತರು ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ನಾಳೆ (ಶನಿವಾರ) ಬೆಳಗ್ಗೆ 8 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ

ಮಿಲೇನಿಯಂ ಸರ್ಕಲ್‌ನಲ್ಲಿ ಆರಂಭವಾಗಿದೆ

ಕುರಿಗಳ ಸಂತೆ!

ನಾನಾ ಕಡೆಯಿಂದ ತಂದ ವಿವಿಧ ತಳಿಯ ಕುರಿಗಳ ಮಾರಾಟ





ಮೈಸೂರು, ಜೂ.14(ಎಂಕೆ)–ಮುಸ್ಲಿಂ ಬಾಂಧವರು ಆಚರಿಸುವ ಪ್ರಮುಖ ಹಬ್ಬಗಳಲ್ಲೊಂದಾದ ಬಕ್ರೀದ್ ಅಥವಾ ಈದ್–ಉಲ್–ಅಧಾ ಹಿನ್ನಲೆಯಲ್ಲಿ ಮೈಸೂರಿನ ಬನ್ನಿಮಂಟಪ ಎಲ್‌ಐಸಿ ವೃತ್ತ(ಮಿಲೇನಿಯಂ ಸರ್ಕಲ್)ದಲ್ಲಿ ಕಳೆದೊಂದು ವಾರದಿಂದ ಕುರಿಗಳ ಭರ್ಜರಿ ವ್ಯಾಪಾರ ನಡೆಯುತ್ತಿದೆ.

ಪ್ರತಿ ವರ್ಷದಂತೆಯೇ ಈ ಬಾರಿಯೂ ಸಂಜೆಯಾಗುತ್ತಲೇ ಎಲ್‌ಐಸಿ ವೃತ್ತ ಕುರಿಗಳ ವ್ಯಾಪಾರ ಸ್ಥಳವಾಗಿ ಮಾರ್ಪಾಡಾಗುತ್ತಿದ್ದು, ನಂಜನಗೂಡು, ಮಂಡ್ಯ, ಶ್ರೀರಂಗಪಟ್ಟಣ, ಬನ್ನೂರು, ಪಾಂಡವಪುರ, ಕೆಆರ್‌ಎಸ್, ಮದ್ದೂರು, ತಿ.ನರಸೀಪುರ, ಹೊಳೆನರಸೀಪುರ, ಚಾಮರಾಜನಗರ ಸೇರಿದಂತೆ ರಾಜ್ಯದ ವಿವಿಧೆಡೆ ಭಾಗಗಳಿಂದ ಬರುತ್ತಿರುವ ವ್ಯಾಪಾರಸ್ಥರು ತಾವು ಸಾಕಿದ ವಿವಿಧ ತಳಿಯ ಕುರಿಗಳನ್ನು ಮಾರಾಟ ಮಾಡುತ್ತಿದ್ದಾರೆ.

ಜೂ.17ರ ಬಕ್ರೀದ್‌ಗೆ ಭರ್ಜರಿ ತಯಾರಿ ನಡೆಯುತ್ತಿದ್ದು, ಬಂಡೂರು, ಬನ್ನೂರು, ಅಮೀನಗಢ ತಳಿ ಯಲಗಾ ಸೇರಿದಂತೆ ವಿವಿಧ ಬಗೆಯ ತಳಿಗಳ ಕುರಿ ವ್ಯಾಪಾರ ಜೋರಾಗಿದೆ. ಮೈಸೂರು ಮಾತ್ರವಲ್ಲದೆ ಜಿಲ್ಲೆಯ ಹಲವೆಡೆಯೂ ಕುರಿಗಳ ವ್ಯಾಪಾರ ನಡೆಯುತ್ತಿದೆ. 30 ರಿಂದ 40 ಕೆಜಿ ತೂಕದ ಜೋಡಿ(ಎರಡು) ಕುರಿಗಳಿಗೆ 50 ರಿಂದ ಲಕ್ಷ ರೂ.ವರೆಗೆ ಮಾರಾಟ ಮಾಡುತ್ತಿದ್ದು, ಖರೀದಿ ಮಾಡುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಎಲ್‌ಐಸಿ ವೃತ್ತದಲ್ಲಿ ಕಳೆದೊಂದು ವಾರದಿಂದಲೂ ಕುರಿ ವ್ಯಾಪಾರ ಮಾಡುತ್ತಿದ್ದೇವೆ. ಜೋಡಿಗೆ 75 ಸಾವಿರ ಹೇಳುತ್ತಿದ್ದೇವೆ. ಇದುವರೆಗೆ ಯಲಗಾ ತಳಿಯ 40 ಕುರಿಗಳು ಮಾರಾಟವಾಗಿವೆ. ಕಳೆದ ವರ್ಷವೂ 50 ಕುರಿಗಳ ವ್ಯಾಪಾರ ಮಾಡಿದ್ದೆವು. ಬೆಂಗಳೂರು, ಶ್ರೀರಂಗಪಟ್ಟಣ ಸೇರಿದಂತೆ ಹಲವೆಡೆ ನಡೆಯುವ ಜಾತ್ರೆಗಳಲ್ಲಿಯೂ ಕುರಿಗಳನ್ನು ಮಾರಾಟ ಮಾಡುತ್ತೇವೆ ಎಂದು ನಂಜನಗೂಡಿನ ಕುರಿ ವ್ಯಾಪಾರಿ ಮಂಜುನಾಥ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವ್ಯಾಪಾರ ಪರವಾಗಿಲ್ಲ. ಒಂದೊಂದು ಮರಿಗೆ ಹತ್ತು ಸಾವಿರ ಕೊಟ್ಟು ತಂದು ಬೆಳೆಸಿದ್ದೇವೆ. ಬಂಡೂರು ತಳಿಯ ಒಂದು ಕುರಿಗೆ 45 ಸಾವಿರ, ಜೊತೆಗೆ 65 ರಿಂದ 70 ಸಾವಿರ ರೂ. ಮಾರಾಟ ಮಾಡುತ್ತಿದ್ದೇವೆ ಎಂದು ಬನ್ನೂರಿನ ಕಗ್ಗಲೀಪುರದ ಮನೋಜ್ ತಿಳಿಸಿದರೆ, ಮೂರು ದಿನದಿಂದ ವ್ಯಾಪಾರ ಮಾಡುತ್ತಿದ್ದೇವೆ. ಬರೀ ಕೊಂಡುಕೊಳ್ಳೋರಿಗಿಂತ ಕೇಳೋರೆ ಜಾಸ್ತಿ. ಒಂದು ರೀತಿ ಎಗ್ಸಿಬಿಷನ್ ಆಗಿದೆ ಎಂದು ಬಾಬು ಎಂಬುವರು ತಿಳಿಸಿದರು.

ಶ್ರವಣಬೆಳಗೊಳ ಭಾಗದ ತಳಿಯ ಟಗರುಗಳು ನೋಡಲು ಲುಕ್ ಆಗಿವೆ. ಒಂದಕ್ಕೆ 15–16 ಸಾವಿರಕ್ಕೆ ಕೇಳುತ್ತಾರೆ. ಬಕ್ರೀದ್ ಹಬ್ಬ ಮಾಡೋದು ಮುಸ್ಲಿಂಮರಾದರೆ ವ್ಯಾಪಾರ ನಮ್ಮದು. ನಾವು–ಅವರು ಅಣ್ಣ–ತಮ್ಮಂದಿರಂತೆ ಎಂದು ಚಿನಕುರಳಿಯಿಂದ ಕುರಿ ಮಾರಾಟಕ್ಕೆ ಬಂದಿದ್ದ ಗೋಪಿ ತಿಳಿಸಿದರೆ, 8 ಕೆಂಗುರಿ ತಳಿ ಕುರಿಗಳನ್ನು ಇವತ್ತೇ ಮೊದಲು ತಂದು ವ್ಯಾಪಾರ ಮಾಡುತ್ತಿದ್ದೇವೆ. ನಾವು 27–28 ಸಾವಿರ ಅಂದರೆ, ಕೇಳೋರು 20–21 ಸಾವಿರ ಅಂತಾರೆ. ಇನ್ನೂ ಒಂದು ಕುರಿ ಮಾರಾಟ ಆಗಿಲ್ಲ ಎಂದು ಮಂಡ್ಯದ ಕುರಿ ವ್ಯಾಪಾರಿ ಮಹೇಶ್ ಮಾಹಿತಿ ನೀಡಿದರು.

ಸಂಚಾರಕ್ಕೆ ತೊಂದರೆ: ಎಲ್‌ಐಸಿ ಸರ್ಕಲ್‌ನಲ್ಲಿ ಕುರಿಗಳ ಹಿಂಡು ಜಾಸ್ತಿಯಾಗುತ್ತಿದ್ದು, ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ. ರಸ್ತೆಯ ಇಕ್ಕೆಲಗಳಲ್ಲಿ ಕುರಿಗಳನ್ನು ಹಿಡಿದು ವ್ಯಾಪಾರಸ್ಥರು ತಿರುಗಾಡುತ್ತಿರುವುದರಿಂದ ಹಾಗೂ ವ್ಯಾಪಾರಕ್ಕೆ ಬರುವವರು ರಸ್ತೆ ಬದಿಯಲ್ಲೇ ತಮ್ಮ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿರುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಕುರಿ ವ್ಯಾಪಾರಕ್ಕೆ ಸೂಕ್ತ ಸ್ಥಳ ಇಲ್ಲದಿರುವುದು ತೊಂದರೆಗೆ ಕಾರಣವಾಗಿದೆ. ಜಿಲ್ಲಾಡಳಿತ ಈ ಕುರಿತು ಗಮನಿಸಬೇಕು ಎಂದು ಕೆಲವರು ಒತ್ತಾಯಿಸಿದ್ದಾರೆ.

ಮೈಸೂರಿನ ಹೆರಿಟೇಜ್ ಹೌಸ್‌ನಲ್ಲಿ ಕಲಾ ಪ್ರದರ್ಶನ



ಮೈಸೂರು, ಜೂ. 14– ಮೈಸೂರಿನ ಸರಸ್ವತಿಪುರಂನ ಅಗ್ನಿಶಾಮಕ ಠಾಣೆ ಹತ್ತಿರದ ರಮ್ಯಾ ಹೋಟೆಲ್ ಎದುರಿನ ಹೆರಿಟೇಜ್ ಹೌಸ್‌ನಲ್ಲಿ ಕಲಾವಿದರಾದ ನಹುಷ ಕೆ., ರಕ್ಷಿತ್ ಕೆ. ಹಾಗೂ ಶೈಲೇಶ್ ಬಿ.ಆರ್. ಅವರ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ. ಮೈಸೂರು ಆರ್ಟ್ ಸೆಂಟರ್ ಆಯೋಜಿಸಿರುವ ಈ ಕಲಾ ಪ್ರದರ್ಶನ ಜೂ.17ರವರೆಗೆ ಬೆಳಗ್ಗೆ 10.30 ರಿಂದ ಸಂಜೆ 7ರವರೆಗೆ ನಡೆಯಲಿದೆ.

ಥ್ರಿ ಫೋಲ್ಡ್ ತಂಡ ಕಟ್ಟಿಕೊಂಡಿರುವ ನಹುಷ ಕೆ., ರಕ್ಷಿತ್ ಕೆ. ಹಾಗೂ ಶೈಲೇಶ್ ಬಿ.ಆರ್. ತಮ್ಮ ಕಲಾಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದ ನಹುಷ ಅವರು ಓದಿದ್ದು, ನಗರದ ಕಾವಾದಲ್ಲಿ. ನಂತರ ಬೆಂಗಳೂರಿನ ವಿವಿಯಲ್ಲಿ ಚಿತ್ರಕಲೆ ವಿಷಯದಲ್ಲಿ ಎಂ.ಎ ಪದವಿ ಪಡೆದು ಜಾಹೀರಾತು ಕಂಪನಿಯಲ್ಲಿದ್ದರು. ಸದ್ಯ ತಮ್ಮ ತೋಟ ನೋಡಿಕೊಳ್ಳುತ್ತ ಚಿತ್ರಕಲೆ ಮುಂದುವರೆಸಿದ್ದಾರೆ. ಅವರ ಚಿತ್ರಕಲಾ ಪ್ರದರ್ಶನದಲ್ಲಿ ಮಲೆನಾಡಿನ ಅನಾವರಣವಿದೆ. ಮಲೆನಾಡಿನ ಜೀವನಶೈಲಿ, ಮನುಷ್ಯ ಹಾಗೂ ಪ್ರಾಣಿಗಳ ಸಂಘರ್ಷವನ್ನು ಢಾಳ ಬಣ್ಣಗಳ ಮೂಲಕ ಚಿತ್ರಿಸಿದ್ದಾರೆ.


ದ.ಕ.ಜಿಲ್ಲೆಯ ಗುರುವಾಯನಕೆರೆಯ ರಕ್ಷಿತ್ ಕಡ್ಲಾರ ಅವರು ಕಾವಾದಲ್ಲಿ ಪದವಿ ಹಾಗೂ ಎಂ.ಎ ಪದವಿ ಪಡೆದು ಕೃಷಿ ಜೊತೆಗೆ ಕಲಾಭ್ಯಾಸ ಕೈಗೊಂಡಿದ್ದಾರೆ. ಚಿತ್ರಕಲೆ ಹಾಗೂ ಶಿಲ್ಪಕಲೆಯಲ್ಲಿ ಶೂನ್ಯದ ಮಹತ್ವವನ್ನು ಅವರು ಬಿಂಬಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ತುಮರಿಯ ಶೈಲೇಶ್ ಅವರು ಕಾವಾದಲ್ಲಿ ಪದವಿ ಪಡೆದು, ಬರೋಡಾದಲ್ಲಿ ಎಂ.ಎ ಪದವಿ ಪಡೆದಿದ್ದಾರೆ. ಸದ್ಯ ದೆಹಲಿ ವಾಸಿಯಾದ ಅವರು, ದೇಶದ ಹಲವೆಡೆ ಅಲ್ಲದೆ ಕೊರಿಯಾದಲ್ಲೂ ತಮ್ಮ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದ್ದಾರೆ. ಯಂತ್ರಗಳನ್ನೇ ಶಿಲ್ಪಗಳಾಗಿ ರೂಪಿಸಿರುವ ಅವರು, ಚಿತ್ರಕಲೆಯಲ್ಲಿ ಸಂಭಾಷಣೆ ರಚಿಸಿದ್ದಾರೆ.

ಜೂ.23, ಕರ್ನಾಟಕ ಫ್ಯಾಷನ್ ಶೋ

ಮೈಸೂರು, ಜೂ.14(ಜಿಎ)–ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತಿನ ವತಿಯಿಂದ ಜೂ.23ರಂದು ನಗರದ ಪುರಭವನದಲ್ಲಿ ಕರ್ನಾಟಕ ಫ್ಯಾಷನ್ ಶೋ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪರಿಷತ್‌ನ ಮಹಿಳಾ ಘಟಕದ ನಗರಾಧ್ಯಕ್ಷೆ ಡಾ.ಮೌಲ್ಯ ಜೈಕುಮಾರ್ ಈ ವಿಷಯ ತಿಳಿಸಿ, ಪರಿಷತ್ ವತಿಯಿಂದ ಇದು ಮೂರನೇ ವರ್ಷದ ಫ್ಯಾಷನ್ ಶೋ ಆಗಿದ್ದು, ಸಾಂಸ್ಕೃತಿಕ ವಸ್ತ್ರ ಧರಿಸಿ ರಾಂಪ್ ಮೇಲೆ ಹೆಜ್ಜೆ ಹಾಕಬಹುದು. ಮೂರು ವಿಭಾಗದಲ್ಲಿ ಶೋ ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ 88676 88676 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ತೇಜಸ್ ಪೃಥ್ವಿರಾಜ್, ಶೋಭಾ ಮತ್ತಿತರರು ಉಪಸ್ಥಿತರಿದ್ದರು

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.06.2024 ಶನಿವಾರ, ಮಳೆ ನಕ್ಷತ್ರ: ಮೃಗಶಿರ, 08.06.2024 ರಿಂದ 21.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸೋರಿಯಾಸಿಸ್ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಮಹಾಜನ ಕಾನೂನು ಕಾಲೇಜು :** ಕರ್ನಾಟಕ ರಾಜ್ಯ ಅಂತರ ಕಾನೂನು ವಿಶ್ವವಿದ್ಯಾನಿಲಯ ಮೈಸೂರು ವಲಯ 8ನೇ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಮಹಿಳೆಯರು ಮತ್ತು ಪುರುಷರ ಆಯ್ಕೆ ಪ್ರಕ್ರಿಯೆ, ಉದ್ಘಾಟನೆ : ಮಹಾಜನ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಉಪಸ್ಥಿತರು : ಮಹಾಜನ ಕಾನೂನು ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ಕೆ. ಸೌಮ್ಯ, ದೈಹಿಕ ಶಿಕ್ಷಣ ವಿಭಾಗದ ಸಂಯೋಜಕ ಸಿದ್ದರಾಜು, ಸ್ಥಳ: ಓವಲ್ ಮೈದಾನ, ಮೈಸೂರು ವಿಶ್ವವಿದ್ಯಾನಿಲಯ, ಬೆಳಗ್ಗೆ 9.30ಕ್ಕೆ.

■ **ಜೆಎಸ್‌ಎಸ್ ಪ್ರೌಢಶಾಲೆ, ಶಕ್ತಿನಗರ, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ:** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ: ಪ್ರೌಢಶಾಲೆ ಮುಖ್ಯ ಶಿಕ್ಷಕ ಡಿ.ನಾಗರಾಜಪ್ಪ, ಅಭಿನಂದನಾ ಭಾಷಣ: ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು: ಡಾ.ಜೆ.ಪ್ರಸನ್ನಕುಮಾರ್, ಕೆರೋಡಿ ಎಂ.ಲೋಲಾಕ್ಷಿ, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಸಿದ್ದರಾಮಯ್ಯ, ಡಾ.ಜಮುನಾ ರಾಣಿ ಮಿರ್ಲೆ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಕಾವೇರಿ ಬಳಗದ ಅಧ್ಯಕ್ಷೆ ಎಂ.ಕೆ.ಕಾವೇರಿಯಮ್ಮ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ಶಕ್ತಿನಗರ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಕಾನೂನು ಕಾಲೇಜು:** ಕೆ.ಪುಟ್ಟಸ್ವಾಮಿಯವರ ನೆನಪಿಗಾಗಿ 5ನೇ ದತ್ತಿ ಉಪನ್ಯಾಸ ಕಾರ್ಯಕ್ರಮ, ವಿಷಯ: ಸಾಂವಿಧಾನಿಕ ಮೌಲ್ಯಗಳು, ದತ್ತಿ ಉಪನ್ಯಾಸ: ಕರ್ನಾಟಕ ಉಚ್ಚ ನ್ಯಾಯಾಲಯ ವಿಶ್ರಾಂತ ನ್ಯಾಯಮೂರ್ತಿ ಹೆಚ್. ಬಿಲ್ಲಪ್ಪ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಉಪಸ್ಥಿತರು: ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ವಿದ್ಯಾವರ್ಧಕ ಕಾನೂನು ಕಾಲೇಜು ಸಿಎಂಸಿ ಅಧ್ಯಕ್ಷ ಎಸ್. ಶಿವಲಿಂಗಯ್ಯ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು:** ಡ್ರಗ್ ಡಿಸ್ಕವರಿ ಫ್ರಂ ಇಂಡಿಯನ್ ಟ್ರೇಡಿಷನಲ್ ಮೆಡಿಸಿನ್ಸ್ ಅಂಡ್ ರಿವರ್ಸ್ ಫಾರ್ಮಾಕೋಲಜಿ ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಚಾಮರಾಜನಗರ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್. ಚಂದ್ರಶೇಖರ್, ಸರ್ಕಾರಿ ನೇಚರ್ ಕ್ಯೂರ್ ಅಂಡ್ ಯೋಗ ಕಾಲೇಜು ಪ್ರಿನ್ಸಿಪಾಲ್ ಡಾ. ಗಜಾನನ ಹೆಗ್ಡೆ, ಬೆಂಗಳೂರು ಮಲ್ಲಿಗೆ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್. ಶಿವಕುಮಾರಸ್ವಾಮಿ, ಬೆಳಗಾವಿ ಕೆಎಲ್‌ಇ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಸುನಿಲ್ ಎಸ್. ಜಲಾಲ್‌ಪುರೆ, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಷಿ, ಸ್ಥಳ: ಪ್ರೊ. ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್, ಬೆಳಗ್ಗೆ 10.30ಕ್ಕೆ.

■ **ರಾಜೀವ್ ಸ್ನೇಹ ಬಳಗ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ :** ಲಕ್ಷ ವೃಕ್ಷ ಯೋಜನಾ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸಸಿ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ: ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ, ಸಸ್ಯ ಸಂಭ್ರಮ ಕಿರು ಹೊತ್ತಿಗೆ ಬಿಡುಗಡೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು: ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಸಿರಿ ಸಂವರ್ಧನ ಪ್ರಶಸ್ತಿ ಪ್ರದಾನ: ಕನ್ನಡ ಪ್ರಭ ಪ್ರಧಾನ ಸಂಪಾದಕ ರವಿ ಹೆಗಡೆ, ಅಧ್ಯಕ್ಷತೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಅತಿಥಿಗಳು: ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಎಂ.ಮಾಲತಿ ಪ್ರಿಯಾ, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಾದೇಶಿಕ ನಿರ್ದೇಶಕ ಬಿ. ಜಯರಾಮ ನೆಲ್ಲಿತ್ತಾಯ, ಪ್ರಶಸ್ತಿ ಪುರಸ್ಕೃತರು : ಸಸ್ಯ ಸಂರಕ್ಷಕ ರಾಮೇಗೌಡ, ಸಸ್ಯ ಸಂವರ್ಧಕ ವಿ. ಶ್ರೀನಿವಾಸರಾಜು, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಭವನ, ಬೆಳಗ್ಗೆ 10.30ಕ್ಕೆ.

■ **ಸೆಂಟರ್ ಫಾರ್ ಜಿಯೋಇನ್‌ಫರ್‌ಮೆಟಿಕ್ಸ್ ಟೆಕ್ನಾಲಜಿ, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ :** ಪ್ರೊ. ರಾಮು ಅವರ ಅಭಿನಂದನಾ ಸಮಾರಂಭ, ಅಭಿನಂದಿಸುವವರು : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಭಿನಂದನೆ : ಪ್ರೊ. ರಾಮು, ಮುಖ್ಯ ಅತಿಥಿಗಳು : ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ವಸಂತಕುಮಾರನ್, ಪ್ರೊ. ಬಾಲಸುಬ್ರಮಣ್ಯಂ, ಅಧ್ಯಕ್ಷತೆ : ಹಿರಿಯ ಭೂಗೋಳಶಾಸ್ತ್ರ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರೊ. ಸಿ. ಚೌಡಯ್ಯ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಶ್ರೀ ವೈಷ್ಣವ ಸಾಮೂಹಿಕ ಉಪನಯನ ಸಮಿತಿ :** ಶ್ರೀ ವೈಷ್ಣವ ವಟುಗಳಿಗೆ ಸಾಮೂಹಿಕ ಉಪನಯನ, ಸ್ಥಳ: ಶ್ರೀ ರಾಮಮಂದಿರ, ಕೃಷ್ಣಮೂರ್ತಿಪುರಂ.

■ **ರಾಗಾ ಮ್ಯೂಸಿಕ್ ಅಕಾಡೆಮಿ :** ವಿದುಷಿ ಗಿರಿಜಾ ರವಿಶಂಕರ್ ಅವರಿಂದ ಸಂಗೀತ ಕಾರ್ಯಕ್ರಮ, ವಿದ್ವಾನ್ ಅಮೋಘ್ ನದಾದುರ್–ವಯೋಲಿನ್, ವಿದ್ವಾನ್ ಪವನ್ ಮಾಧವ್ ಮಸೂರ್–ಮೃದಂಗ, ವಿದ್ವಾನ್ ಶ್ರೀನಿಧಿ ಆರ್. ಕೌಂಡಿನ್ಯ–ಘಟಂ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣ ಶಾಸ್ತ್ರಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮ, ವಿದ್ವಾನ್ ಎನ್.ಹೆಚ್. ಹರಿ ಭಟ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ಸ್ಥಳ: ಶ್ರೀ ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾ ಭವನ :** 129ನೇ ಸಾಂಸ್ಕೃತಿಕ ಕಾರ್ಯಕ್ರಮ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಮತ್ತು ಭಕ್ತಿ ಸಂಗೀತ. ಸಿದ್ಧಾರ್ಥ ಬೆಳ್ಮಣ್ಣು ಅವರಿಂದ ಗಾಯನ, ರೂಪಕ್ ಕಲ್ಲೂರಕರ್–ತಬಲ, ಭರತ್ ಹೆಗ್ಡೆ–ಹಾರ್ಮೋನಿಯಂ, ಸ್ಥಳ: ಭಾರತೀಯ ವಿದ್ಯಾ ಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ಸಂಗೀತ ಕಾರ್ಯಕ್ರಮ, ಚಿಲ್ಕುಂದ ಸಹೋದರಿಯರಾದ ವಿದುಷಿ ಲಕ್ಷ್ಮೀ ನಾಗರಾಜ ಮತ್ತು ವಿದುಷಿ ಇಂದು ನಾಗರಾಜ ಅವರಿಂದ ದ್ವಂದ್ವ ಗಾಯನ, ವಿದ್ವಾನ್ ಕೇಶವ ಮೋಹನ ಕುಮಾರ – ಪಿಟೀಲು, ವಿದ್ವಾನ್ ತುಮಕೂರು ರವಿಶಂಕರ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ಯೋಗದ ಸತ್ಸಂಗ ಸೊಸೈಟಿ ಆಫ್ ಇಂಡಿಯಾ :** ಯೋಗ–ಧ್ಯಾನದ ಮೂಲಕ ಸಮತೋಲನ ಹಾಗೂ ಪ್ರಶಾಂತತೆಯನ್ನು ಕಂಡುಕೊಳ್ಳುವುದು ಕುರಿತು ಉಪನ್ಯಾಸ, ಸ್ಥಳ: ಯೋಗದ ಸತ್ಸಂಗ ಧ್ಯಾನ ಕೇಂದ್ರ, ಸರಸ್ವತಿಪುರಂ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI "ಶೋಧ – ಅನುಶೋಧ" ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು – CSIR, CFTRI, Mysuru, 6.40 ಪದ ಸಂಸ್ಕೃತಿ, ಪ್ರಸ್ತುತಿ: ಡಾ. ಕೆ.ಎಲ್. ಪ್ರಸನ್ನಾಕ್ಷಿ, 6.50 ರೈತರಿಗೆ ಸಲಹೆ, 7.15 ಯೋಗೋತ್ಸವ: ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ. ಪ್ರಸ್ತುತಿ : ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ಸುನೀಲ್ – ನಾಗಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಇಂದ್ರಾಣಿ ಅನಂತರಾಮ್, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ–ನಂಜನಗೂಡು ತಾಲೂಕು ಹಳ್ಳದ ಕೇರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ. 4.00 ನಾಟಕ– ಶಹನಾಯ್", ಮೂಲ ಕಿರುಗತೆ: ಕೃಷ್ಣಮೂರ್ತಿ ಪುರಾಣಿಕ್, ರಚನೆ ಹಾಗೂ ನಿರ್ಮಾಣ: ಡಾ. ಎನ್. ರಘು, 4.30 ನೆನಪಿನಂಗಳ: 'ಸಾಹಿತ್ಯ ಸ್ಮೃತಿ'–ತ. ರಾ. ಸುಬ್ಬರಾಯರ ಭಾಷಣದ ಧ್ವನಿ ಮುದ್ರಣ, 6.50 ಕೃಷಿರಂಗ : ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಮೈಸೂರು ತಾಲ್ಲೂಕು ಜಯಪುರ ಹೋಬಳಿ ಅನಗಳ್ಳಿಯ ಚಂದ್ರೇಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ. 8.00 ಯುವವಾಣಿ, 9.30'ಸುರಕ್ಷಿತ ಅಂತರ್ಜಾಲ' ಬಾನುಲಿ ಮಾಲಿಕೆಯಲ್ಲಿ–ಅಂತರ್ಜಾಲದಲ್ಲಿ ನಾನು ಹೇಗೆ ಸುರಕ್ಷಿತಳಾಗಿದ್ದೇನೆ. ಮಾತನಾಡುತ್ತಾರೆ: ವಕೀಲರಾದ ಸಿರಿ ವಾನಳ್ಳಿ. 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸೌಮ್ಯಜಿತ್ ಪಾಲ್ –ಸಿತಾರ್ ವಾದನ

ಇಂದು ಮೈಸೂರಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ಭೇಟಿ



ಮೈಸೂರು, ಜೂ.14– ಕೇಂದ್ರ ಸಚಿವರಾಗಿ ಮೊದಲ ಬಾರಿ ರಾಜ್ಯಕ್ಕೆ ಆಗಮಿಸಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಶನಿವಾರ ಮೈಸೂರಿಗೂ ಭೇಟಿ ನೀಡಲಿದ್ದಾರೆ.

ಮಂಡ್ಯದ ಕಾರ್ಯಕ್ರಮದ ನಂತರ ರಸ್ತೆ ಮಾರ್ಗವಾಗಿ ರಾತ್ರಿ 7.30ಕ್ಕೆ ಮೈಸೂರಿಗೆ ಆಗಮಿಸಿ, ಚಾಮುಂಡಿಬೆಟ್ಟ ತಪ್ಪಲಿನ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆಯಲಿದ್ದಾರೆ. ಭಾನುವಾರ ಮಧ್ಯಾಹ್ನ 2ಕ್ಕೆ ಚಾಮುಂಡಿಬೆಟ್ಟಕ್ಕೆ ತೆರಳಿ ದೇವಿಯ ದರ್ಶನ ಪಡೆಯಲಿದ್ದಾರೆ. ಮೈಸೂರು–ಬೆಂಗಳೂರು ಮುಖ್ಯರಸ್ತೆ ಮಣಿಪಾಲ್ ಆಸ್ಪತ್ರೆ ಬಳಿ ಅದ್ದೂರಿಯಾಗಿ ಸ್ವಾಗತಿಸಲು ಜೆಡಿಎಸ್ ಕಾರ್ಯಕರ್ತರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿದುಬಂದಿದೆ.

ಕಾವಾ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಸಂಸ್ಥೆಯು 2024–25ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ.ವಿ.ಎ. (ದೃಶ್ಯಕಲೆ) ಸ್ನಾತಕ ಪದವಿ ಕೋರ್ಸಿನ ಪ್ರವೇಶಾತಿಗಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಜೂನ್ 19ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಪ್ರವೇಶಾತಿ ದಾಖಲಾತಿಗಳ ಪರಿಶೀಲನೆ, ಪ್ರವೇಶ ಪರೀಕ್ಷೆ, ಮೌಖಿಕ ಸಂದರ್ಶನ ಜೂ.20ರಂದು ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821 2438931 ಅನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಮೈಸೂರಲ್ಲಿ ವೃದ್ಧೆಯ ಸರ ಅಪಹರಣ



ಘಟನಾ ಸ್ಥಳಕ್ಕೆ ಎಸಿಪಿ ರಮೇಶ್ ಸೇರಿದಂತೆ ವಿದ್ಯಾರಣ್ಯಪುರಂ ಪೊಲೀಸರು ಭೇಟಿ ನೀಡಿದರು.

ಮೈಸೂರು, ಜೂ.14(ಎಸ್‌ಪಿಎನ್)– ವೃದ್ಧೆಯೊಬ್ಬರ ಚಿನ್ನದ ಸರವನ್ನು ಸರಗಳ್ಳರು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರು ನಗರದ ವಿದ್ಯಾರಣ್ಯಪುರಂ ಸಾರ್ವಜನಿಕ ಹಾಸ್ಟೆಲ್ ರಸ್ತೆ 2ನೇ ಮುಖ್ಯರಸ್ತೆಯಲ್ಲಿ ಶುಕ್ರವಾರ ಸುಮಾರು ರಾತ್ರಿ 7.30ರಲ್ಲಿ ನಡೆದಿದೆ. ವಿದ್ಯಾರಣ್ಯಪುರಂ 2ನೇ ಮುಖ್ಯರಸ್ತೆಯ ಸತ್ಯವತಿ(75) ಎಂಬುವರು 4ನೇ ಮುಖ್ಯರಸ್ತೆಯಲ್ಲಿರುವ ತಂಗಿ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ ಕಪ್ಪು ಬಣ್ಣದ ಆಕ್ಟಿವಾ ಹೊಂಡಾದಲ್ಲಿ ಬಂದು ಇಬ್ಬರು ಖದೀಮರು ಸತ್ಯವತಿಯವರ 50 ಗ್ರಾಂ ತೂಕದ ಚಿನ್ನದ ಸರ ಕಿತ್ತು ಪರಾರಿಯಾಗಿದ್ದಾರೆ

ಘಟನಾ ಸ್ಥಳಕ್ಕೆ ಎಸಿಪಿ ರಮೇಶ್, ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮೋಹಿತ್, ಸಿಬ್ಬಂದಿ ಹಾಗೂ 61ನೇ ವಾರ್ಡಿನ ನಗರ ಪಾಲಿಕೆ ಮಾಜಿ ಸದಸ್ಯ ಸುನಿಲ್ ಭೇಟಿ ನೀಡಿ ವಿವರ ಪಡೆದರು. ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೇಣುಕಾಸ್ವಾಮಿ ಹತ್ಯೆ; ಪಾರದರ್ಶಕ ತನಿಖೆಗೆ ಸಿಎಂ ಸೂಚನೆ ಸ್ವಾಗತಾರ್ಹ



ಮೈಸೂರು, ಜೂ.14– ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾರದರ್ಶಕ ತನಿಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಟ್ಟುನಿಟ್ಟಿನ ಸೂಚನೆ ನೀಡಿರುವುದು ಸ್ವಾಗತಾರ್ಹ ಎಂದು ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್ ಹೇಳಿದ್ದಾರೆ.

ಈ ನೆಲದ ಕಾನೂನು ಎಲ್ಲರಿಗೂ ಒಂದೇ. ರೇಣುಕಾಸ್ವಾಮಿಯನ್ನು ಅತ್ಯಂತ ಕ್ರೂರವಾಗಿ ಹತ್ಯೆ ಮಾಡಿರುವವರಿಗೆ ಕಠಿಣ ಶಿಕ್ಷೆ ಆಗಲೇಬೇಕು. ಬುದ್ಧಿವಾದ ಹೇಳಿ ಕ್ಷಮಿಸಬಹುದಾಗಿದ್ದ ತಪ್ಪಿಗೆ ಜೀವ ತೆಗೆದಿರುವುದು ಮಹಾಪರಾಧ. ಈ ಪ್ರಕರಣದಲ್ಲಿ ಪೊಲೀಸರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಿ, ಸತ್ಯಾಸತ್ಯತೆ ಹೊರತೆಗೆದು ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಬೇಕು ಎಂಬುದು ಮುಖ್ಯಮಂತ್ರಿಗಳು ಸೇರಿದಂತೆ ಇಡೀ ಸರ್ಕಾರದ ನಿಲುವಾಗಿದೆ. ತಪ್ಪಿತಸ್ಥರಿಗೆ ಶಿಕ್ಷೆ ನೀಡಲು ಕಾನೂನಿದೆ. ಆದರೆ ನೆಲದ ಕಾನೂನನ್ನೇ ಧಿಕ್ಕರಿಸಿ ಓರ್ವ ವ್ಯಕ್ತಿಯ ಹತ್ಯೆ ಮಾಡಿದವರಿಗೆ ಕಠಿಣ ಶಿಕ್ಷೆಯಾಗಲಿ. ಸರ್ಕಾರ ನೊಂದಿರುವ ರೇಣುಕಾಸ್ವಾಮಿ ಕುಟುಂಬದ ನೆರವಿಗೆ ನಿಲ್ಲಬೇಕು. ಈ ನಿಟ್ಟಿನಲ್ಲಿ ಸಾಂತ್ವನದ ಜೊತೆಗೆ ಕುಟುಂಬಕ್ಕೆ ನ್ಯಾಯ ಕೊಡಿಸುವಲ್ಲಿ ಮುಖ್ಯಮಂತ್ರಿಗಳು ಹಾಗೂ ಪೊಲೀಸರು ಮುಂದಾಗಿದ್ದಾರೆ ಎಂದು ವರುಣ ಮಹೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ : ಮದುವೆ ಆಗೋದಿದ್ರೆ ಈಗ್ಲೇ ಆಗಿಬಿಡು ಸಂತ.

ಸಂತ : ಯಾಕೋ?

ಗುಂಡ : ಯಾಕಂದ್ರೆ ಕೊರೊನಾ ಸಮಯ. ಈಗ ಎಲ್ಲಾ ಬ್ಯೂಟಿ ಪಾರ್ಲರ್ ಮುಚ್ಚಿರುತ್ತವೆ. ನಿನಗೆ ಮೋಸ ಆಗೋ ಚಾನ್ಸ್ ಇಲ್ಲ.

ಮೈಸೂರು ಮಿತ್ರ

ಶನಿವಾರ, 15 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಓ ದೇವರೇ... ನನ್ನ ನೆರಳಿಗೆ ಪ್ರಾಣ ಕೊಡು. ಏಕೆಂದರೆ ಈ ಪ್ರಪಂಚದಲ್ಲಿ ನನ್ನ ಬಿಟ್ಟು ಹೋಗದೇ ಇರುವುದು ನನ್ನ ನೆರಳು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾನು ಅಗೆಯುವಲ್ಲಿ ಕಲ್ಲು, ಅಜ್ಜ ಅಗೆಯುವಲ್ಲಿ ಮಣ್ಣು.

ನಿಮ್ಮ ಪತ್ರಗಳು

ಇನ್ನಾದರೂ ಸಹ ಸರ್ಕಾರ ಎಚ್ಚೆತ್ತುಕೊಳ್ಳಲಿ!

ಮಾನ್ಯರೆ,

ಈಗಾಗಲೇ ಲೋಕಸಭಾ ಚುನಾವಣೆಯು ಮುಗಿದಿದ್ದು, ಕಳೆದ 3–4 ತಿಂಗಳುಗಳಿಂದ ನಡೆಯುತ್ತಿದ್ದ ರಾಜಕೀಯ ಕೆಸರೆರಚಾಟಕ್ಕೆ ವಿರಾಮ ದೊರಕಿದೆ. ಸಧ್ಯಕ್ಕೆ ನಮ್ಮ ರಾಜಕೀಯ ಧುರೀಣರುಗಳಿಗೆ, ಸರ್ಕಾರದ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಇದ್ದ ಮಾನಸಿಕ ಉದ್ವೇಗ, ಆತಂಕ ಸ್ವಲ್ಪ ಕಡಿಮೆಯಾಗಿ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಇನ್ನು ಮೈಸೂರಿನ ಜನತೆಯು ಸಹ ನಿಧಾನವಾಗಿ ತಮ್ಮ ತಮ್ಮ ಕೆಲಸ ಕಾರ್ಯಗಳಿಗೆ ಮರಳುವಂತಾಗಿದೆ. ಆದರೆ ಇಷ್ಟು ಮಾತ್ರಕ್ಕೆ ಮೈಸೂರಿನ ಜನತೆ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಕಾರಣ, ಇಲ್ಲೊಂದು ಗಂಭೀರವಾದ ಸಮಸ್ಯೆ ಮೈಸೂರಿಗರನ್ನು ಹಲವು ವರ್ಷಗಳಿಂದ ಕಾಡುತ್ತಿದೆ. ಈ ಸಮಸ್ಯೆಯಿಂದ ಮೈಸೂರಿಗರ ತಲೆಯ ಮೇಲೆ ಕತ್ತಿ ತೂಗಾಡುತ್ತಿದ್ದು ಅದು ಯಾರಿಗೆ, ಯಾವ ಸಮಯದಲ್ಲಿ, ಎಷ್ಟರಮಟ್ಟಿಗೆ ಬೀಳು ವುದೋ ಯಾರೂ ಅರಿಯರು. ಅದನ್ನು ಊಹಿಸಿಕೊಳ್ಳಲೂ ಸಹ ಸಾಧ್ಯವಿಲ್ಲ.

ಅದೇನೆಂದರೆ, ಮೈಸೂರಿನ ಹೃದಯ ಭಾಗದಲ್ಲಿರುವ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳ ಪುನರ್ ನಿರ್ಮಾಣ ಕಾರ್ಯ. ಕಾರಣ ಇವರೆಡೂ ಕಟ್ಟಡಗಳು ತಮ್ಮ ಶತಮಾನದ ಹುಟ್ಟುಹಬ್ಬಗಳನ್ನು ಮುಗಿಸಿಕೊಂಡು ಮುಂದಿನ ಪುನರ್ ಜನ್ಮಕ್ಕಾಗಿ ಹಾತೊರೆಯುತ್ತಿವೆ. ಆದರೆ, ಇದಕ್ಕೆ ಮುಖ್ಯವಾಗಿ ನಮ್ಮ ಪರಿಸರವಾದಿಗಳ ಹೆಬ್ಬೆಟ್ಟಿನ ರುಜು ಸಹ ಅತ್ಯಂತ ಅವಶ್ಯವಾಗಿದೆ. ಹಾಗೂ ಈ ಸಮಸ್ಯೆಯನ್ನು ಮೈಸೂರು ನಗರ ಪಾಲಿಕೆಯು ಸಮರೋಪಾದಿಯಲ್ಲಿ ಮುಗಿಸಬೇಕಾಗಿರುವುದು ಇಂದಿನ ಅನಿವಾರ್ಯ ಎಂದೆನಿಸಿದೆ. ಈಗಾಗಲೇ ಎಲ್ಲೆಡೆ ಮಳೆಗಾಲ ಪ್ರಾರಂಭವಾಗಿ ಅನೇಕ ಹಳೆಯ ಕಟ್ಟಡಗಳು ಕುಸಿಯಲು ಶುರುವಾಗಿದ್ದು, ಇದನ್ನು ಮನಗಂಡು ಮೈಸೂರು ನಗರಪಾಲಿಕೆಯು ಈ ಕೂಡಲೇ ಅಲ್ಲಿರುವ ವ್ಯಾಪಾರಸ್ಥರುಗಳಿಗೆ, ಹೊಸ ಕಟ್ಟಡ ನಿರ್ಮಾಣವಾಗುವವರೆಗೆ ಸಮೀಪದಲ್ಲೇ ಸೂಕ್ತ ಸ್ಥಳವನ್ನು ನಿರ್ಮಿಸಿಕೊಟ್ಟು ಹಳೆಯ ಕಟ್ಟಡವನ್ನು ಕೆಡವಿ ನೂತನ ಕಟ್ಟಡವನ್ನು ಮೈಸೂರಿನ ಹಳೆಯ ಸಾಂಪ್ರದಾಯಿಕ ಶೈಲಿಯಲ್ಲೇ ನಿರ್ಮಿಸಿ, ಮೈಸೂರಿನ ಘನತೆಯನ್ನು ಉಳಿಸಿಕೊಂಡು ಮುಂದೆ ಆಗಬಹುದಾದ ಅನಾಹುತಗಳಿಗೆ ಈ ಕೂಡಲೇ ಪೂರ್ಣ ವಿರಾಮವನ್ನು ಹಾಕಲಿ ಎಂಬುದು ಕಳೆದ 65 ವರ್ಷಗಳಿಂದ ಮೈಸೂರಿನಲ್ಲಿ ನೆಲೆಸಿರುವ ಹಾಗೂ ಹಿರಿಯ ನಾಗರಿಕನಾದ ನನ್ನ ಅತ್ಯಂತ ಕಳಕಳಿಯ ಮನವಿ.

–ಎಸ್. ಹರೀಶ್ ಕಶ್ಯಪ್, ವಿದ್ಯಾರಣ್ಯಪುರಂ, ಮೈಸೂರು

ಸೆಲೆಬ್ರಿಟಿಗಳು ಮಾದರಿಯಾಗಿರಬೇಕು

ಮಾನ್ಯರೆ,

ಒಬ್ಬ ಸಾಮಾನ್ಯ ವ್ಯಕ್ತಿ ಸೆಲಿಬ್ರಿಟಿಯಾಗಬೇಕಾದರೆ ಅವರ ಪರಿಶ್ರಮ ಹಾಗೂ ಅವರ ಕೌಟುಂಬಿಕ ಹಿನ್ನೆಲೆ ಅಷ್ಟೇ ಅಲ್ಲದೆ ಅವರು ಗಳಿಸಿಕೊಂಡಿರುವ ಅಪಾರ ಅಭಿಮಾನಿ ಬಳಗ ಪ್ರಮುಖ ಕಾರಣವಾಗಲಿದೆ.


ಆದರೆ ಇತ್ತೀಚೆಗೆ ಕರ್ನಾಟಕದಲ್ಲಿ ದಿನನಿತ್ಯ ಸೆಲೆಬ್ರಿಟಿಗಳು ಮಾಡಿಕೊಳ್ಳುತ್ತಿರುವ ಎಡವಟ್ಟುಗಳು ಅವರ ಅಭಿಮಾನಿಗಳಿಗೆ ಅಪಥ್ಯವೆ ಸರಿ. ಹಾಸನದ ಮಾಜಿ ಸಂಸದ ಪ್ರಜ್ವಲ್ ಅತ್ಯಾಚಾರ ಪ್ರಕರಣ ಯುವ ಸಂಸದನ ರಾಜಕೀಯ ಜೀವನಕ್ಕೆ ಎಳ್ಳು ನೀರು ಬಿಡುವಂತೆ ಮಾಡಿತು. ಕ್ಯೂಟ್ ಕಪಲ್ ಎಂದೇ ಕರೆಸಿಕೊಂಡಿದ್ದ ರ‍್ಯಾಪ್ ಸಿಂಗರ್ ಚಂದನ್ ಶೆಟ್ಟಿ ಮತ್ತು ನಿವೇದಿತಾಗೌಡ ಕೇವಲ ಮೂರು ವರ್ಷದ ದಾಂಪತ್ಯ ಜೀವನಕ್ಕೆ ಮಂಗಳ ಹಾಡಿದರು. ಮೊದಲ ಚಿತ್ರದಲ್ಲೇ ಭರವಸೆ ಮೂಡಿಸಿದ್ದ ಯುವ ರಾಜ್‌ಕುಮಾರ್ ಸಹ ಇದೇ ದಾರಿ ತುಳಿದು ದೊಡ್ಡ ಮನೆಗೆ ಮುಜುಗರ ತಂದರು.

ಅಭಿಮಾನಿಗಳ ದಾಸ ಎನಿಸಿಕೊಂಡಿದ್ದ ಜನಪ್ರಿಯ ನಟ ದರ್ಶನ್ ತನ್ನ ಅಭಿಮಾನಿಯ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಕೋಟ್ಯಂತರ ಜನರ ದೃಷ್ಟಿಯಲ್ಲಿ ವಿಲನ್ ಆಗುತ್ತಿದ್ದಾರೆ.

ಈ ಎಲ್ಲಾ ಪ್ರಕರಣಗಳು ಲಕ್ಷಾಂತರ ಯುವ ಜನರನ್ನು ಆಕರ್ಷಿಸುವ ಸೆಲೆಬ್ರಿಟಿಗಳ ಸುತ್ತ ನಡೆದಿದ್ದು ಅವರನ್ನು ಯುವಜನರು ಅನುಕರಿಸುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಇತ್ತೀಚೆಗೆ ಸಾಮಾಜಿಕ ಜಾಲ ತಾಣಗಳಲ್ಲಿ ಈ ಪ್ರಕರಣಗಳ ಬಗ್ಗೆ ನಡೆಯುವ ಪರ – ವಿರೋಧ ಚರ್ಚೆಗಳು ಸಹ ಅಭಿಮಾನಿಗಳ ಅಂದ ಅಭಿಮಾನಕ್ಕೆ ಹಿಡಿದ ಕನ್ನಡಿಯಾಗಿವೆ. ಮನೋ ವಿಜ್ಞಾನಿಗಳ ಪ್ರಕಾರ ಇದನ್ನು ಕಲ್ಚರ್ ಬೌಂಡ್ ಸಿಂಡ್ರೋಮ್ ಎಂದು ಕರೆಯುತ್ತಾರೆ. ಗುಟ್ಕಾ, ಆನ್‌ಲೈನ್, ಜೂಜು, ಧೂಮಪಾನ, ಮದ್ಯಪಾನವನ್ನು ಪ್ರೋತ್ಸಾಹ ಮಾಡುವ ಜಾಹೀರಾತುಗಳನ್ನು ನೀಡುವ ಮುನ್ನ, ಅಪಹರಣ, ಕೊಲೆ, ಅತ್ಯಾಚಾರ, ದಾಂಪತ್ಯದಲ್ಲಿ ಅನೈತಿಕತೆಯಂತಹ ಅಪರಾಧಗಳಲ್ಲಿ ಪಾಲ್ಗೊಳ್ಳುವ ಮುನ್ನ ಸೆಲೆಬ್ರಿಟಿಗಳಾದವರೂ ತಮ್ಮನ್ನು ಈ ಮಟ್ಟಕ್ಕೆ ಬೆಳೆಸಿದ ಅವರ ಅಪಾರ ಅಭಿಮಾನಿಗಳ ಪ್ರೀತಿ ವಿಶ್ವಾಸಕ್ಕೆ ಗೌರವಿಸಿ ಅವರಿಗೆ ಮಾದರಿಯಾಗಬೇಕು. ಕ್ಷುಲ್ಲಕ ಕಾರಣಕ್ಕೆ ತಮ್ಮ ಅಮೂಲ್ಯ ಭವಿಷ್ಯವನ್ನು ಹಾಳು ಮಾಡಿಕೊಳ್ಳಬಾರದು. ಹಾಗೆ ಅಭಿಮಾನಿಗಳ ಅಭಿಮಾನ ಅತಿರೇಕವಾಗಬಾರದು.

–ನಾಗೇಂದ್ರ ಕಿಲಗೆರೆ, ಮೈಸೂರು

ಮೈಸೂರಿನ ರಸ್ತೆಗಳಲ್ಲೇ ದನ ಕರುಗಳ ವಾಸ



ಮಾನ್ಯರೇ,

ಜೂನ್ 13 ಗುರುವಾರದ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿ ಮೈಸೂರಿನ ರಸ್ತೆಯಲ್ಲೇ ಬಿಡಾರ ಹೂಡುವ ಬಿಡಾಡಿ ದನಗಳು ವಾಸ್ತವದ ಸಂಗತಿ. ಈ ಸಮಸ್ಯೆಯ ಸಚಿತ್ರ ವರದಿಗೆ ಮೈಸೂರು ಮಿತ್ರನಿಗೆ ಧನ್ಯವಾದಗಳು.

ಪ್ರಸ್ತುತ ಮೈಸೂರಿನ ಹೃದಯ ಭಾಗಗಳಲ್ಲೇ ಈ ಸಮಸ್ಯೆ ಅತೀ ಹೆಚ್ಚು. ದನ ಕರುಗಳನ್ನು ಹಾಲು ಕರೆದುಕೊಂಡು ಬೀದಿಗೆ ಬಿಟ್ಟು ಬಿಡುತ್ತಾರೆ. ಅವುಗಳು ರಸ್ತೆಯಲ್ಲೇ ಅಡ್ಡಾಡುತ್ತಾ ಸಿಕ್ಕ ಸಿಕ್ಕ ಆಹಾರ ಪದಾರ್ಥಗಳನ್ನು, ಪ್ಲಾಸ್ಟಿಕ್ ಇನ್ನಿತರೆ ತ್ಯಾಜ್ಯಗಳನ್ನು ತಿನ್ನುತ್ತವೆ. ಅಷ್ಟೇ ಅಲ್ಲ ರಸ್ತೆಯಲ್ಲೇ ಸಗಣಿ ಹಾಕುವುದರಿಂದ ಎಷ್ಟೋ ಜನ ವೃದ್ಧರು ಮಕ್ಕಳು ಜಾರಿ ಬಿದ್ದ ಘಟನೆಗಳಿವೆ. ಇನ್ನೊಂದು ವಿಷಾದದ ಸಂಗತಿ ಎಂದರೆ ಆಂಬುಲೆನ್ಸ್ ಬರುವಾಗ ದನ ಕರುಗಳು ಗಾಬರಿಯಿಂದ ಓಡುವ ಸನ್ನಿವೇಶ ನಿಜಕ್ಕೂ ಬೇಸರದ ವಿಚಾರ. ಮೂಕ ಪ್ರಾಣಿಗಳ ವೇದನೆಯೂ ಹೌದು. ಅಪಘಾತಕ್ಕೂ ಕಾರಣ. ದನ ಕರುಗಳನ್ನು ಸಾಕುವವರು ಕೇವಲ ಹಾಲಿಗೋಸ್ಕರ ಅಲ್ಲದೇ ಅವುಗಳನ್ನು ಜೋಪಾನವಾಗಿ ಪೋಷಿಸುವ ಜವಾಬ್ದಾರಿಯು ಇರಬೇಕು. ಮೈಸೂರು ಮಹಾನಗರ ಪಾಲಿಕೆ ಈ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ.

–ಪುಷ್ಪಲತಾ ಫಣಿರಾಜ್, ಅಗ್ರಹಾರ, ಮೈಸೂರು

ಕರುಣೆಗೆ ಜೀವ ತುಂಬಿದರೆ ಮನುಷ್ಯತ್ವ ಬದುಕುತ್ತದೆ...!



> ಸೃಷ್ಟಿಯಲ್ಲಿನ ಪ್ರತಿಯೊಂದು ಜೀವಿಗಳ ಹೃದಯಾಂತರಾಳವು ಫಲಭರಿತವಾದ ವನವಿದ್ದಂತೆ ಅಲ್ಲಿ ಪ್ರೀತಿ, ಕರುಣೆ, ಭಯ, ಕೋಪ, ತಾಪ, ಶಾಪ ಹೀಗೆ ಏನು ಬೆಳೆದರೂ ಅದೇ ಫಲವೇ ನಮ್ಮ ಮುಂದಿನ ದಿನಗಳಿಗೆ ಅನುಭವಿಸಲು ಸಿಗುವುದು. ಆದ್ದರಿಂದ ಯುಕ್ತವಾದುದನ್ನೇ ಬೆಳೆದರೆ ಅದರ ಶಕ್ತತೆಯಲ್ಲಿ ಬದುಕಲು ಸಾಧ್ಯವಾಗುತ್ತದೆ. ಕರುಣೆಯು ನಮ್ಮ ಮನದಲ್ಲಿದ್ದರೆ ಮತ್ತೊಬ್ಬರಿಗೆ ಎಂದಿಗೂ ನೋವನ್ನಾಗಲಿ, ಹಿಂಸೆಯನ್ನಾಗಲಿ ಕೊಡುವುದಿಲ್ಲ. ಇಂಥವರು ಒಂದು ವೇಳೆ ತಾವೇ ಇರುವಷ್ಟು ನೋವನ್ನು ಅನುಭವಿಸುತ್ತಾರೆ.

ಪ್ರತಿಯೊಂದು ಜೀವಿಯನ್ನು ಕರುಣೆಯಿಂದ ನೋಡಬೇಕು. ಹಾಗೆ ನೋಡಲು ನಮ್ಮೊಳಗೆ ಕರುಣೆ ಇರಬೇಕು. ಈ ಜಗತ್ತಿನಲ್ಲಿ ಮಗುವಾಗಿ ಜನಿಸುವ ವ್ಯಕ್ತಿಯು ಹುಟ್ಟುವಾಗಲೇ ಮನುಷ್ಯನಾಗಿರುವುದಿಲ್ಲ. ಮನುಷ್ಯನಾದಾಗಲೇ ಮಾನವ ಇತರ ಪ್ರಾಣಿಗಳಿಗೂ, ತನಗೂ ಇರುವ ಭಿನ್ನತೆ ಅರಿವಿಗೆ ಬರುತ್ತದೆ. ಯಾರಲ್ಲಿ ಎಲ್ಲರನ್ನು ಒಂದೇ ರೀತಿಯಿಂದ ಕಾಣುವ ಮನೋಭಾವ ಇರುವುದೋ ಅವರೇ ನಿಜವಾದ ಮನುಷ್ಯರು. ಈ ಮಾತುಗಳು ಮನುಷ್ಯ ರೂಪದ ಪ್ರಾಣಿಯಲ್ಲಿ ಹೊರಹೊಮ್ಮಬೇಕಾದ ಒಂದು ವಿಶಿಷ್ಟ ಮೌಲ್ಯವೇ ಕರುಣೆ. ಸಾಮಾನ್ಯವಾಗಿ ಕರುಣೆ ಎಂದರೆ ಅನುಕಂಪ, ದಯೆಯನ್ನು ತೋರುವ ಒಂದು ಕ್ರಿಯೆ ಎಂದು ಹೇಳುತ್ತಾರೆ. ಈ ಜಗತ್ತಿನ ಸರ್ವಜೀವಾತ್ಮಗಳನ್ನು ಸಮಾನವಾದ ರೀತಿಯಲ್ಲಿ ಕಂಡು ಸಹಾನುಭೂತಿಯನ್ನು ತೋರುವುದೇ ಕರುಣೆ. ಸ್ವಾರ್ಥ ಪ್ರಪಂಚದಲ್ಲಿ ಬದುಕುತ್ತಿರುವ ವ್ಯಕ್ತಿಯು ತನಗಾಗಿ ಎಲ್ಲವನ್ನು ಕಬಳಿಸುವ, ಮತ್ತೊಬ್ಬರು ಮಡಿದರೂ, ಹಿಂಸೆಯಲ್ಲಿ ವಿಲ–ವಿಲ ಎಂದು ಒದ್ದಾಡಿದರೂ ಸರಿಯೇ ಅದರ ಕಡೆ ಲಕ್ಷ್ಯ ಕೊಡದೆ ಕೇವಲ ತನ್ನಿಚ್ಛೆಗಾಗಿ, ತನ್ನ ಒಳಿತಿಗಾಗಿ ಮತ್ತೊಬ್ಬರನ್ನು ತುಳಿಯುವ ಸಂಸ್ಕೃತಿಯಿಂದ ಕರುಣೆಯು ಕನಿಕರವಿಲ್ಲದೆ ಕರಗಿಹೋಗುತ್ತಿದೆ. ಅದು ನಿಜವಾದ ಅರ್ಥದಲ್ಲಿ ಸ್ವಾರ್ಥದ ಬೆಂಕಿಯಲ್ಲಿ ಬಿದ್ದು ಒದ್ದಾಡುತ್ತಾ ದಹನವಾಗಿ ಕಮರುತ್ತಿದೆ. ಕರುಣೆ ತೋರುವವರನ್ನೇ ಅನುಮಾನದಿಂದ ನೋಡುವ ಮಟ್ಟಕ್ಕೆ ನಾವು ಇಂದು ಇಳಿದಿದ್ದೇವೆ. ಎಷ್ಟೇ ಸ್ವಾರ್ಥದ ಸಂಕುಚಿತ ಭಾವಗಳು ಕಾಣದ ಕೈಗಳಂತೆ ಕೆಲಸಮಾಡಿದರೂ ನಾವು ಎಂದಿಗೂ ನೊಂದವರ, ಕಷ್ಟದಲ್ಲಿ ಬೆಂದವರ, ಕಣ್ಣೀರ ಒದ್ದೆಯಲ್ಲಿ ಮರುಗುತ್ತಿರುವವರ ಬಗ್ಗೆ ಕರುಣೆ ತೋರದಿದ್ದರೆ ಮನುಷ್ಯರಾಗಿ ಬದುಕುತ್ತಿರುವುದು ಸಾರ್ಥಕತೆ ಎನಿಸುವುದಿಲ್ಲ.

ಕರುಣೆಗೆ ಮಾನವೀಯತೆ, ಮನುಷ್ಯತ್ವ, ಸಹಾನುಭೂತಿ, ಸಹೃದಯತೆ, ಹೃದಯವಂತಿಕೆ, ಸೌಜನ್ಯ, ಸಹನೆ, ಧಾರಾಳತನ, ಮೃದುಸ್ವಭಾವ ಎಂದೆಲ್ಲ ಸಮಾನ ಅರ್ಥಗಳಿಂದಲೂ ಕರೆಯಲಾಗುತ್ತದೆ. ತಾಯಿ ತನ್ನ ಕಂದಮ್ಮನಿಗೆ ತೋರುವ ಕರುಳ ಬಳ್ಳಿಯಂತಹ ಕರುಣೆ ಪ್ರತಿ ವ್ಯಕ್ತಿಯಲ್ಲು ವ್ಯಕ್ತವಾಗಬೇಕು. ಅಂದರೆ ತನ್ನಂತೆ ಪರರನ್ನು ಕಂಡು ಕಾಣುವ ಮನೋಭಾವ, ಮತ್ತೊಬ್ಬರ ಕಷ್ಟಕ್ಕೆ ಸ್ಪಂದಿಸುವ ಹೃದಯ ವೈಶಾಲ್ಯತೆ. ಮಾನವನ ಹೃದಯಾಂತರಾಳದಲ್ಲಿ ಹೊಮ್ಮಬೇಕಾದ ಒಂದು ಮಾನವೀಯ ಮೌಲ್ಯವೇ ಕರುಣೆ. ಸೃಷ್ಟಿಯಲ್ಲಿನ ಪ್ರತಿಯೊಂದು ಜೀವಿಗಳ ಹೃದಯಾಂತರಾಳವು ಫಲಭರಿತವಾದ ವನವಿದ್ದಂತೆ ಅಲ್ಲಿ ಪ್ರೀತಿ, ಕರುಣೆ, ಭಯ, ಕೋಪ, ತಾಪ, ಶಾಪ ಹೀಗೆ ಏನು ಬೆಳೆದರೂ ಅದೇ ಫಲವೇ ನಮ್ಮ ಮುಂದಿನ ದಿನಗಳಿಗೆ ಅನುಭವಿಸಲು ಸಿಗುವುದು. ಆದ್ದರಿಂದ ಯುಕ್ತವಾದುದನ್ನೇ ಬೆಳೆದರೆ ಅದರ ಶಕ್ತತೆಯಲ್ಲಿ ಬದುಕಲು ಸಾಧ್ಯವಾಗುತ್ತದೆ. ಕರುಣೆಯು ನಮ್ಮ ಮನದಲ್ಲಿದ್ದರೆ ಮತ್ತೊಬ್ಬರಿಗೆ ಎಂದಿಗೂ ನೋವನ್ನಾಗಲಿ, ಹಿಂಸೆಯನ್ನಾಗಲಿ ಕೊಡುವುದಿಲ್ಲ. ಇಂಥವರು ಒಂದು ವೇಳೆ ತಾವೇ ಇರುವಷ್ಟು ನೋವನ್ನು ಅನುಭವಿಸುತ್ತಾರೆ.

ಹನ್ನೆರಡನೇ ಶತಮಾನದ ವಿಶ್ವಗುರು, ಧರ್ಮಪಿತ, ಮಹಾಮಾನವತಾವಾದಿ, ಭಕ್ತಿಭಂಡಾರಿ ಎಂದು ಕರೆಸಿಕೊಂಡಿರುವ ಬಸವಣ್ಣನವರು ತಮ್ಮ ಹಲವಾರು ವಚನಗಳಲ್ಲಿ ಕರುಣೆಯ ಕಾರುಣ್ಯವನ್ನು ಚಿತ್ರಿಸುತ್ತಾರೆ.

ದಯವಿಲ್ಲದ ಧರ್ಮವಾವುದಯ್ಯ,
ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ,
ದಯವೇ ಧರ್ಮದ ಮೂಲವಯ್ಯ,
ಕೂಡಲ ಸಂಗಮದೇವನೆಂತೊಲಿವನಯ್ಯ

ಎಂದು ಹೇಳಿ ಎಲ್ಲ ಧರ್ಮಗಳ ಮೂಲ ಉದ್ದೇಶ ಸರ್ವಜೀವಗಳನ್ನು ದಯೆ, ಕರುಣೆ, ಅನುಕಂಪ, ಮಾನವೀಯತೆಯಿಂದ ಕಾಣುವುದಾಗಿದೆ. ನಿಜವಾದ ಧರ್ಮದ ನೆಲೆಯೇ ಕಂಡವರನ್ನು, ಕಾಣುವವರನ್ನು ಕರುಣಾ ಭಾವದಿಂದ ನೋಡುವುದು. ಭಕ್ತಿಯ ಕರುಣೆಯಿಂದ ನರನನ್ನು ಮಾತ್ರವಲ್ಲ ಹರನನ್ನು ಕೂಡ ಗೆಲ್ಲಬಹುದು. ಪ್ರೀತಿ–ಕರುಣೆಯಿದ್ದರೆ ಕ್ರೂರತ್ವದಿ ವರ್ತಿಸುವ ಮೃಗವು ಸಾದುವಾಗಲು ಸಾಧ್ಯವಿದೆ. ಅದಕ್ಕೆ ದ್ವೇಷದಿಂದ ದ್ವೇಷವನ್ನು ಗೆಲ್ಲಲಾಗದು. ಅಂತಃಕರಣ ಎಂತಹ ದ್ವೇಷವನ್ನು ಸೋಲಿಸಿ ಪ್ರೀತಿಯನ್ನು ಗೆಲ್ಲಿಸುತ್ತದೆ. ಈ ಕರುಣೆಯು ಎಲ್ಲ ವ್ಯಕ್ತಿಗಳಲ್ಲಿ ಅಷ್ಟು ಸುಲಭವಾಗಿ ತನ್ನ ಇರುವಂತಿಕೆಯನ್ನು ತೋರ್ಪಡಿಸುವುದಿಲ್ಲ. ತಾಯಿ ಕರುಳು ಇರುವವರಲ್ಲಿ ಮಾತ್ರವೇ ಈ ಬಗೆಯ ಕರುಣೆ ಉಕ್ಕಿ ಬರಲು ಸಾಧ್ಯವಾಗುತ್ತದೆ. ಆದ್ದರಿಂದ ಕರುಣೆ ನವರಸಗಳಲ್ಲಿ ಒಂದು. ನಾಟಕಗಳನ್ನು ನೋಡಲು ಪ್ರೇಕ್ಷಕರಾಗಿ ಬಂದು ಕುಳಿತು ನಾಟಕ ನೋಡುತ್ತಿರುವಾಗ ಯಾವುದೋ ಪಾತ್ರವು ಸಂಕಷ್ಟಕ್ಕೆ ಸಿಲುಕಿದಾಗ ಅಥವಾ ಕಷ್ಟಗಳ ಮೇಲೆ ಕಷ್ಟಗಳಿಂದ ಒದ್ದಾಡುತ್ತಿರುವ ಜೀವಕ್ಕೆ ತಮಗರಿವಿಲ್ಲದೆ ಕಣ್ಣುಗಳಿಂದ ತೊಟ್ಟಿಕುವ ಹನಿಗಳು ಕರುಣೆಯ ರೂಪತೆಯನ್ನು ಮನವರಿಕೆ ಮಾಡುತ್ತದೆ.

ಕನ್ನಡದ ಕಣ್ವ, ಯುಗ ಪ್ರವರ್ತಕ ಎಂದು ಕರೆಸಿಕೊಂಡಿರುವ ಬಿ.ಎಂ.ಶ್ರೀಕಂಠಯ್ಯ ಅವರು ಲೀಡ್ ಕೈಂಡ್ಲಿ ಲೈಟ್ ಎಂಬ ಆಂಗ್ಲ ಕವಿತೆಯನ್ನು ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲ್ಲಿ ಕೈಹಿಡಿದು ನಡೆಸೆನ್ನನ್ನು ಎಂದು ಕಷ್ಟದಲಿ ಸಿಲುಕಿರುವ ಒಂದು ಜೀವ ಕರುಣೆಯಿಂದ ಬಂದು ನನ್ನನು ಕಾಪಾಡು ಎಂದು ಬೇಡುವ ದೈನ್ಯತೆ ವ್ಯಕ್ತವಾಗುತ್ತದೆ. ಒಬ್ಬರ ಕಷ್ಟವನ್ನು ಅರ್ಥಮಾಡಿಕೊಂಡು ಸಹಾನುಭೂತಿಯಿಂದ ಸಾಂತ್ವನ ಹೇಳಿದರೆ ಮತ್ತೊಂದು ಕಷ್ಟದ ಭಾರ ಇಳಿದು ಮನಸ್ಸಿಗೆ ಆಗುವ ಆನಂದ ಅದು ಪದಗಳಿಗೆ ನಿಲುಕದ ಸಾಲು. ಕರುಣೆ ಇಲ್ಲದ ನಿಷ್ಕರುಣ ಭಾವದಲ್ಲಿ ಸ್ವಾರ್ಥವು ತಲೆದೋರಿ ಮನುಷ್ಯತ್ವ ಸಾಯುತ್ತದೆ. ಅಂತಃಕರಣ ಮಿಡಿದರೆ ಬಾಂಧವ್ಯವು ಗಟ್ಟಿಗೊಂಡು, ಆತ್ಮೀಯತೆ ಅನುಗಾಲ ಅಮರವಾಗಿರಲು ಸಾಧ್ಯವಾಗುತ್ತದೆ.

ಸುಂದರದ ರಸನೂರು ಸಾರವದರೊಳು ಮೂರು
ಹೊಂದಿಪ್ಪುವವು ಮೋಹ, ಕರುಣೆ, ಶಾಂತಿಗಳ
ಒಂದರಿಂದೊಂದು ಬೆಳೆಯಾದಂದು ಜೀವನವು
ಚೆಂದಗೊಂಡುಜ್ಜುಗವೋ–ಮಂಕುತಿಮ್ಮ

ಭಾರತೀಯ ಕಾವ್ಯಮೀಮಾಂಸಕರು ಹೇಳಿರುವ ನವರಸಗಳಲ್ಲಿ ಕರುಣಾ ರಸವು ಒಂದಾಗಿದೆ. ಆದರೆ ಮಾನ್ಯ ಡಿ.ವಿ.ಗುಂಡಪ್ಪನವರು ಜೀವನದ ಮೌಲ್ಯಗಳನ್ನು ಅನುಸರಿಸಿ ಒಂಬತ್ತು ರಸಗಳನ್ನು ಸಾರಗೊಳಿಸಿ ಕೇವಲ ಮೂರು ರಸಗಳಲ್ಲಿ ಘನೀಕರಿಸಿ ವಿಂಗಡಣೆ ಮಾಡುತ್ತಾರೆ. ಅವರ ಈ ವಿಂಗಡಣೆಯಲ್ಲಿ ಕಾರುಣ್ಯದ ಬಗ್ಗೆ ಪ್ರಸ್ತುತ ಕಗ್ಗದಲ್ಲಿ ಮಹತ್ವದ ವಿಚಾರವನ್ನು ಹೇಳಿದ್ದಾರೆ. ನಾನು ಎಂಬ ಸಂಕುಚಿತ ಭಾವ ತೊಲಗಿ ನನ್ನಂತೆ ಅನ್ಯರೂ ಸಹ ಎಂದು ಯೋಚಿಸಿದರೆ ಜಗದ ಜೀವಗಳಲ್ಲಿ ಕರುಣೆಯ ಕಡಲು ವಿಶಾಲವಾಗುವುದು. ಈ



ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಉಪನ್ಯಾಸಕರು ಮತ್ತು ಹವ್ಯಾಸಿ ಬರಹಗಾರರು
ದೂರವಾಣಿ: 795862281

ಮೂರು ರಸಚೇತನಗಳಲ್ಲಿ ಜೀವನದ ಎಳೆಗಳು ಚಿಗುರಲು ಸಾಧ್ಯವಾಗುತ್ತದೆ. ಕಷ್ಟಗಳೇ ಆಗಲೀ, ಸುಖವೇ ಆಗಲೀ ಹೇಳಿ–ಕೇಳಿ ಬರುವುದಿಲ್ಲ. ಸುಖ–ಸಂತೋಷದಲ್ಲಿ ಸಂಭ್ರಮಗಳಿಂದ ಜೊತೆಗೂಡುವ ನಾವು ಕಷ್ಟ ಕಾಲದಲ್ಲಿ, ದುಃಖದ ಸಮಯದಲ್ಲಿ ದೂರವಾಗುವುದು ಕರುಣೆ ಎಂಬ ಮೌಲ್ಯಕ್ಕೆ ಅಪಚಾರ ಮಾಡಿದಂತಾಗುತ್ತದೆ.

ಭಾರತೀಯ ಪರಂಪರೆಯನ್ನು ಅನುಗಾಲ ಪೋಷಿಸುತ್ತಿರುವ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಉದ್ಗ್ರಂಥಗಳು ಕರುಣೆಯನ್ನು ವ್ಯಕ್ತಪಡಿಸುವ ಸನ್ನಿವೇಶಗಳಿಗೆ ಸಾಕ್ಷಿಯಾಗಿವೆ. ಮೋಹ ಪಾಶಕ್ಕೆ ಬಲಿಯಾಗಿ ಸೀತಾಮಾತೆಯನ್ನು ಅಪಹರಿಸಿದ ರಾವಣ ಅನಂತರ ಸೀತೆಮಾತೆಯನ್ನು ಕಾರುಣ್ಯದಿಂದ ತೊರೆಯುವ ನಿರ್ಧಾರ ಮಾಡುತ್ತಾನೆ. ಮಹಾಭಾರತದ ಕುರುಕ್ಷೇತ್ರ ಯುದ್ಧದಲ್ಲಿ ತನ್ನವರನೆಲ್ಲ ಕಳೆದುಕೊಂಡು ಹದಿನೇಳನೇ ದಿನದಲ್ಲಿ ಬಂದು ನಿಂತಿರುವ ದುರ್ಯೋಧನ ತಂದೆ–ತಾಯಿಯರ ಅದೇಶದ ಮೇರೆಗೆ ಭೀಷ್ಮರನ್ನು ಕಾಣಲು ರಣರಂಗ ಪ್ರವೇಶಿಸಿದಾಗ ಅತಿರಥ ಮಹಾರಥರ ಸಾವು–ನೋವು ಕರುಣೆಯ ಕೋಡಿಯನ್ನೇ ಹರಿಸುವ ಪ್ರಸಂಗ ಮನ ಕಲಕುತ್ತದೆ.

ಷಟ್ಪದಿಯ ಬ್ರಹ್ಮ ಎಂದೇ ಖ್ಯಾತನಾಗಿರುವ ರಾಘವಾಂಕ ಮಹಾಕವಿ ವಿರಚಿತ ಹರಿಶ್ಚಂದ್ರ ಕಾವ್ಯದಲ್ಲಿ ಚಂದ್ರಮತಿ ತನ್ನ ಮಗ ಲೋಹಿತಾಶ್ವನನ್ನು ಕಳೆದುಕೊಂಡಾಗ ವ್ಯಕ್ತವಾಗುವ ಕರುಣೆ ಬಾಂಧವ್ಯದ ಭಾವವು ಕರುಳನ್ನು ಹಿಂಡಿ ಇಪ್ಪೆ ಮಾಡುತ್ತದೆ. ಹೀಗೆ ಕರುಣೆಯ ಭಾವದಿಂದಲೇ ಜಗದ ಜೀವಗಳು ಆತ್ಮೀಯತೆಯಿಂದ ಬದುಕಲು ಸಾಧ್ಯವಾಗುತ್ತದೆ. ಬಿದ್ದವರನ್ನು ಮೇಲೆತ್ತುವ, ಮೇಲೆದ್ದವರನ್ನು ಮುನ್ನಡೆಸುವ, ಮುನ್ನಡೆದವರನ್ನು ಬೆನ್ನು ತಟ್ಟುವ, ಬೆನ್ನು ತಟ್ಟಿದವರನ್ನು ಗುರುತಿಸುವ, ಗುರುತಿಸಿದವರನ್ನು ಸನ್ಮಾನಿಸುವ ಭಾವವೇ ವಿಶಾಲವಾದುದು. ಈ ಎಲ್ಲದರ ಹಿಂದೆ ಕರುಣೆ ಕಾಣಿಸಿಕೊಳ್ಳದೆ ಕೆಲಸ ಮಾಡುತ್ತದೆ. ಆದರೆ ಕರುಣೆಯು ಸಹ ತನ್ನ ಎಲ್ಲೆಯನ್ನು ಮೀರದೆ ಇದ್ದರೆ ವಾಸಿ.

ಒಂದಂತು ಸತ್ಯವಾದ ಮಾತು ಏನಿಲ್ಲ ಈ ಭೂಮಿಯಲ್ಲಿ ಎಂದು ಕೇಳಿದರೆ ಇದೆ–ಇದೆ ಎಲ್ಲವೂ ಈ ಭೂಮಿಯಲ್ಲಿ. ಹುಟ್ಟಿದೆ–ಸಾವಿದೆ, ನೋವಿದೆ–ನಲಿವಿದೆ, ಹಗಲಿದೆ–ಇರುಳಿದೆ, ಬೆಳಕಿದೆ–ಬದುಕಿದೆ, ಬೇಕೂ ಇದೆ–ಬೇಡವೂ ಇದೆ, ಸ್ವರ್ಗ–ನರಕ ಎಲ್ಲವೂ ಇದೆ. ಎಡರು–ತೊಡರು, ಕ್ರೌರ್ಯ–ಈರ್ಷೆ, ಜೀವ–ಅಜೀವ, ಎಲ್ಲಕ್ಕೂ ಮಿಗಿಲಾಗಿ ಮೇಲಾಗಿ, ಒಳಗೆ ಒಡಲೊಳಗೆ ಮನವನು ಕಲಕುವ ಕದಡುವ, ಅಂತಃಕರಣದ ಭಾವವು ಎದ್ದು ಕೂತು ಎಲ್ಲರನ್ನು ತನ್ನ ತೆಕ್ಕೆಗೆ ಬಾಚಿಕೊಳ್ಳುವ ಕರುಣೆ ಎಂಬ ಸಂಜೀವಿನಿ ಸೂರ್ಯ, ಚಂದ್ರ, ಆಕಾಶ, ಭೂಮಿ ಬದುಕಿರುವವರೆಗೂ ತನ್ನ ವ್ಯಕ್ತಿತ್ವವನ್ನು ಜೀವಂತಿಕೆಯಿಂದ ಬದುಕಿಸಿಕೊಂಡಿರುತ್ತದೆ ಎಂದು ಹೇಳುವುದಾದರೆ ಕರುಣೆಯ ಮಹೋನ್ನತ ಭಾವ ತನ್ನ ಕರುಳ ಬಳ್ಳಿಯ ಸೊಲ್ಲನ್ನು ಹಬ್ಬಿಸಿದೆ ಎಂಬ ಮಾತು ಅಕ್ಷರಶಃ ಸತ್ಯ.

ಅರಳುವ ಯಾವುದೇ ಜೀವವಾದರೂ ಸರಿಯೇ–ಕುಸುಮವಾದರೂ ಸರಿಯೇ ಜೀವ ಇನ್ನಿಲ್ಲವಾದಾಗ, ಕುಸುಮ ಬಾಡಿದಾಗ ಕರುಳು ಹಿಂಡಿದಂತಾಗುತ್ತದೆ, ಹೃದಯ ಚೂರಾಗುತ್ತದೆ. ಬೆಳಕಿನ ಮನೆಗೆ ಕತ್ತಲು ಸುರಿದಂತಾಗುತ್ತದೆ. ಕಣ್ಣುಗಳು ಕಡಲಾಗುತ್ತವೆ, ಬಾಂಧವ್ಯದ ಸೆಳೆತ ಕುಟುಕುತ್ತದೆ, ನೋವು ಎದೆಯ ಬಗೆದು ಮರುಕದಲ್ಲಿ ಮನವು ನಲುಗುತ್ತದೆ. ಭಾವನೆಗಳು ಬೇರೊಂದು ರೂಪದಲಿ ಗೋಚರವಾಗಿ ದಿಕ್ಕು ಬಂದ ಕಡೆ ಅಲೆಯುವಂತೆ ಮಾಡಿ ಕರುಣೆಗೆ ದೂಡುವ ವಿವಿಧ ಸಂಗತಿಗಳಿಗೆ ಆಗಾಗ ಸಾಕ್ಷಿಯಾದ ಉದಾಹರಣೆಗಳು ಸಾಕಷ್ಟಿವೆ. ಮಹಾತ್ಮ ಗಾಂಧೀಜಿ ಅವರ ಸಾವಿನ ಸಂದರ್ಭದಲ್ಲಿ ಭಾರತವೇ ಕಣ್ಣೀರ ಕಡಲಲ್ಲಿ ಮುಳುಗಿತ್ತು. ಇನ್ನೊಂದು ಕಣ್ಣೆದುರೇ ಕಂಡ ಸಾವಿನ ಪ್ರಸಂಗ ಸಜ್ಜನರಿಗೆ ಒದಗಿ ಬಂದ ಆಪತ್ತಿಗೆ ಹೇಗೆ ಕರುಣೆಯಿಂದ ದುಃಖ ಉಮ್ಮಳಿಸಿ ಬರಬಹುದು ಎಂಬುದಕ್ಕೆ ಇಹದ ಬದುಕನ್ನು ತೊರೆದು ಪರದ ಬದುಕಿಗೆ ಒಳಗಾದ ಜನಪ್ರಿಯ ನಟ ಪುನೀತ್ ರಾಜ್‌ಕುಮಾರ್ ಅವರ ಅಗಲಿಕೆ ಕರುಣೆಯ ಕೋಡಿಯೇ ಹರಿಯಿತು ಎಂದು ತಿಳಿಸುವಾಗ... ಇಂತಹ ಪ್ರಸಂಗಗಳಲ್ಲಿ ಕರುಣೆ ಎದ್ದು ಬಂದು ಜೀವಗಳನ್ನು ಮರುಗುವಂತೆ ಮಾಡುತ್ತಿರುವುದೇ ಕರುಣೆಯ ಮಹತ್ವವನ್ನು ಸಾರುತ್ತಿದೆ. ಕರುಣೆಗೆ ಆಗಾಗ ಜೀವ ನೀಡಿದರೆ ಮನುಷ್ಯತ್ವ ಬದುಕುತ್ತದೆ.

ಎಲ್ಲರ ಮನದ ಪುಸ್ತಕವ ಓದಲು
ಬಯಸುವ ನಾವು
ನಮ್ಮ ಮನದ ಪುಸ್ತಕವನ್ನು ಓದುವುದಿರಲಿ
ಅದನ್ನು ತೆರೆಯಲು ಸಹ ಪ್ರಯತ್ನಿಸದೆ
ವಿಫಲರಾಗಿರುತ್ತೇವೆ.
ಅಂತಃಕರಣವನ್ನು ಅಂಧಕಾರ,
ದಯೆಯನ್ನು ದ್ವೇಷ
ಸಭ್ಯತೆಯನ್ನು ಅಸಭ್ಯತೆ, ಸುಜ್ಞಾನವನ್ನು
ಅಜ್ಞಾನ
ಸುಭಿಕ್ಷೆಯ ಹಿತದ ಹೊನಲು– ಮುಕ್ಕುತ್ತಿದೆ
ಗೆದ್ದಲು
ಕಣ್ಣಂಚಿನ ಬೆಳಕಲ್ಲಿ ನಗೆ ಮಲ್ಲಿಗೆ ದೀಪ
ಕಾರುಣ್ಯದ
ಕಣ್ಣಿಗೆ ಜಗವೇ ಮನೋಜ್ಞ ರೂಪ.
ಚೂರಾದ ಬೆಳಕಲಿ ಛಿದ್ರ–ಛಿದ್ರ
ಮನಸ್ಸುಗಳು, ಅಭದ್ರತೆಯ ವಿಳಾಸದಲ್ಲಿ
ಕನಸುಗಳ ಹುಡುಗಾಟ
ಬೆಳಕಿನಲ್ಲಿ ದೈವ ಕಾಣದಿರಬಹುದು ಆದರೆ
ಬೆಳಕೇ ದೈವ ಎಂದಳು ನನ್ನವ್ವ ಸಾಕವ್ವ.

ಮುಡಾ ಆಸ್ತಿ ಸಂರಕ್ಷಣೆ ಮಾಡಲು ಪ್ರತಿಯೊಬ್ಬರು ನೆರವಾಗಿ

ಮುಡಾ ಅಧ್ಯಕ್ಷರಾದ ಕೆ.ಮರೀಗೌಡರಿಂದ ಅಧಿಕಾರಿಗಳು, ಸಿಬ್ಬಂದಿಗೆ ಸೂಚನೆ



ಮೈಸೂರು, ಜೂ.14– ಮುಡಾ ಆಸ್ತಿಗಳು ಕಂಡ ಕಂಡವರ ಪಾಲಾಗುತ್ತಿದೆ ಎಂಬ ಅನುಮಾನ ಸಾರ್ವಜನಿಕರಲ್ಲಿದೆ. ಈ ಒಂದು ಶಂಕೆ ದೂರ ಮಾಡಲು ಅಧಿಕಾರಿಗಳು ಹಾಗೂ ಸಿಬ್ಬಂದಿ ತೀವ್ರ ನಿಗಾ ವಹಿಸಿ. ಮುಡಾ ಆಸ್ತಿ ಕಬಳಿಸಿದವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರೀಗೌಡ ಕಟ್ಟಾಜ್ಞೆ ಮಾಡಿದ್ದಾರೆ.

ಮುಡಾದಲ್ಲಿ ಶುಕ್ರವಾರ ಅಧಿಕಾರಿಗಳ ಸಭೆ ನಡೆಸಿದ ಅವರು, ಮುಡಾ ಉದ್ದೇಶ 'ನೋ ಲಾಸ್ ಹಾಗೂ ನೋ ಪ್ರಾಫಿಟ್'. ಈ ರೀತಿ ನಡೆಯುವಂತಹ ಸಂಸ್ಥೆ. ಈಗ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವುದು ಕಂಡು ಬಂದಿದೆ. ನಮ್ಮ ಅಧಿಕಾರಿಗಳಲ್ಲಿ ಹೊಂದಾಣಿಕೆ ಇಲ್ಲದ ಕಾರಣ ಈ ರೀತಿಯ ಅವ್ಯವಸ್ಥೆ ಕಂಡುಬಂದಿದೆ. ತಾಂತ್ರಿಕ ಇಲಾಖೆ, ನಗರ ಯೋಜನಾ ಇಲಾಖೆ, ಭೂಸ್ವಾಧೀನ ಇಲಾಖೆ. ಈ ಮೂರು ವಿಭಾಗದ ಅಧಿಕಾರಿಗಳಲ್ಲಿ ಸಮನ್ವಯತೆ ಕೊರತೆ ಇರುವುದರಿಂದ ಸಾರ್ವಜನಿಕರ ಸಮಸ್ಯೆ ಬಗೆಹರಿಸುವಲ್ಲಿ ವಿಳಂಬವಾಗುತ್ತಿದೆ, ಮುಂದೆ ಹೀಗಾಗಬಾರದು ಎಂದು ಎಚ್ಚರಿಸಿದರು.

ಮುಡಾ ವ್ಯಾಪ್ತಿಯಲ್ಲಿ ಇರುವ ಬಿಡಿ ನಿವೇಶನಗಳು, ಸ್ಟೇ ಹೌಸ್, ನಿವೇಶನಗಳು, ಬಾಡಿಗೆ ಕೊಟ್ಟಿರುವಂತಹ ತುಂಡು ಭೂಮಿ ಇವೆಲ್ಲವನ್ನೂ ಪರಿಶೀಲಿಸಿ ಮಾಹಿತಿ ನೀಡಬೇಕು. ಸಿಎ ನಿವೇಶನಗಳ ಮಂಜೂರು ಮಾಡುವಾಗ ಯಾವ ಮಾನದಂಡ ಅನುಸರಿಸಬೇಕು. ಅರ್ಜಿ ಹಾಕಿರುವ ಸಂಸ್ಥೆಗಳ ಆರ್ಥಿಕ ಸ್ಥಿತಿ–ಗತಿ ಹಾಗೂ ಉದ್ದೇಶಗಳ ಪೂರ್ಣ ಮಾಹಿತಿ ನೀಡಬೇಕು. ಸರ್ಕಾರದ ಕಟ್ಟುನಿಟ್ಟಿನ ಆದೇಶದ ಮೇರೆಗೆ ನಮ್ಮ ವ್ಯಾಪ್ತಿಯ ಬಡಾವಣೆಗಳಲ್ಲಿ ಕುಡಿಯುವ ನೀರು, ಯುಜಿಡಿ ಮತ್ತು ರಸ್ತೆ ಇನ್ನಿತರ ಸೌಕರ್ಯವನ್ನು ಸಮರ್ಪಕವಾಗಿ ಕಲ್ಪಿಸಬೇಕು ಎಂದು ತಿಳಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಹೊಸ ಯೋಜನೆಗಳನ್ನು ರೂಪಿಸಿ, ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸರ್ಕಾರದ ವತಿಯಿಂದ ಅನುಮೋದನೆ ಪಡೆಯಲು ಶೀಘ್ರವಾಗಿ ವರದಿ ತಯಾರಿಸುವಂತೆ ಇದೇ ವೇಳೆ ಸೂಚಿಸಿದರು.

ಮುಡಾ ಆಯುಕ್ತ ದಿನೇಶ್ ಕುಮಾರ್ ಮಾತನಾಡಿ, ಜಿಎಸ್‌ಟಿ ಹಾಗೂ ಇತರ ತೆರಿಗೆಗಳನ್ನು ಸಂಗ್ರಹಿಸಿ, ಮುಡಾ ಲೇಔಟ್‌ಗಳನ್ನು ಹಸ್ತಾಂತರ ಮಾಡುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಅಧ್ಯಕ್ಷ ಮರೀಗೌಡರು ಪ್ರತಿಕ್ರಿಯಿಸಿ, ಈ ಬಗ್ಗೆ ಪೂರ್ಣ ಪ್ರಮಾಣದ ಮಾಹಿತಿಯನ್ನು ಪಡೆದು ವರದಿ ಸಲ್ಲಿಸಿ. ತಾಂತ್ರಿಕ ಇಲಾಖೆಯವರು ನಿವೇಶನಗಳ ಸಿ.ಡಿ. ಪಟ್ಟಿಯನ್ನು ನೀಡುವಾಗ ಭೂಸ್ವಾಧೀನ ಇಲಾಖೆಯಿಂದ ಪೂರ್ಣ ಪ್ರಮಾಣದ ವರದಿಯನ್ನು ತೆಗೆದುಕೊಂಡು ನಂತರ ಕ್ರಮ ವಹಿಸಬೇಕು. ನಗರ ಯೋಜನೆ ಇಲಾಖೆ ಲೇಔಟ್ ಅನುಮೋದನೆ ನೀಡುವಾಗ ತಾಂತ್ರಿಕ ಇಲಾಖೆ ಸಹಕಾರ ಪಡೆಯಬೇಕು ಎಂದರು.

ಮುಡಾ ಅಧಿಕಾರಿಗಳು, ಸಿಬ್ಬಂದಿಗಳು ಕಡ್ಡಾಯವಾಗಿ ಬೆಳಗ್ಗೆ 10 ಗಂಟೆಗೆ ಸರಿಯಾಗಿ ಕರ್ತವ್ಯಕ್ಕೆ ಹಾಜರಿರಬೇಕು. ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ದಲ್ಲಾಳಿಗಳು ಹಾಗೂ ಮಧ್ಯವರ್ತಿಗಳಿಂದ ಸಿಬ್ಬಂದಿಗಳು ದೂರವಿದ್ದು ನೇರವಾಗಿ ಸಾರ್ವಜನಿಕರೊಂದಿಗೆ ವ್ಯವಹರಿಸಬೇಕು ಎಂದು ಖಡಕ್ ಎಚ್ಚರಿಕೆ ನೀಡಿದರು.

ಜೂ.18ರ ಬೆಳಗ್ಗೆ 8.30ಕ್ಕೆ ಅಧ್ಯಕ್ಷರು, ಆಯುಕ್ತರು, ಹಾಗೂ ಎಲ್ಲಾ ಇಲಾಖೆ ಅಧಿಕಾರಿಗಳು ಕ್ಷೇತ್ರ ಪ್ರವಾಸ ಮಾಡಬೇಕು. ಮುಡಾದ ಮಿನಿ ಬಸ್ಸಿನಲ್ಲಿ ಪ್ರತಿನಿತ್ಯ ಎರಡು ವಲಯಗಳಿಗೆ ಭೇಟಿ ನೀಡಿ ಸಮಗ್ರ ಮಾಹಿತಿ ಕಲೆ ಹಾಕಬೇಕು. ವಿಶೇಷವಾಗಿ ಬಲ್ಲಹಳ್ಳಿ 485 ಎಕರೆ ಹಾಗೂ ಬೊಮ್ಮೇನಹಳ್ಳಿಯಲ್ಲಿ 165 ಎಕರೆ ಜಮೀನಿನ ಭೂ ಸ್ವಾಧೀನ ಮಾಡಲು ಅಧ್ಯಕ್ಷರು, ಆಯುಕ್ತರು, ಮುಡಾ ಸದಸ್ಯರು, ಅಧಿಕಾರಿಗಳ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಮಂಜೂರು ಮಾಡಿಸುವಂತೆ ಮನವಿ ಮಾಡಲು ಸೂಚಿಸಿದರು.

ಈ ಸಭೆಯಲ್ಲಿ ಟಿಪಿಎಂ ಶಿವರಾಂ, ಎಸ್‌ಇ ಧರ್ಮೇಂದ್ರ, ಕಾರ್ಯದರ್ಶಿ ಶೇಖರ್ ಹಾಗೂ ಎಲ್ಲಾ ಮುಡಾ ಅಧಿಕಾರಿಗಳು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರಲ್ಲಿ ರಸ್ತೆಬದಿ ವ್ಯಾಪಾರಿಗಳ ಸಂಖ್ಯೆ ದಿನೇ ದಿನೇ ದ್ವಿಗುಣ

ಜಿಯೋ ಫೆನ್ಸಿಂಗ್ ಮತ್ತು ಟ್ಯಾಗಿಂಗ್ ಮೂಲಕ ಸಮೀಕ್ಷೆ ನಡೆಸಿ ಬೀದಿ ಬದಿ ವ್ಯಾಪಾರಿಗಳ ಗುರುತಿಸಿದ ಪಾಲಿಕೆ

ಮೈಸೂರು, ಜೂ. 14(ಆರ್‌ಕೆ)– ಮೈಸೂರು ನಗರದಲ್ಲಿ ರಸ್ತೆ ಬದಿ ವ್ಯಾಪಾರಿಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಜಿಪಿಎಸ್ ಆಧಾರದ ಮೇಲೆ ಜಿಯೋ ಫೆನ್ಸಿಂಗ್ ಮತ್ತು ಜಿಯೋ ಟ್ಯಾಗಿಂಗ್ ಮೂಲಕ ರಸ್ತೆ ಬದಿ ವ್ಯಾಪಾರಿಗಳನ್ನು ಸಮೀಕ್ಷೆ ಮೂಲಕ ಮೈಸೂರು ಮಹಾನಗರ ಪಾಲಿಕೆಯು ಗುರುತಿಸಿದ್ದು, ಅದರಂತೆ 2017–18ನೇ ಸಾಲಿನಲ್ಲಿ 1,856 ಮಂದಿ ಇದ್ದ ಅವರ ಸಂಖ್ಯೆ 2021–22ನೇ ಸಾಲಿಗೆ 3,416ಕ್ಕೇರಿದ್ದು, ಅವರಿಗೆ ಕ್ಯೂಆರ್ ಕೋಡ್ ಆಧಾರಿತ ಗುರುತಿನ ಚೀಟಿ ಮತ್ತು ವ್ಯಾಪಾರ ಪ್ರಮಾಣ ಪತ್ರ ನೀಡಲಾಗಿದೆ.

ರಸ್ತೆ ಬದಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಎನ್‌ಆರ್ ಮೊಹಲ್ಲಾದ ಬಿಲಾಲ್ ಮಸೀದಿ ರಸ್ತೆಯ ಪಿ ಅಂಡ್ ಟಿ ಕ್ವಾರ್ಟ್ರಸ್ ಬಳಿ, ಬಲ್ಲಾಳ್ ಸರ್ಕಲ್ ಬಳಿ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ, ಬನ್ನಿ ಮಂಟಪದ ಸೆಂಟ್ ಜೋಸೆಫ್ ಆಸ್ಪತ್ರೆ ಎದುರು, ಸರಸ್ವತಿಪುರಂ ಈಜುಕೊಳ ರಸ್ತೆಗೆ ಹೊಂದಿಕೊಂಡಂತಿರುವ ಪಾಲಿಕೆ ಜಾಗದಲ್ಲಿ ವೆಂಡಿಂಗ್ ಝೋನ್ ನಿರ್ಮಿಸಲು ಪಾಲಿಕೆಯು ಕ್ರಮ ಕೈಗೊಂಡಿದೆ.

ಮೈಸೂರು ನಗರದಾದ್ಯಂತ ಎಲ್ಲೆಂದರಲ್ಲಿ ಫುಟ್‌ಪಾತ್ ಮೇಲೆ ಅಂಗಡಿ ಇಟ್ಟು ವ್ಯಾಪಾರ ಮಾಡುವುದರಿಂದ ಪಾದಚಾರಿಗಳು ಓಡಾಡಲು ಅಡ್ಡಿಯಾಗುತ್ತದೆಯಲ್ಲದೆ, ಅವರು ರಸ್ತೆಗಿಳಿಯುವುದರಿಂದ ಅಪಘಾತಗಳು ಸಂಭವಿಸುತ್ತವೆ. ಅದಕ್ಕಾಗಿ ಬೀದಿ ಬದಿ ವ್ಯಾಪಾರಿಗಳಿಗೆ ಪ್ರತ್ಯೇಕ ವಲಯ ಗುರ್ತಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ವ್ಯಾಪಾರ ನಿಯಂತ್ರಣ) ನಿಯಮ–2019ರನ್ವಯ ಮೈಸೂರು ಮಹಾನಗರ ಪಾಲಿಕೆ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ.

ಅದೇ ರೀತಿ ಟಾಸ್ಕ್‌ಫೋರ್ಸ್ ಸಮಿತಿಯನ್ನೂ ರಚಿಸಲಾಗಿದ್ದು, 2017ರಿಂದ ಗುರುತಿಸಿರುವ ರಸ್ತೆ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ವ್ಯಾಪಾರ ಪ್ರಮಾಣ ಪತ್ರ ನೀಡಲಾಗಿದೆಯೇ ಹಾಗೂ ನಿಬಂಧನೆ ಮತ್ತು ಷರತ್ತುಗಳ ಮಾನದಂಡಗಳನ್ನು ಅವರು ಅನುಸರಿಸುತ್ತಿದ್ದಾರೆಯೇ ಎಂಬುದರ ಬಗ್ಗೆ ಸಮಿತಿ ಸದಸ್ಯರು ಪರಿಶೀಲಿಸಬೇಕಾಗಿದೆ.

ಕುಂದು–ಕೊರತೆ ನಿವಾರಣಾ ಸಮಿತಿಯಲ್ಲಿ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹೆಚ್.ವೈ. ವಸಂತಕುಮಾರ್ ಅಧ್ಯಕ್ಷರಾಗಿದ್ದು, ನಿವೃತ್ತ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ. ಗೋವಿಂದಪ್ಪ ಹಾಗೂ ಬೀದಿ ಬದಿ ವ್ಯಾಪಾರಿ ಭಾಸ್ಕರ ಶ್ರೀನಿವಾಸರಾಜೇ ಅರಸ್ ಸದಸ್ಯರಾಗಿದ್ದಾರೆ. ಈ ಸಮಿತಿಯು ಬೀದಿ ಬದಿ ವ್ಯಾಪಾರಿಗಳ ಕುಂದು–ಕೊರತೆ ವಿಚಾರಣೆ ನಡೆಸಿ ಪರಿಹಾರ ಸೂಚಿಸಲು ಜವಾಬ್ದಾರಿಯಾಗಿರುತ್ತದೆ.

ಕುಂದು–ಕೊರತೆ ನಿವಾರಣಾ ಸಮಿತಿ ಮತ್ತು ಪಟ್ಟಣ ವ್ಯಾಪಾರ ಸಮಿತಿಯ ತೀರ್ಮಾನದ ವಿರುದ್ಧ ಮೇಲ್ಮನವಿ ಸಲ್ಲಿಸಲು ಮೇಲ್ಮನವಿ ಪ್ರಾಧಿಕಾರವನ್ನೂ ರಚಿಸಲಾಗಿದೆ. ಅಲ್ಲದೆ ಗುರುತಿಸಲ್ಪಟ್ಟ ರಸ್ತೆ ಬದಿ ವ್ಯಾಪಾರಿಗಳಿಗೆ ಆಹಾರ ಸುರಕ್ಷತಾ ಗುಣಮಟ್ಟ ಕಾಯ್ದೆ, ಸ್ವಚ್ಛತೆ ಮತ್ತು ನೈರ್ಮಲ್ಯ, ಸರ್ಕಾರಿ ಕಾರ್ಯಕ್ರಮಗಳ ಜೋಡಣೆ, ಆರ್ಥಿಕ ಒಳಗೊಳ್ಳುವಿಕೆ, ಸಾಮಾಜಿಕ ಭದ್ರತಾ ಯೋಜನೆಗಳ ಬಗ್ಗೆ ತರಬೇತಿಯನ್ನೂ ನೀಡಲು ಪಾಲಿಕೆಯು ಮುಂದಾಗಿದೆ.



ಮೈಸೂರಿನ ಕೆಆರ್ ಆಸ್ಪತ್ರೆ ಎದುರಿನಲ್ಲೇ ಹಣ್ಣಿನ ವ್ಯಾಪಾರ ಮಾಡುತ್ತಿರುವ ಶಂಕರಮ್ಮರಿಗೆ ಪಾಲಿಕೆಯಿಂದ ಗುರುತಿನ ಚೀಟಿ ನೀಡಿರುವುದು.

ನಿಯಮ ಪಾಲಿಸದ ಹೊರಗಿನ ರಸ್ತೆ ಬದಿ ವ್ಯಾಪಾರಿಗಳ ವಿರುದ್ಧ ಕ್ರಮದ ಎಚ್ಚರಿಕೆ



ಮೈಸೂರು, ಜೂ. 14(ಆರ್‌ಕೆ)– ನಿಯಮ ಪಾಲಿಸದೇ ವ್ಯಾಪಾರ ಮಾಡಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುವ ಸ್ಥಳೀಯರಲ್ಲದ ರಸ್ತೆ ಬದಿ ವ್ಯಾಪಾರಿಗಳ ವಿರುದ್ಧ ಕ್ರಮ ವಹಿಸಬೇಕಾಗುತ್ತದೆ ಎಂದು ಮೈಸೂರು ಮಹಾನಗರ ಪಾಲಿಕೆ ಎಚ್ಚರಿಕೆ ನೀಡಿದೆ.

ಹೊರ ರಾಜ್ಯದಿಂದ ಬಂದಿರುವ ರಸ್ತೆ ಬದಿ ವ್ಯಾಪಾರಿಗಳು ಎಲ್ಲೆಂದರಲ್ಲಿ ಕಬ್ಬಿನ ಜ್ಯೂಸ್, ಮೂಸಂಬಿ ಜ್ಯೂಸ್, ಪಾನಿಪೂರಿ, ಐಸ್‌ಕ್ರೀಂ, ಕ್ಯಾಂಡಿಗಳಂತಹ ಪದಾರ್ಥಗಳನ್ನು ಮಾರಾಟ ಮಾಡುತ್ತಿರುವುದರಿಂದ ಅಲ್ಲಿ ಉತ್ಪತ್ತಿಯಾದ ತ್ಯಾಜ್ಯವನ್ನು ಬಿಸಾಡುತ್ತಿರುವುದು ಪಾಲಿಕೆ ಗಮನಕ್ಕೆ ಬಂದಿದ್ದು, ಅದರಿಂದ ಸಾರ್ವಜನಿಕರ ಆರೋಗ್ಯ ಸುರಕ್ಷತೆ, ನೈರ್ಮಲ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಪಾಲಿಕೆಯಿಂದ ಅಧಿಕೃತ ಗುರುತಿನ ಚೀಟಿ ಮತ್ತು ವ್ಯಾಪಾರ ಪ್ರಮಾಣಪತ್ರ ಪಡೆಯದೇ ನಿಯಮಗಳನ್ನು ಗಾಳಿಗೆ ತೂರಿ ಬೀದಿ ಬದಿಯಲ್ಲಿ ವ್ಯಾಪಾರ ಮಾಡುವ ಹೊರಗಿನವರ ವಿರುದ್ಧ ಕ್ರಮ ಜರುಗಿಸಬೇಕಾಗುತ್ತದೆ ಎಂದು ಪಾಲಿಕೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಪಾಲಿಕೆಯಿಂದ ರಚನೆಯಾಗಿರುವ ಸಮಿತಿ ಸದಸ್ಯರು ಪರಿಶೀಲಿಸಿ ನೀಡಿದ ವರದಿ, ಅಭಿಪ್ರಾಯದಂತೆ ಅನಧಿಕೃತ ಬೀದಿ ಬದಿ ವ್ಯಾಪಾರಿ (Non Local)ಗಳನ್ನು ತೆರವುಗೊಳಿಸಲು ಕ್ರಮ ವಹಿಸಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರಿನಲ್ಲಿ 'ನೂರ್' ಆಭರಣ ಪ್ರದರ್ಶನ ಉದ್ಘಾಟನೆ



ಮೈಸೂರು ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಿರುವ ಎರಡು ದಿನಗಳ 'ನೂರ್' ವೈವಿಧ್ಯಮಯ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಶುಕ್ರವಾರ ಉದ್ಘಾಟನೆಗೊಂಡಿತು. ರೀತು ಮೋದಿಯವರ ಗೋಲ್ಡ್ ಕಾರಟ್‌ನಿಂದ ವಿನ್ಯಾಸಗೊಳಿಸಲಾದ ಆಭರಣಗಳ ಪ್ರದರ್ಶನ ಮತ್ತು ಮಾರಾಟವನ್ನು ಇಂಪ್ರೆಶನ್ಸ್ ವತಿಯಿಂದ ಆಯೋಜಿಸಲಾಗಿದೆ. ಉದ್ಘಾಟನೆ ವೇಳೆ (ಎಡದಿಂದ) ಡಿಸೈನರ್ ರೀತು ಮೋದಿ, ಡಾ.ಸನ್ಮತಿ, ಮುಖ್ಯ ಅತಿಥಿಗಳಾಗಿದ್ದ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಕಾರ್ಯಕಾರಿ ನಿರ್ದೇಶಕರಾದ ರ್‍ಯಾಲಿ ಗಣಪತಿ, ಅರ್ಥಿ, ಇಂಪ್ರೆಶನ್ಸ್ ಆಯೋಜಕರಾದ ಕೃಪಾ ಸುಮಂತ್ ಮತ್ತು ಶಿವಾನಿ ಉಪಸ್ಥಿತರಿದ್ದರು. ಶನಿವಾರ ಬೆಳಗ್ಗೆ 11 ರಿಂದ ರಾತ್ರಿ 8.30 ರವರೆಗೆ ಸಂದರ್ಶಕರು ಭೇಟಿ ನೀಡಬಹುದು.

ದರ್ಶನ್ ಗಡಿಪಾರಿಗೆ ಆಗ್ರಹಿಸಿ ಮೈಸೂರಿನಲ್ಲಿ ಪ್ರತಿಭಟನೆ

ಮೈಸೂರು, ಜೂ.14(ಬಿಎಲ್‌ಯು)– ಕೊಲೆ ಪ್ರಕರಣದ ಆರೋಪಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಗಡಿಪಾರಿಗೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಮೈಸೂರಿನಲ್ಲಿ ಇಂದು ಪ್ರತಿಭಟನೆ ನಡೆಸಿದರು.

ನಗರದ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ವೇದಿಕೆ ಕಾರ್ಯಕರ್ತರು, ದರ್ಶನ್ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಆರೋಪಿಗಳ ಆಸ್ತಿ ಮಾರಾಟ ಮಾಡಿ ಕೊಲೆಯಾದ ವ್ಯಕ್ತಿ ಕುಟುಂಬಕ್ಕೆ ಪರಿಹಾರ ನೀಡಿ, ದರ್ಶನ್ ಹಾಗೂ ಸಹಚರರನ್ನು ಗಲ್ಲಿಗೇರಿಸಿ, ಚಲನಚಿತ್ರ ವಾಣಿಜ್ಯ ಮಂಡಳಿ ದರ್ಶನ್ ಸಿನಿಮಾ ಬ್ಯಾನ್ ಮಾಡಬೇಕು, ದರ್ಶನ್ ಸಿನಿಮಾಗಳಿಗೆ ಜನರು ಬಹಿಷ್ಕಾರ ಹಾಕಬೇಕೆಂಬ ಘೋಷಣಾ ಫಲಕ ಹಿಡಿದು ಪ್ರತಿಭಟನೆ ನಡೆಸಿದರು.



ದರ್ಶನ್ ಗಡಿಪಾರು ಮಾಡದಿದ್ದರೆ ತೀವ್ರ ರೀತಿಯ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಹಲವರು ಪಾಲ್ಗೊಂಡಿದ್ದರು.

ಕೃಷಿ ಇಲಾಖೆ ರಾಯಭಾರಿಯಾಗಿ ದರ್ಶನ್ ಮುಂದುವರಿಕೆ ಇಲ್ಲ

ಹುಬ್ಬಳ್ಳಿ, ಜೂ.14– ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟ ದರ್ಶನ್ ಅವರನ್ನು ಕೃಷಿ ರಾಯಭಾರಿಯಾಗಿ ಮುಂದು ವರಿಸಲು ಸಾಧ್ಯವಿಲ್ಲ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದರ್ಶನ್‌ಗೆ ವಿಐಪಿ ಸೌಕರ್ಯ ನೀಡಿಲ್ಲ. ಆರೋಪ ಸಾಬೀತಾದರೆ ಅವರಿಗೆ ಶಿಕ್ಷೆಯಾಗುತ್ತದೆ ಎಂದರು.




ಎಂ.ಬಿ.ಪಾಟೀಲ

ಮೂವರು ಉಪ ಮುಖ್ಯಮಂತ್ರಿ ನೇಮಕ ಮಾಡುವಂತೆ ಸಚಿವ ಕೆ.ಎನ್. ರಾಜಣ್ಣ ಹೇಳಿರುವ ಕುರಿತು ಪಕ್ಷದ ವೇದಿಕೆಯಲ್ಲಿ ಚರ್ಚಿಸುತ್ತೇವೆ. ಅಲ್ಲಿ ನಮ್ಮ ಅಭಿಪ್ರಾಯ ತಿಳಿಸುವೆವು. ಲೋಕಸಭಾ ಚುನಾವಣೆಯನ್ನು ಎಲ್ಲರೂ ಗಂಭೀರವಾಗಿ ಎದುರಿಸಿದ್ದಾರೆ. ಹಾಗಾಗಿ, ತಲೆದಂಡ ಪ್ರಶ್ನೆ ಉದ್ಭವಿಸದು. ಹಿನ್ನಡೆ ಕುರಿತು ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ. ಗ್ಯಾರಂಟಿ ಯೋಜನೆಗಳ ಬಗ್ಗೆಯೂ ಚರ್ಚಿಸುತ್ತೇವೆ ಎಂದರು.

ಕುರ್ಚಿ ಖಾಲಿ ಇಲ್ಲ: ಮುಖ್ಯಮಂತ್ರಿ ಆಗುವ ಆಸೆ ಎಲ್ಲರಿಗೂ ಇರುತ್ತದೆ. ಆದರೆ, ಅದನ್ನು ಪಕ್ಷದ ವರಿಷ್ಠರು ತೀರ್ಮಾನಿಸುತ್ತಾರೆ. ಸಿಎಂ ಆಗಲು ಶಾಸಕರ ಬೆಂಬಲ ಬೇಕು. ಸದ್ಯಕ್ಕೆ ಆ ಪ್ರಶ್ನೆಯೇ ಇಲ್ಲ. ಸಿಎಂ ಕುರ್ಚಿ ಖಾಲಿ ಇಲ್ಲ ಎಂದರು.

ಸಂಸದ ಯದುವೀರ್‌ಗೆ ಅಭಿನಂದನೆ...



ಮೈಸೂರು ವಕೀಲರ ಸಂಘಕ್ಕೆ ಭೇಟಿ ನೀಡಿದ್ದ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಜೆಡಿಎಸ್ ವಕ್ತಾರ ಎಸ್.ಆರ್.ರವಿಚಂದ್ರೇಗೌಡ ಅಭಿನಂದಿಸಿದರು. ಮೈಸೂರು ವಕೀಲರ ಸಂಘದ ಅಧ್ಯಕ್ಷ ಲೋಕೇಶ್, ಕಾರ್ಯದರ್ಶಿ ಸುಧೀರ್, ವಕೀಲರಾದ ಕುಮಾರ್, ಗೋಪಾಲಗೌಡ ಉಪಸ್ಥಿತರಿದ್ದರು.

ಅರವಿಂದ ಕೇಜ್ರಿವಾಲ್ ಜಾಮೀನು ಅರ್ಜಿ ವಿಚಾರಣೆ ಜೂನ್ 19ಕ್ಕೆ

ನವದೆಹಲಿ, ಜೂ.14– ಆಪಾದಿತ ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ದೆಹಲಿ ನ್ಯಾಯಾಲಯವು ಶುಕ್ರವಾರ ಜೂನ್ 19ಕ್ಕೆ ನಿಗದಿಪಡಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಸಲ್ಲಿಸಲು ಇ.ಡಿ ಕಾಲಾವಕಾಶ ಕೋರಿದ ನಂತರ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಮುಖೇಶ್ ಕುಮಾರ್ ಪ್ರಕರಣವನ್ನು ಮುಂದೂಡಿದರು.



ಕೋಳಿ ಎಸೆದಂತೆ ಗೋಡೆಗೆ ಎಸೆದ...! ಲಾರಿಗೆ ಆತನ ತಲೆ ಅಪ್ಪಳಿಸಿದ...!! ಬೌನ್ಸರ್ ಏಟು ತಡಿತಾನೆಯೇ...!!!

ರೇಣುಕಾಸ್ವಾಮಿ ಹತ್ಯೆ ಪ್ರಕರಣದ ತನಿಖಾ ತಂಡದ ಸದಸ್ಯನ ಭಯಾನಕ ಕಾಮೆಂಟ್ರಿ

ಬೆಂಗಳೂರು, ಜೂ. 14– ರೇಣುಕಾಸ್ವಾಮಿಯನ್ನು ಕೋಳಿ ಎಸೆದಂತೆ ಗೋಡೆಗೆ ಎಸೆದ...! ಲಾರಿಗೆ ಆತನ ತಲೆ ಅಪ್ಪಳಿಸಿದ... ಚಿಕ್ಕ ಹುಡುಗ ಬೌನ್ಸರ್‌ಗಳ ಏಟು ತಡೆಯುತ್ತಾನೆಯೇ... ಹೈಕೋರ್ಟ್‌ನಲ್ಲೂ ಬೇಲ್ ಸಿಗಲ್ಲ... ಇದು ನಟ ದರ್ಶನ್‌ನನ್ನು ಬಂಧಿಸಿದ ತಂಡದಲ್ಲಿದ್ದ ಪೊಲೀಸ್ ಅಧಿಕಾರಿಯೊಬ್ಬರು ತಮ್ಮ ಸ್ನೇಹಿತನೊಂದಿಗೆ ನಡೆಸಿರುವ ಸಂಭಾಷಣೆ. ಈ ಆಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಸ್ನೇಹಿತನೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿರುವ ಪೊಲೀಸ್ ಅಧಿಕಾರಿ, ಈ ತರಹ ಕೊಲೆ ಮಾಡ್ಬಿಟ್ರೆ 302 ಸೆಕ್ಷನ್‌ನಲ್ಲಿ ಅರೆಸ್ಟ್ ಮಾಡ್ಲೇಬೇಕಲ್ವಾ, ಅವನು (ರೇಣುಕಾಸ್ವಾಮಿ) ಚಿಕ್ಕ ಹುಡುಗ. ಅವನನ್ನು ದರ್ಶನ್ ಕೋಳಿ ಎಸೆದ ಹಾಗೆ ಗೋಡೆಗೆ ಎತ್ತಿ ಎಸೀತಾನೆ. ಈಗ ಸೀಜ್ ಮಾಡಿದ್ದೀವಲ್ಲಾ ಆ ಲಾರಿಗೆ ಆ ಹುಡುಗನ ತಲೆ ಅಪ್ಪಳಿಸ್ತಾನೆ. ಆ ಹುಡುಗನಿಗೆ ಬರೆ ಹಾಕಿದ್ದಾರೆ. ಸಿಕ್ಕ ಸಿಕ್ಕ ಕಡೆ ಹೊಡೆದಿದ್ದಾರೆ. ಬೌನ್ಸರ್‌ಗಳು ಹೊಡೆಯುವುದನ್ನು ಆ ಹುಡುಗನಿಂದ ತಡೆದುಕೊಳ್ಳುವುದಕ್ಕಾಗುತ್ತದೆಯೇ ಎಂದು ಪ್ರಶ್ನಿಸಿದ್ದಾರೆ.



ಹೌದಾ? ದರ್ಶನ್ ಹಾಗೆ ಮಾಡಿದ್ನಾ? ಎಂದು ಸ್ನೇಹಿತ ಕೇಳಿದಾಗ, ಅದೆಲ್ಲಾ ಸಿಸಿ ಕ್ಯಾಮರಾದಲ್ಲಿ ರೆಕಾರ್ಡ್ ಆಗಿದೆ. ಅದನ್ನೆಲ್ಲಾ ನೋಡಿಯೇ ಅವನನ್ನು (ದರ್ಶನ್) ಅರೆಸ್ಟ್ ಮಾಡಿರೋದು. ನಮ್ಮ ಸಿಪಿಐಗೆ ಬಹಳ ಪ್ರೆಷರ್ ಬಂತು. ಆದ್ರೂ ಕೇರ್ ಮಾಡ್ದೆ ಅವರು ದರ್ಶನ್‌ನ ಎತ್ತಾಕೊಂಡ್ ಬಂದ್ರು ಎಂದು ಪೊಲೀಸ್ ಅಧಿಕಾರಿ ಹೇಳುತ್ತಾರೆ. ರಾಜಕಾರಣಿಗಳು ಪ್ರೆಷರ್ ಕೊಟ್ರಾ ಎಂದು ಸ್ನೇಹಿತ ಕೇಳಿದಾಗ, ಇಲ್ಲಾ ಇಲ್ಲ, ಬೇರೆ ಬೇರೆ ಕಡೆಯಿಂದ ಪ್ರೆಷರ್ ಬಂತು ಎಂದು ಅಧಿಕಾರಿ ಹೇಳಿದ್ದಾರೆ.

ಆಮೇಲೆ ಆ ಹುಡುಗಿ ಪವಿತ್ರಾಗೌಡಗೂ ದರ್ಶನ್ ಹೊಡೆದಿದ್ದಾನೆ. ಅವಳು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿ ಸೋಮವಾರ ಡಿಸ್ಚಾರ್ಜ್ ಆಗಿದ್ದಾಳೆ ಎಂದಿರುವ ಅಧಿಕಾರಿ, ಇನ್ನು ಮುಂದೆ ಹಬ್ಬ ಎಂದು ಹೇಳುತ್ತಾರೆ. ಯಾಕೆ? ಎಂದು ಸ್ನೇಹಿತ ಕೇಳಿದಾಗ, ಆರು ದಿನ ಪೊಲೀಸ್ ಕಸ್ಟಡಿಗೆ ಕೊಟ್ಟಿದ್ದಾರಲ್ಲಾ. ತಪ್ಪಿಸ್ಕೊಳ್ಳೋಕೆ ಆಗಲ್ಲ. ಆರು ತಿಂಗಳಾದರೂ ಹೊರಗಡೆ ಬರೋಕ್ಕಾಗಲ್ಲ. ಹೈಕೋರ್ಟ್ ಕೂಡ ಬೇಲ್ ಕೊಡಲ್ಲ. ಅವನು ಸುಪ್ರೀಂ ಕೋರ್ಟ್‌ಗೆ ಹೋಗಬೇಕಾಗುತ್ತೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ನಟ ದರ್ಶನ್ ಅವರನ್ನು ಮಂಗಳವಾರ ಬೆಳಗ್ಗೆ ಪೊಲೀಸರು ಬಂಧಿಸಿದ್ದು, ಸಂಜೆ ವೇಳೆಗೆ ಅವರನ್ನು ನ್ಯಾಯಾಲಯ ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿತ್ತು. ಪೊಲೀಸ್ ಅಧಿಕಾರಿಯ ಸಂಭಾಷಣೆಯನ್ನು ಗಮನಿಸಿದರೆ ಅವರು ಮಂಗಳವಾರದಂದೇ ಸ್ನೇಹಿತನೊಂದಿಗೆ ಮಾತನಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತಿದೆ. ಅಲ್ಲದೇ, ದರ್ಶನ್ ಬಂಧನಕ್ಕೂ ಮುನ್ನವೇ ಕಾಮಾಕ್ಷಿ ಪಾಳ್ಯ ಠಾಣೆ ಇನ್ಸ್‌ಪೆಕ್ಟರ್ ಗಿರೀಶ್ ನಾಯಕ್ ಅವರು ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಗಮನಿಸಿದ ನಂತರವೇ ದರ್ಶನ್‌ನನ್ನು ತಾಂತ್ರಿಕ ಸಾಕ್ಷಿ ಆಧಾರದ ಮೇರೆಗೆ ಬಂಧಿಸಿದ್ದಾರೆ ಎಂಬುದು ಕೂಡ ಸ್ಪಷ್ಟವಾಗುತ್ತದೆ.

ಕಾಂಗ್ರೆಸ್ ಪರ ಪ್ರಚಾರ ಮಾಡಿದ್ದಕ್ಕೆ ಸರ್ಕಾರದಿಂದ ದರ್ಶನ್ ರಕ್ಷಣೆ ಮಾಡಲಾಗುತ್ತಿದೆಯೇ?

ಬೆಂಗಳೂರು, ಜೂ.14– ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪರ ಪ್ರಚಾರ ಮಾಡಿದ್ದಕ್ಕೆ ನಟ ದರ್ಶನ್ ಅವರನ್ನು ಸರ್ಕಾರ ರಕ್ಷಿಸುವ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಿಡಿಕಾರಿದ್ದಾರೆ.



ಕೇಂದ್ರ ಸಚಿವರಾಗಿ ಅಧಿಕಾರ ಸ್ವೀಕರಿಸಿದ ನಂತರ ಬೆಂಗಳೂರಿಗೆ ಆಗಮಿಸಿದ ಅವರು, ಮಾಧ್ಯಮದವರೊಂದಿಗೆ ಮಾತನಾಡಿ, ಕಾಂಗ್ರೆಸ್ ಬಂದ ಮೇಲೆ ಯಾರಿಗೂ ರಕ್ಷಣೆ ಇಲ್ಲ. ರಾಜ್ಯದಲ್ಲಿ ನಿರಂತರ ಕೊಲೆಗಳು ನಡೆಯುತ್ತಿವೆ, ಸರ್ಕಾರ ಕೊಲೆಗಡುಕರ ಪರ ನಿಂತಿದೆ. ಕೊಲೆಗಡುಕರಿಗೆ ರಾಜ್ಯದಲ್ಲಿ ಭಯ ಇಲ್ಲದಂತಾಗಿದೆ. ನಟ ದರ್ಶನ್ ಕಾಂಗ್ರೆಸ್ ಪರ ಚುನಾವಣೆಯಲ್ಲಿ ಕೆಲಸ ಮಾಡಿದರು ಎಂಬ ಕಾರಣಕ್ಕಾಗಿ ಅವರಿಗೆ ಶಾಮಿಯಾನ ಹಾಕಿ ರಕ್ಷಣೆ ಮಾಡ್ತಾದ್ದಾರಾ? ಅವರು ಇರುವ ಠಾಣೆಗೆ ರಕ್ಷಣೆ ಕೊಡಲಾಗಿದೆ. ಜನರಿಗೊಂದು ಕಾನೂನು ದೊಡ್ಡವರಿಗೊಂದು ಕಾನೂನು, ಕಾಂಗ್ರೆಸ್ ಕಾರ್ಯಕರ್ತರಿಗೊಂದು ಕಾನೂನು ಎಂಬ ಸಂದೇಶವನ್ನು ಈ ಸರ್ಕಾರ ರವಾನಿಸುತ್ತಿದೆ ಎಂದು ಆರೋಪಿಸಿದರು.

ಸೋತಿದ್ದೇನೆ ಸತ್ತಿಲ್ಲ...! ಬನ್ನಿ ಹೊಸ ಚಾಪ್ಟರ್ ಆರಂಭಿಸೋಣ...

ಚಾಮುಂಡೇಶ್ವರಿ ಕ್ಷೇತ್ರದ ಮತದಾರರಿಗೆ ಕೃತಜ್ಞತಾ ಸಭೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷಣ ಸಮಾಧಾನ

ಮೈಸೂರು, ಜೂ.14(ಎಂಕೆ)– ಮೈಸೂರು–ಕೊಡಗು ಲೋಕಸಭಾ ಚುನಾವಣೆಯಲ್ಲಿ ಸೋತಿದ್ದೇನೆಯೇ ಹೊರತು ಸತ್ತಿಲ್ಲ. ನನಗೆ ಮತ ನೀಡಿದವರ, ನೀಡದೆ ಇರುವವರ ಕೆಲಸವನ್ನೂ ಮಾಡಿಕೊಡಲು ದಿನದ 24 ಗಂಟೆಯೂ ಸಿದ್ಧನಿದ್ದೇನೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷಣ ಮತದಾರರು, ಕಾರ್ಯ ಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ನಡೆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮತದಾರರಿಗೆ ಕೃತಜ್ಞತಾ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ 6,56,240 ಮತದಾರರು ನನಗೆ ವೋಟ್ ಮಾಡಿದ್ದು, ಎಲ್ಲರಿಗೂ ಕೃತಜ್ಞನಾಗಿದ್ದೇನೆ. ಸೋತಿದ್ದರೂ 8 ವಿಧಾನಸಭಾ ಕ್ಷೇತ್ರದಿಂದ ಯಾರೇ ಬಂದರೂ ಅವರ ಕೆಲಸ ಮಾಡಿಕೊಡಲು ಸಿದ್ಧವಾಗಿದ್ದೇನೆ. ಪಕ್ಷದ ಕಚೇರಿಯಲ್ಲೇ ವಾರದಲ್ಲಿ 3 ದಿನ ಇರಲಿದ್ದೇನೆ ಎಂದರು.

ಪಕ್ಷದ ಕಾರ್ಯಕರ್ತರು, ಮುಖಂಡರು, ಶಾಸಕರು ಸೇರಿದಂತೆ ಎಲ್ಲರೂ ನನ್ನ ಪರವಾಗಿ ಕೆಲಸ ಮಾಡಿದ್ದಾರೆ. ಆದಾಗ್ಯೂ ಸೋತಿರುವುದಕ್ಕೆ ನ್ಯೂನತೆಗಳೇನು ಎಂಬುದನ್ನು ಕಂಡುಕೊಂಡು ಸರಿಪಡಿಸಿಕೊಳ್ಳೋಣ. ರಾಜ್ಯದಲ್ಲಿ ನಮ್ಮದೇ ಸರ್ಕಾರವಿದೆ. ಧೃತಿಗೆಡುವುದು ಬೇಡ. ನಿಜವಾಗಿ ದುಡಿದಿರುವ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಟ್ಟು, ಎಲ್ಲಾ ಜಾತಿ–ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಮೂಲಕ ಹೊಸ ಚಾಪ್ಟರ್ ಶುರು ಮಾಡೋಣ ಎಂದು ಕರೆ ನೀಡಿದರು.

> ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಉತ್ಸಾಹದಿಂದ ಕೆಲಸ ಮಾಡಿದ್ದಾರೆ. ಮತದಾರರ ಮನೆ ಮನೆಗೆ ತೆರಳಿ ಮತ ನೀಡುವಂತೆ ಮನವೊಲಿಸಿದ್ದರ ಪರಿಣಾಮವಾಗಿ ಕಳೆದ ಬಾರಿಗಿಂತಲೂ ಈ ಬಾರಿ ಹೆಚ್ಚಿನ ಮತಗಳು ಲಭಿಸಿವೆ. ಮೈತ್ರಿ ಮಾಡಿಕೊಂಡಿದ್ದರಿಂದಷ್ಟೇ ಬಿಜೆಪಿ ಅಭ್ಯರ್ಥಿಗೆ ಗೆಲುವುವಾಗಿದೆಯೇ ಹೊರತು ಕಾಂಗ್ರೆಸ್ ಅಭ್ಯರ್ಥಿಗೆ ನಿರೀಕ್ಷೆಗೂ ಮೀರಿ ಮತದಾರರು ಲೀಡ್ ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಒಟ್ಟಾಗಿ ಕ್ಷೇತ್ರದ ಜನತೆಯ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಪಕ್ಷ ಸಂಘಟನೆ ಮಾಡಬೇಕು.
>
> -ಡಾ.ಯತೀಂದ್ರ, ವಿಧಾನ ಪರಿಷತ್ ಸದಸ್ಯ



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಅಭಿನಂದನೆ ಹಾಗೂ ಕೃತಜ್ಞತಾ ಸಭೆಯಲ್ಲಿ ನೂತನ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ಜಿಲ್ಲಾ ಕಾಂಗ್ರೆಸ್ ವತಿಯಿಂದ ಸನ್ಮಾನಿಸಲಾಯಿತು. ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಮತ್ತಿತರರಿದ್ದರು.

14,77,520 ಮತದಾರರು ಮತ ಚಲಾಯಿಸಿದ್ದು, ಅದರಲ್ಲಿ ಪಕ್ಕಾ ಕಾಂಗ್ರೆಸ್ ಮತದಾರರ ಸಂಖ್ಯೆಯೇ ಹತ್ತೂವರೆ ಲಕ್ಷ ಇದೆ. ಪ್ರಮುಖವಾದ 5 ಸಮುದಾಯದ ಶೇ.95 ರಷ್ಟು ಮತ ನಮಗೆ ಬಂದಿದೆ. ಯಾವುದೇ ಕಾರಣಕ್ಕೂ, ಯಾವ ಹಂತದಲ್ಲಿಯೂ ಸೋಲುವಂತಿರಲಿಲ್ಲ. ಆದರೆ ಸೋಲು ಹೇಗಾಯಿತು ಎಂಬುದು ಇನ್ನೂ ಅರ್ಥವಾಗುತ್ತಿಲ್ಲ. ಚುನಾವಣೆಯಲ್ಲಿ ಸೋತ ಬಳಿಕ ಬೂತ್‌ಗಳ ಪರಿಶೀಲನೆ ನಡೆಸಿದಾಗ ಬಹಳಷ್ಟು ಜನ ತಮ್ಮೊಳಗೆಯೇ ಆಕ್ರೋಶವನ್ನಿಟ್ಟುಕೊಂಡು ನಮ್ಮ ವಿರುದ್ಧ ಮತ ಚಲಾಯಿಸಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಪಡೆದುಕೊಳ್ಳುತ್ತೇವೆ. ಆದರೆ, ವೋಟ್ ಹಾಕಲ್ಲ ಎನ್ನುತ್ತಾರೆ. ಕಾರಣ ಕೇಳಿದರೆ ಮೌನವಾಗುತ್ತಾರೆ. ಏನ್ ಸಮಸ್ಯೆ ಎಂಬುದನ್ನು ಹೇಳುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಚುನಾವಣೆ ಎದುರಿಸುವುದಾದರೂ ಹೇಗೆ ಎಂದು ಬೇಸರ ಹೊರಹಾಕಿದರು.

ಸಿದ್ದರಾಮಯ್ಯರೇ ನಮ್ ಮನೆ ದೇವ್ರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾನ್ಯ ಕಾರ್ಯಕರ್ತನಾಗಿರುವ ನನಗೆ ಟಿಕೆಟ್ ನೀಡಿದರಲ್ಲದೆ ಎಲ್ಲಾ ರೀತಿಯಲ್ಲೂ ಸಹಾಯ ಮಾಡಿದರು. ನನ್ನ ಪಾಲಿಗೆ ಸಿದ್ದರಾಮಯ್ಯ ಅವರೇ ದೇವ್ರು, ಆದ್ರೆ ನನ್ನ ಹಣೇ ಬರಹ ಸರಿಯಿಲ್ಲ ಸೋತೆ. ಅಲ್ಲದೆ ವಿವಿಧ ಸಂಘಟನೆಗಳು, ರೈತ ಸಂಘಟನೆಗಳು, ಪ್ರಗತಿಪರರು ಸ್ವತಃ ನನ್ನ ಪ್ರಚಾರ ಮಾಡಿದರು ಅವರೆಲ್ಲರಿಗೂ ಕೃತಜ್ಞನಾಗಿದ್ದೇನೆ ಎಂದರು.

ಗ್ಯಾರಂಟಿ ನಿಲ್ಲಿಸಿ ಎಂದಿಲ್ಲ: ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿ ಹಾಗೂ ಮತದಾರರನ್ನು ಸ್ಯಾಡಿಸ್ಟ್ ಎಂದು ನಾನು ಹೇಳಿಲ್ಲ. ನಾನು ಹೇಳಿದ್ದು 3 ಲಕ್ಷ ರೂ.ಸಂಬಳ ಪಡೆಯುವ ವ್ಯಕ್ತಿಯೂ 200 ಯೂನಿಟ್ ಉಚಿತ ವಿದ್ಯುತ್ ಪಡೆದುಕೊಳ್ಳುತ್ತಿದ್ದಾನೆ ಅವರೇ ಬೇಡ ಎಂದ ಮೇಲೆ ಉಚಿತ ನೀಡುವುದ್ಯಾಕೆ. ಅಂತಹವರನ್ನು ರೀವಿವ್ ಮಾಡಿ, ರೀ ಲುಕ್ ಮಾಡಿ ಎಂದಷ್ಟೇ ಹೇಳಿದ್ದೇನೆ ಹೊರತು ಗ್ಯಾರಂಟಿ ನಿಲ್ಲಿಸಿ ಎಂದಿಲ್ಲ. ಹಾಗೆಯೇ ಇಡೀ ವ್ಯವಸ್ಥೆಯೇ ಸ್ಯಾಡಿಸ್ಟ್ ವಾತಾವರಣದಲ್ಲಿದೆ ಎಂದನೇ ಹೊರತು ಮತದಾರರು ಸ್ಯಾಡಿಸ್ಟ್ ಎಂದಿಲ್ಲ. ಒಬ್ಬ ವ್ಯಕ್ತಿ ಕಷ್ಟದಲ್ಲಿರುವುದನ್ನು ನೋಡಿ ಆನಂದಪಡುವ ವ್ಯಕ್ತಿಯದ್ದು ಸ್ಯಾಡಿಸ್ಟ್ ನೇಚರ್. ಪ್ರಕೃತಿಯೇ ನಮ್ಮನ್ನು ನೋಡಿ ವಿಕೃತಿಯಂತೆ ನಡೆದುಕೊಳ್ಳುತ್ತಿದೆ ಎಂದೇ. ಆದರೆ ಕೆಲವು ಮಾಧ್ಯಮಗಳು ನನ್ನ ಹೇಳಿಕೆ ತಿರುಚಿ ಇಡೀ ದಿನ ಪ್ರಚಾರ ಮಾಡಿದವು ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ಮುಖಂಡರಾದ ಕೃಷ್ಣಕುಮಾರ್ ಸಾಗರ್, ಬಿ.ಎಂ.ರಾಮು, ನಾಗವಾಲ ನರೇಂದ್ರ, ಯರ ಗನಹಳ್ಳಿ ಮಾದೇಗೌಡ, ಬೀರಿಹುಂಡಿ ಬಸವಣ್ಣ, ಮಂಜುಳಾ ಮಾನಸ, ಚಿಕ್ಕಣ್ಣ, ರಾಕೇಶ್ ಪಾಪಣ್ಣ ಮತ್ತಿತರರು ಉಪಸ್ಥಿತರಿದ್ದರು.

> **ತವರು ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳಿಗೆ ಮುಖಭಂಗ ಮಾಡಿದ್ದು ನೋವು ತಂದಿದೆ...!**
>
> ನಾನು ಸೋತಿರುವುದಕ್ಕಿಂತಲೂ ನನಗೆ ನೋವು ತಂದಿರುವುದು ಸಿದ್ದರಾಮಯ್ಯ ಅವರಿಗೆ ತವರು ಜಿಲ್ಲೆಯಲ್ಲಾದ ಅವಮಾನ. ಅವರಿಗೆ ಮುಖಭಂಗ ಮಾಡಬಾರದಿತ್ತು. 2013 ರಿಂದ 2018ರವರೆಗೆ ಮೈಸೂರು ನಗರದ ಅಭಿವೃದ್ಧಿಗೆ ಸುಮಾರು 3800 ಕೋಟಿ ರೂ. ಅನುದಾನ ಕೊಟ್ಟಿದ್ದರು. ಅದೇ 2018–2023ವರೆಗೆ ಬಿಜೆಪಿ–ಜೆಡಿಎಸ್ ಅಧಿಕಾರದಲ್ಲಿದ್ದರೂ ಮೈಸೂರಿಗೆ ಐದು ರೂಪಾಯಿ ಕೊಡಲಿಲ್ಲ. ಮತ್ತೆ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆದಮೇಲೆ ಮೈಸೂರು ನಗರದ ಅಭಿವೃದ್ಧಿಗೆ ಕಿದ್ವಾಯಿ ಆಸ್ಪತ್ರೆ ಸೇರಿ 1500 ಕೋಟಿ ರೂ. ಅನುದಾನ ಕೊಟ್ಟಿದ್ದಾರೆ. ಇಷ್ಟೆಲ್ಲಾ ಅನುಕೂಲ ಮಾಡಿಕೊಟ್ಟರೂ ಮೈಸೂರು ಜನ ಬೆಂಬಲ ನೀಡದಿರುವುದು ಅತೀವ ನೋವುಂಟು ಮಾಡಿದೆ
>
> - ಎಂ.ಲಕ್ಷ್ಮಣ, ಪರಾಜಿತ ಕಾಂಗ್ರೆಸ್ ಅಭ್ಯರ್ಥಿ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಭಿನಂದನಾ ಕಾರ್ಯಕ್ರಮ ಮುಂದೂಡಿಕೆ

ಇಂದು ಮಂಡ್ಯಕ್ಕೆ ಹೆಚ್ಡಿಕೆ ಆಗಮನ, ಕೇಂದ್ರ ಸಚಿವರ ಕಚೇರಿ ಉದ್ಘಾಟನೆ, ಎರಡು ದಿನ ಮಂಡ್ಯದಲ್ಲೇ ವಾಸ್ತವ್ಯ



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು.

ಮಂಡ್ಯ,ಜೂ.14– ಭಾನುವಾರ ಸಂಜೆ 5ಗಂಟೆಗೆ ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಕೇಂದ್ರದ ಉಕ್ಕು ಹಾಗೂ ಭಾರೀ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಅಭಿನಂದನಾ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮ ನಡೆಸಲು ರೂಪುರೇಷೆ ಸಿದ್ಧಪಡಿಸುತ್ತಿದ್ದೆವು. ಆದರೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಕಾನೂನಾತ್ಮಕ ಸಮಸ್ಯೆ ಉಂಟಾಗಿ ಕೋರ್ಟ್ ವಾರೆಂಟ್ ನೀಡಿರುವುದರಿಂದ ಸಂಕಷ್ಟದ ಸಂದರ್ಭದಲ್ಲಿ ಸಂಭ್ರಮಾಚರಣೆ ಕಾರ್ಯಕ್ರಮ ಮಾಡುವುದು ಬೇಡ ಎಂದು ಸ್ವತ: ಕುಮಾರಸ್ವಾಮಿ ಅವರು ಸೂಚನೆ ನೀಡಿರುವ ಹಿನ್ನಲೆಯಲ್ಲಿ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಲೋಕಸಭಾ ಚುನಾವಣೆ ಸಮಯದಲ್ಲಿ ಹೆಚ್ಡಿಕೆ ಗೆಲುವಿಗೆ ಯಡಿಯೂರಪ್ಪ ಮಹತ್ವದ ಪಾತ್ರ ವಹಿಸಿದ್ದರು. ಮಂಡ್ಯದಲ್ಲಿ ಪ್ರಚಾರದ ಸಂದರ್ಭದಲ್ಲಿ ನೀವು ಸಂಸದರಿಗೆ ಮತ ಹಾಕುತ್ತಿಲ್ಲ ಕೇಂದ್ರ ಸಚಿವರಿಗೆ ಮತಕೊಡುತ್ತಿದ್ದೀರಿ ಎಂದು ಅಬ್ಬರದ ಭಾಷಣಗಳನ್ನು ಮಾಡಿದ್ದರು. ಮಂಡ್ಯದವರೇ ಆದ ಯಡಿಯೂರಪ್ಪಗೆ ಮಂಡ್ಯದಲ್ಲಿ ಅಮದ್ದೇ ಆದ ಓಟ್ ಬ್ಯಾಂಕ್ ಇದೆ. ಕಾರ್ಯಕ್ರಮದಲ್ಲಿ ಯಡಿಯೂರಪ್ಪ ಸಹ ಉಪಸ್ಥಿತರಿರಬೇಕೆಂಬ ಹಿನ್ನಲೆಯಲ್ಲಿ ಮತ್ತೊಂದು ದಿನಾಂಕ ನಿಗದಿ ಮಾಡಿ ಕಾರ್ಯಕ್ರಮ ನಡೆಸುತ್ತೇವೆ ಎಂದು ತಿಳಿಸಿದರು.

ಇಂದು ಮಂಡ್ಯಗೆ ಹೆಚ್ಡಿಕೆ: ಭಾನುವಾರ ಆಗಮಿಸಬೇಕಿದ್ದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅಭಿನಂದನಾ ಕಾರ್ಯಕ್ರಮ ರದ್ದುಗೊಂಡಿರುವ ಹಿನ್ನಲೆಯಲ್ಲಿ ನಾಳೆ (ಶನಿವಾರ) ಮಂಡ್ಯಕ್ಕೆ ಆಗಮಿಸಲಿದ್ದು, ಜಿಲ್ಲೆಯ ಗಡಿ ಭಾಗ ಮದ್ದೂರು ತಾಲೂಕಿನ ನಿಡಘಟ್ಟ ಬಳಿ ಹೆಚ್‌ಡಿಕೆಗೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ನೇತೃತ್ವದಲ್ಲಿ ಭರ್ಜರಿ ಸ್ವಾಗತ ಕೋರಲಾಗುವುದು. ಬಳಿಕ ಮಂಡ್ಯ ನಗರದ ಸಂಜಯ ವೃತ್ತದಿಂದ ಡಿಸಿ ಕಚೇರಿವರೆಗೆ ಬೃಹತ್ ರೋಡ್ ಷೋನಲ್ಲಿ ಕರೆತರಲಾಗುವುದು ಎಂದರು.

ಶನಿವಾರ ಮಧ್ಯಾಹ್ನ 3ಗಂಟೆಗೆ ಮಂಡ್ಯ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೇಂದ್ರ ಸಚಿವರ ನೂತನ ಕಚೇರಿ ಉದ್ಘಾಟಿಸಲಿದ್ದು, ನಂತರ ಜಿಲ್ಲಾಧಿಕಾರಿ ಸೇರಿದಂತೆ ಅಧಿಕಾರಿಗಳ ಸಭೆ ನಡೆಸಲಿದ್ದಾರೆ. ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಲಿದ್ದು, ಡಿಸಿ ಕಚೇರಿ ಆವರಣದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ, ಮಂಡ್ಯ ನಗರದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ ಎಂದು ವಿವರಿಸಿದರು.

ಭಾನುವಾರ ಬೆಳಿಗ್ಗೆ ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಠಕ್ಕೆ ತೆರಳಲಿರುವ ಹೆಚ್ಡಿಕೆ ಕಾಲಭೈರವೇಶ್ವರ ಸ್ವಾಮಿಯ ಆಶೀರ್ವಾದ ಪಡೆದು ನಿರ್ಮಲಾನಂದನಾಥಶ್ರೀಗಳನ್ನು ಭೇಟಿ ಮಾಡಿ ನಂತರ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಪಕ್ಷದ ಐಟಿಸೆಲ್ ಜಿಲ್ಲಾಧ್ಯಕ್ಷ ನವೀನ್ ಉಪಸ್ಥಿತರಿದ್ದರು.

ಇಂದು, ನಾಳೆ ನೀರು ಸರಬರಾಜು ವ್ಯತ್ಯಯ

ಮಂಡ್ಯ, ಜೂ.14– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆಯಡಿ ಶ್ರೀರಂಗಪಟ್ಟಣ ಸಮೀಪ ಇರುವ ಮೂಲಸ್ಥಾವರಕ್ಕೆ ವಿದ್ಯುತ್ ಸರಬರಾಜು ಮಾಡಲು ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಗೆ ಸೇರಿದ 66/11 ಕೆವಿ ವಿದ್ಯುತ್ ಉಪ ವಿತರಣಾ ಕೇಂದ್ರದ ನಿರ್ವಹಣಾ ಕಾಮಗಾರಿಯನ್ನು ಸೆಸ್ಕ್ ವತಿಯಿಂದ ಕೈಗೊಳ್ಳಬೇಕಾಗಿರುವುದರಿಂದ ನೀರನ್ನು ಪಂಪು ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಜೂ.15 ಮತ್ತು 16 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ನೀರು ಬಂದ ವೇಳೆ ಶೇಖರಿಸಿಟ್ಟುಕೊಂಡು ಜಲಮಂಡಳಿಯೊಂದಿಗೆ ಸಹಕರಿಸಬೇಕೆಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮಂಡ್ಯ ನಿರ್ವಹಣಾ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಲಹಳ್ಳಿ ಗ್ರಾಮ ಪಂಚಾಯಿತಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಆದರ್ಶ್ ಹಾಗೂ ಉಪಾಧ್ಯಕ್ಷರಾಗಿ ಅಕ್ಷತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಪೈಲ್ವಾನ್ ಮುಕುಂದ, ಪಿ.ಎಚ್.ಚಂದ್ರಶೇಖರ್, ಪಿ.ಎಚ್.ನಾಗರಾಜು, ವಿ.ಶಂಕರೇಗೌಡರು, ಪಿ.ಎಸ್.ರಮೇಶ್ ಬಾಬು, ಪಿ.ಎಮ್.ಪ್ರಭಾಕರ್, ಟೆಂಪೋ ಕೃಷ್ಣಪ್ಪ, ಸುರೇಶ್, ಸಂಜು, ಗ್ರಾಮ ಪಂಚಾಯಿತಿ ಸದಸ್ಯರು, ಚುನಾವಣಾಧಿಕಾರಿ ವೇಣು ಪಿಡಿಓ ರವಿ ಮತ್ತು ಗ್ರಾಮದ ಮುಖಂಡರುಗಳು ಉಪಸ್ಥಿತರಿದ್ದರು.

ಮಂಡ್ಯದಲ್ಲಿ ವಿಶ್ವ ರಕ್ತ ದಾನಿಗಳ ದಿನಾಚರಣೆ

ದಾನಗಳಲ್ಲಿ ಶ್ರೇಷ್ಠವಾದದ್ದು ರಕ್ತದಾನ



ವಿಶ್ವ ರಕ್ತ ದಾನಿಗಳ ದಿನಾಚರಣೆ ಅಂಗವಾಗಿ ಜನಜಾಗೃತಿ ಜಾಥಾ ನಡೆಸಲಾಯಿತು.

ಮಂಡ್ಯ,ಜೂ.14– ರಕ್ತದಾನ ಎಂಬುದು ಎಲ್ಲ ದಾನಕ್ಕಿಂತಲೂ ಮಿಗಿಲಾದದ್ದು, ರಕ್ತದಾನ ಮಾಡಿದರೆ ಬೇರೊಬ್ಬರಿಗೆ ಜೀವದಾನ ಮಾಡಿದಂತೆ. ಆದರಿಂದ ದಾನಗಳಲ್ಲಿ ಶ್ರೇಷ್ಠದಾನ ರಕ್ತದಾನ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ. ಮೋಹನ್ ಅಭಿಪ್ರಾಯಪಟ್ಟರು.

ಜಿಲ್ಲಾಧಿಕಾರಿ ಕಛೇರಿ ಆವರಣದಲ್ಲಿ ವಿಶ್ವ ರಕ್ತ ದಾನಿಗಳ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜನಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು, ರಕ್ತದಾನ ಎಂಬುವುದು ದಾನಗಳಲ್ಲೇ ಶ್ರೇಷ್ಠವಾದ ದಾನ, ನಿಯಮಿತವಾಗಿ ರಕ್ತದಾನ ಮಾಡುವುದರಿಂದ ಮನುಷ್ಯನು ಆರೋಗ್ಯ ವೃದ್ಧಿಯಾಗುತ್ತದೆ. ರಕ್ತದಾನದಿಂದ ಆರೋಗ್ಯಕ್ಕೆ ತೊಂದರೆಯಾಗುತ್ತದೆ ಎಂಬ ಮನೋಭಾವನ್ನು ದೂರಮಾಡಿಕೊಳ್ಳಬೇಕು ಎಂದರು.

ಈ ವರ್ಷದ ಘೋಷವಾಕ್ಯವಾದ 20 ವರ್ಷಗಳ ರಕ್ತದಾನ ಸಂಭ್ರಮ, ಧನ್ಯವಾದ ರಕ್ತದಾನಿಗಳಿಗೆ ಎಂಬ ವಾಕ್ಯವನ್ನು ಇಟ್ಟುಕೊಂಡು ಇಂದು ನಾವು ಜನರಿಗೆ ಅರಿವು ಮೂಡಿಸುವುದಕ್ಕೆ ಜನಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಆರೋಗ್ಯವಂತ ಯುವಜನತೆಯು ರಕ್ತದಾನ ಮಾಡುವುದರಿಂದ ಅಪಘಾತ, ಶಸ್ತ್ರಚಿಕಿತ್ಸೆಯ ಸಂದರ್ಭದಲ್ಲಿ, ಡೆಂಗ್ಯೂ, ರಕ್ತದ ಕೊರತೆ ಇರುವವರಿಗೆ ಬಹಳ ಪ್ರಯೋಜನವಾಗುತ್ತದೆ ಯುವ ಜನತೆಯು ರಕ್ತದಾನ ಮಾಡುವುದಕ್ಕೆ ಮುಂದೆ ಬನ್ನಿ ಎಂದು ಹೇಳಿದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಎಂ.ಎನ್.ಆಶಾಲತಾ ಮಾತನಾಡಿ, ಜಿಲ್ಲೆಯಲ್ಲಿ 2000 ಯೂನಿಟ್‌ಗಳಷ್ಟು ರಕ್ತದ ಅವಶ್ಯಕತೆ ಇದೆ. ಯುವಜನತೆಯು ಸ್ವಯಂ ಪ್ರೇರಿತರಾಗಿ ಮುಂದೆ ಬಂದು ರಕ್ತದಾನ ಮಾಡಿ. ಇಂದಿನ ಯುವಕ ಯುವತಿಯರು ಮುಂದೆ ಬಂದು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಬೇಕು, ಇಂದಿಗೆ ವಿಶ್ವ ರಕ್ತದಾನ ದಿನಾಚರಣೆ ಪ್ರಾರಂಭವಾಗಿ 20 ವರ್ಷಗಳು ಆಗುತ್ತದೆ. ಈ ಬಾರಿ ಕಾರ್ಯಕ್ರಮವನ್ನು ವಿಶಿಷ್ಠವಾಗಿ ಆಚರಿಸಲು ಯೋಜಿಸಿದ್ದು, ಜಿಲ್ಲಾ ಮಟ್ಟದಲ್ಲಿ ಅತಿ ಹೆಚ್ಚು ರಕ್ತದಾನ ಮಾಡಿರುವ ಮತ್ತು ಬೇರೆಲ್ಲೂ ಸನ್ಮಾನ ಮಾಡಿಸಿಕೊಂಡಿರದ ರಕ್ತ ದಾನಿಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗುವುದು ಎಂದರು.

ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯಿಂದ ಹಮ್ಮಿಕೊಳ್ಳುವ ರಕ್ತದಾನ ಶಿಬಿರಗಳಿಂದ ಶೇಕಡಾ 32 ರಿಂದ 60 ರಷ್ಟು ರಕ್ತ ಮಾತ್ರ ಸಂಗ್ರಹವಾಗುತ್ತದೆ, ಶೇ 100 ರಷ್ಟು ಜಿಲ್ಲೆಗೆ ಅವಶ್ಯಕವಿರುವ ರಕ್ತವನ್ನು ಸಂಗ್ರಹಿಸಲು 18 ವರ್ಷ ಮೇಲ್ಪಟ್ಟ ಆರೋಗ್ಯವಂತ ಯುವಕ ಯುವತಿಯರು ಸ್ವತಃ ಬಂದು ರಕ್ತದಾನ ಮಾಡಬೇಕು.

ಅಪರ ಜಿಲ್ಲಾಧಿಕಾರಿ ಎಚ್.ಎಲ್.ನಾಗರಾಜ್ ಮಾತನಾಡಿ, ರಕ್ತದಾನಿಗಳ ಮೂಲಕ ಹೆಚ್ಚು ರಕ್ತವನ್ನು ಸಂಗ್ರಹಿಸಿ ಅಗತ್ಯವಿರುವ ಎಲ್ಲಾ ರೋಗಿಗಳಿಗೆ, ಶಸ್ತ್ರಚಿಕಿತ್ಸೆಯ ಸಂದರ್ಭದಲ್ಲಿ ಬೇರೆ ಬೇರೆ ರಕ್ತದ ಅವಶ್ಯಕತೆಯಿರುವ ರೋಗಿಗಳಿಗೆ ಉಚಿತವಾಗಿ ರಕ್ತದ ವ್ಯವಸ್ಥೆ ಮಾಡುವ ಉದ್ದೇಶದಿಂದ ಈ ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕುಷ್ಠ ರೋಗ ನಿರ್ಮೂಲನಾಧಿಕಾರಿ ಡಾ.ಸೋಮಶೇಖರ್, ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ.ಜವರೇಗೌಡ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಗಾಯಿತ್ರಿ, ಜಿಲ್ಲಾ ಆರೋಗ್ಯ ಇಲಾಖೆಯ ತರಬೇತಿ ಕೇಂದ್ರದ ಪ್ರಾಂಶುಪಾಲೆ ಡಾ.ಮಮತಾ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ ಮೊದಲ ಗೋಶಾಲೆ ಪ್ರಾರಂಭ



ಪ್ರಾಣಿ ದಯಾ ಸಂಘ ಸಮಿತಿಯ ವಾರ್ಷಿಕ ಮಹಾಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡುತ್ತಿರುವುದು.

ಮಂಡ್ಯ, ಜೂ.14– ಮದ್ದೂರು ತಾಲೂಕಿನ ಅತಗೂರು ಹೋಬಳಿಯ ಹೂತಗೆರೆ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಮೊದಲ ಸರ್ಕಾರಿ ಗೋಶಾಲೆ ನಿರ್ಮಾಣ ವಾಗಿದ್ದು, ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ತಮ್ಮ ಕಚೇರಿ ಸಭಾಂಗಣದಲ್ಲಿ ಪ್ರಾಣಿದಯಾ ಸಂಘ ಸಮಿತಿಯ ವಾರ್ಷಿಕ ಮಹಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗೋಶಾಲೆ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಉದ್ಘಾಟನೆಗೆ ಸಿದ್ಧತೆ ಮಾಡಿಕೊಳ್ಳಿ, ಪ್ರಾಣಿಗಳಿಗೆ ವಸತಿ, ಕುಡಿಯುವ ನೀರು, ಮೇವಿಗೆ ಯಾವುದೇ ತೊಂದರೆಯಾಗಬಾರದು. ಹೂತಗೆರೆ ಗ್ರಾಮದ ಗೋಶಾಲೆಯು 10 ಎಕರೆ ವಿಸ್ತೀರ್ಣದಲ್ಲಿದ್ದು, ಇದರ ಸುತ್ತ ಕಾಂಪೌಂಡ್ ಅಥವಾ ಬೇಲಿ ನಿರ್ಮಿಸಿ ಸ್ಥಳದ ರಕ್ಷಣೆ ಮಾಡಿಕೊಳ್ಳಬೇಕು ಇಲ್ಲಾವದಲ್ಲಿ ಒತ್ತುವರಿಯಾಗುವ ಸಾಧ್ಯತೆ ಹೆಚ್ಚು. ಗೋಶಾಲೆಯ ಸುತ್ತ ಕಾಂಪೌಂಡ್ ನಿರ್ಮಿಸಲು ಯೋಜನೆ ಸಿದ್ಧಪಡಿಸಿ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಡಾ.ಸುರೇಶ್, ಮಂಡ್ಯ ನಗರಸಭೆ ಆಯುಕ್ತ ಮಂಜುನಾಥ್, ವಿವಿಧ ಗೋಶಾಲೆಯ ಮುಖ್ಯಸ್ಥರು ಉಪಸ್ಥಿತರಿದ್ದರು.

ಎಂಟು ಕಾಲು, ಎರಡು ತಲೆ, ಎರಡು ಬಾಲವಿರುವ ಕರುಗೆ ಜನ್ಮ ನೀಡಿದ ಎಮ್ಮೆ

ಹೊಟ್ಟೆಯಲ್ಲೇ ಸತ್ತಿದ್ದ ಕರುವನ್ನು ಶಸ್ತ್ರಚಿಕಿತ್ಸೆ ಮೂಲಕ ಹೊರ ತೆಗೆದ ವೈದ್ಯರು



ಕೆ.ಆರ್.ಪೇಟೆ, ಜೂ.14– ಎಮ್ಮೆಯೊಂದು ಎಂಟು ಕಾಲು ಎರಡು ತಲೆಯುಳ್ಳ ಕರುವಿಗೆ ಜನ್ಮ ನೀಡಿದೆ. ಈ ವಿಸ್ಮಯಕಾರಿ ಘಟನೆ ತಾಲೂಕಿನ ಶೀಳನೆರೆ ಹೋಬಳಿಯ ಚಟ್ಟೇನಹಳ್ಳಿ ಗ್ರಾಮದಲ್ಲಿ ಬೆಳಕಿಗೆ ಬಂದಿದೆ. ಚಟ್ಟೇನಹಳ್ಳಿ ಗ್ರಾಮದ ಶಿವಲಿಂಗಯ್ಯನವರ ಎಮ್ಮೆ ಗುರುವಾರ ಕರು ಹಾಕಿದ್ದು, ಕರು ಎಂಟು ಕಾಲು, ಎರಡು ತಲೆ, ಎರಡು ಬಾಲವನ್ನು ಹೊಂದಿತ್ತು. ಆದರೆ, ಕರು ಎಮ್ಮೆಯ ಹೊಟ್ಟೆಯಲ್ಲೇ ಸಾವನ್ನಪ್ಪಿದೆ ಎಂದು ವರದಿಯಾಗಿದೆ.

ಎಮ್ಮೆ ಕರು ಹಾಕಲು ಹರಸಾಹಸ ಪಡುತ್ತಿತ್ತು. ಬಳಿಕ, ಸ್ಥಳಕ್ಕೆ ಪಶು ವೈದ್ಯರು ಬಂದು, ಎಮ್ಮೆಗೆ ಹೆರಿಗೆ ಮಾಡಿಸಲು ಯತ್ನಿಸಿದರು. ಅದಾಗ್ಯೂ, ಕರು ಹೊರ ಬಂದಿರಲಿಲ್ಲ. ಬಳಿಕ, ಮತ್ತೋರ್ವ ಪಶು ವೈದ್ಯರನ್ನು ಕರೆಸಿ, ಶಸ್ತ್ರಚಿಕಿತ್ಸೆಯ ಮೂಲಕ ಕರುವನ್ನು ಹೊರತೆಗೆಯಲಾಗಿದೆ. ಆದರೆ, ಆ ವೇಳೆಗೆ ಕರು ಸಾವನ್ನಪ್ಪಿತ್ತು ಎಂದು ತಿಳಿದು ಬಂದಿದೆ. ವಿಚಿತ್ರವಾಗಿ ಜನಿಸಿದ ಕರುವನ್ನು ನೋಡಲು ತಂಡೋಪ ತಂಡವಾಗಿ ಜನರು ಬಂದು ವೀಕ್ಷಣೆ ಮಾಡಿದರು.

ವಿಸ್ಮಯಕಾರಿಯಾಗಿ ಜನಿಸಿದ ಕರು ಹುಟ್ಟಿದ ಸ್ಥಳಕ್ಕೆ ತಾಲೂಕು ಪಶು ವೈದ್ಯಕೀಯ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಹೆಚ್.ಎಸ್.ದೇವರಾಜು ಮತ್ತು ಅವರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಒಂದನೇ ಪುಟದಿಂದ

ದ್ವೇಷದ ರಾಜಕಾರಣ ಮಾಡಲ್ಲ

ಎಂಬ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ ಬಗ್ಗೆ ಪ್ರಸ್ತಾಪಿಸಿದಾಗ ಮಾಧ್ಯಮದವರ ಮೇಲೆಯೇ ಗರಂ ಆದ ಸಿಎಂ, ವಿರೋಧ ಪಕ್ಷದವರ ಎಲ್ಲಾ ಆರೋಪಗಳಿಗೂ ಉತ್ತರ ಕೊಡುವ ಅಗತ್ಯವಿಲ್ಲ. ನಾವು ಯಾವುದೇ ಕಾರಣಕ್ಕೂ ರಾಜಕೀಯವಾಗಿ ಆರೋಪ ಮಾಡಲು ಹೋಗುವುದಿಲ್ಲ. ನಾವು ಈ ನೆಲದ ಕಾನೂನನ್ನು ಗೌರವಿಸುತ್ತೇವೆ. ಕಾನೂನು ಏನು ಹೇಳುತ್ತದೆಯೋ ಹಾಗೆಯೇ ನಾವು ನಡೆಯುತ್ತೇವೆ ಎಂದು ತಿಳಿಸಿದರು.

ಯಾರೂ ಲಾಬಿ ಮಾಡಿಲ್ಲ: ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿಗಳಾದ ಚಿತ್ರನಟ ದರ್ಶನ್ ಹಾಗೂ ಸಹಚರರ ವಿಚಾರಣೆ ನಡೆಸುತ್ತಿರುವ ಪೊಲೀಸ್ ಠಾಣೆ ಸುತ್ತ ಶಾಮಿಯಾನ ಅಳವಡಿಸಿ, ಮರೆಮಾಚಿದ್ದರ ಬಗ್ಗೆ ಮಾತನಾಡಿ, ಪೊಲೀಸರು ಏನು ತೀರ್ಮಾನ ಮಾಡಿಕೊಂಡಿದ್ದಾರೋ ನನಗೆ ಗೊತ್ತಿಲ್ಲ, ನಮ್ಮನ್ನು ಕೇಳಿ ಮಾಡಿಲ್ಲ. ಅದರಿಂದ ಜನಸಾಮಾನ್ಯರಿಗೆ ತೊಂದರೆಯಾಗಿದೆ ಎಂದು ಯಾರೂ ನನಗೆ ದೂರಿಲ್ಲ. ಸಾಮಾನ್ಯ ಜನರಿಗೋಸ್ಕರ ನಾವು ಸರ್ಕಾರ ನಡೆಸುತ್ತೇವೆ. ಅವರು ಏನು ಹೇಳುತ್ತಾರೋ ಹಾಗೆ ಕೇಳುತ್ತೇವೆ. ದರ್ಶನ್ ವಿಚಾರವಾಗಿ ಪ್ರಭಾವಿಗಳು ನನ್ನ ಬಳಿ ಬಂದು ಲಾಬಿ ಮಾಡಿದ್ದಾರೆ ಎಂಬುದು ಕೇವಲ ಸುದ್ದಿ ಅಷ್ಟೇ. ಆದರೆ ಯಾರೂ ನನ್ನ ಬಳಿ ಬಂದಿಲ್ಲ. ಬಿಜೆಪಿಯವರು ಸುಮ್ಮನೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ನಾವು ಈ ನೆಲದ ಕಾನೂನು ಬಿಟ್ಟು ಏನನ್ನೂ ಮಾಡುವುದಿಲ್ಲ ನಾವು ಯಾವುದೇ ದ್ವೇಷದ ರಾಜಕಾರಣ ಮಾಡುವುದಿಲ್ಲ ಎಂದು ಪುನರುಚ್ಚರಿಸಿದರು.

ಕಾಂಗ್ರೆಸ್‌ಗೆ ಹಿನ್ನಡೆಯಾಗಿಲ್ಲ: ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಿಲ್ಲ. 2019ರ ಚುನಾವಣೆಯಲ್ಲಿ ಒಂದು ಸ್ಥಾನ ಗೆದ್ದಿದ್ದೆವು. ಈ ಬಾರಿ ಕಾಂಗ್ರೆಸ್ ಸೀಟ್‌ಗಳ ಸಂಖ್ಯೆ 9ಕ್ಕೇರಿದೆ. ಕಾಂಗ್ರೆಸ್ ಮತಗಳಿಕೆ ಪ್ರಮಾಣ ಶೇಕಡ 13ರಷ್ಟು ಜಾಸ್ತಿಯಾಗಿದೆ. ಕಳೆದ ಬಾರಿ ಸೋತಿದ್ದ ಚಾಮರಾಜನಗರ ಕ್ಷೇತ್ರದಲ್ಲಿ ಈ ಬಾರಿ ಗೆದ್ದಿದ್ದೇವೆ. ಮೈಸೂರು–ಕೊಡಗು ಕ್ಷೇತ್ರದಲ್ಲಿ ಸೋತಿರುವುದು ಎಷ್ಟು ನಿಜವೋ, ಮೈಸೂರು ಭಾಗವಾದ ಚಾಮರಾಜನಗರದಲ್ಲಿ ಗೆದ್ದಿರುವುದು, ಸೀಟ್‌ಗಳ ಸಂಖ್ಯೆ 1ರಿಂದ 9ಕ್ಕೆ ಏರಿಕೆಯಾಗಿರುವುದು, ಮತಗಳಿಕೆ ಪ್ರಮಾಣ ಜಾಸ್ತಿಯಾಗಿರುವುದು ಎಲ್ಲವೂ ಸತ್ಯ. ಹಾಗೆಂದ ಮಾತ್ರಕ್ಕೆ ಬೆನ್ನು ತಟ್ಟಿಕೊಳ್ಳುವುದಿಲ್ಲ. ಕಳೆದ ಬಾರಿಗಿಂತ ಕಾಂಗ್ರೆಸ್ ಈ ಬಾರಿ ಉತ್ತಮ ಪ್ರದರ್ಶನ ನೀಡಿದೆ. ಆದರೆ ನಾವು ನಿರೀಕ್ಷಿಸಿದಷ್ಟು ಸಾಧನೆ ಸಾಧ್ಯವಾಗಿಲ್ಲ. ಕಾರಣ ಏನೆಂದು ಮಾಧ್ಯಮದ ಮುಂದೆ ಚರ್ಚೆ ಮಾಡಲ್ಲ, ನಮ್ಮ ಪಕ್ಷದಲ್ಲಿ ಚರ್ಚಿಸುತ್ತೇವೆ ಎಂದರು.

ಪ್ರವೇಶಾತಿ ಶುಲ್ಕ ಶೇ.10ರಷ್ಟು ಹೆಚ್ಚಳ

ಅನುದಾನಿತ, ಅನುದಾನರಹಿತ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಒಕ್ಕೂಟದ ಪದಾಧಿಕಾರಿಗಳೊಂದಿಗೆ ಇಂದು ನಡೆದ ಸಭೆಯಲ್ಲಿ ನಿರ್ಧಾರ ಮಾಡಲಾಗಿದೆ. ಶೇ.15 ಶುಲ್ಕ ಹೆಚ್ಚಿಸಲು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಒತ್ತಾಯಿಸಿತ್ತು. ಆದರೆ 2024–25ನೇ ಸಾಲಿನ ಇಂಜಿನಿಯರಿಂಗ್, ಆರ್ಕಿಟೆಕ್ಚರ್ ಕಾಲೇಜು ವೃತ್ತಿಪರ ಕೋರ್ಸ್‌ಗಳ ಶುಲ್ಕ ಶೇಕಡಾ 10ರಷ್ಟು ಹೆಚ್ಚಿಸಲು ನಿರ್ಧರಿಸಲಾಗಿದೆ.

ಕಳೆದ ವರ್ಷ ಖಾಸಗಿ ಇಂಜಿನಿಯರಿಂಗ್ ಕಾಲೇಜು ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿರುವ ಸರ್ಕಾರಿ ಕೋಟಾದ ಸೀಟುಗಳಿಗೂ ಪ್ರವೇಶಾತಿ ಶುಲ್ಕ ಶೇ.7 ಹೆಚ್ಚಳ ಮಾಡಲಾಗಿತ್ತು. ಸರ್ಕಾರಿ ಕಾಲೇಜುಗಳಲ್ಲಿ 40 ಸಾವಿರ ರೂ ಶುಲ್ಕ ಹೆಚ್ಚಿಸಲಾಗಿತ್ತು. ಸರ್ಕಾರಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಶುಲ್ಕ 67–68.000 ರೂ, ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ (ಟೈಪ್–1) ಶುಲ್ಕ 69,000 ರೂ, ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ (ಟೈಪ್–2) ಶುಲ್ಕ 76,000 ರೂ, ಡೀಮ್ಡ್ ಮತ್ತು ಖಾಸಗಿ ವಿವಿ ಕಾಲೇಜುಗಳ ಶುಲ್ಕ 1.69.00 ಲಕ್ಷ ರೂ ಮಾಡಲಾಗಿತ್ತು. ಆದರೆ ಇದರ ಹೊರತಾಗಿ ಖಾಸಗಿ ಕೋಟ ಸೀಟ್‌ಗಳಿಗೆ ಕಾಲೇಜುಗಳು ಮನಸಿಗೆ ಬಂದಷ್ಟು ಶುಲ್ಕ ಪಡೆಯುತ್ತಿದ್ದು ಪೋಷಕರ ಪರದಾಟಕ್ಕೆ ಕಾರಣವಾಗಿದೆ. ಪ್ರತಿಷ್ಠಿತ ಕಾಲೇಜುಗಳಲ್ಲಿ ಇಂಜಿನಿಯರಿಂಗ್ ಸೀಟ್ ಪಡೆಯಲು 6 ರಿಂದ 10 ಲಕ್ಷ ರೂ. ನೀಡಬೇಕಿದೆ.

ಬಿಎಸ್‌ವೈಗೆ ಬಿಗ್ ರಿಲೀಫ್

ತಾಯಿ ಎಂದರು. ಆಕೆಯ ಕೆಲಸ ಏನು ಎಂದಾಗ ಉದ್ಯಮಿ ಎಂದರು. ಆಗ ನ್ಯಾಯಾಧೀಶರು ಮಹಿಳಾ ಉದ್ಯಮಿ ಎಂದು ನ್ಯಾಯಾಲಯ ಪರಿಗಣಿಸುತ್ತದೆ ಎಂದರು.

ಸಿಐಡಿ ನೋಟಿಸ್ ಬಳಿಕ ಯಡಿಯೂರಪ್ಪ ವಿಚಾರಣೆಗೆ ಹಾಜರಾಗಿದ್ದಾರೆ, ಧ್ವನಿ ಪರೀಕ್ಷೆಗೂ ಸಹಕಾರ ನೀಡಿದ್ದಾರೆ, ಹಾಗಾಗಿ ಅವರನ್ನು ಬಂಧಿಸುವ ಅವಶ್ಯಕತೆ ಇಲ್ಲ ಎಂದರು. ಇದಕ್ಕೆ ಪ್ರತಿ ವಾದ ಮಂಡಿಸಿದ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ, ದೂರುದಾರೆ ಮೃತಪಟ್ಟಿದ್ದಾಳೆ, ಆರೋಪಿಯು ವಿಚಾರಣೆಗೆ ಹಾಜರಾಗದೆ ಜೂನ್ 11ರಂದು ದೆಹಲಿಗೆ ತೆರಳಿದ್ದಾರೆ, ಹೀಗಾಗಿ ತನಿಖಾಧಿಕಾರಿಗಳು ನ್ಯಾಯಾಲಯದಿಂದ ಅರೆಸ್ಟ್ ವಾರೆಂಟ್ ಪಡೆದಿದ್ದಾರೆ ಎಂದರು. ಅಷ್ಟೇ ಅಲ್ಲ ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಬಂದಿದೆ, ವರದಿ ಬಂದ ನಂತರವೇ ಆರೋಪಿಗೆ ನೋಟಿಸ್ ನೀಡಿರುವುದಾಗಿ ನ್ಯಾಯಾಲಯದ ಗಮನಕ್ಕೆ ತಂದರು.

ದ್ವೇಷ ರಾಜಕಾರಣ ಬಿಡದಿದ್ದರೆ ಕಾಂಗ್ರೆಸ್‌ನವರು ನಾಶವಾಗ್ತಾರೆ...!

- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಎಚ್ಚರಿಕೆ
- ನಮ್ಮ ಕುಟುಂಬ ಮುಗಿಸಿಯಾಯ್ತು; ಈಗ ಯಡಿಯೂರಪ್ಪರ ಮುಗಿಸಲು ಹೊರಟಿದ್ದಾರೆ



ಬೆಂಗಳೂರು, ಜೂ.14(ಕೆಎಂಶಿ)– ದ್ವೇಷ ಮತ್ತು ನೀಚ ರಾಜಕಾರಣವನ್ನು ಕಾಂಗ್ರೆಸ್‌ನವರು ಬಿಡದಿದ್ದರೆ ಮುಂದೆ ನಾಶವಾಗಿ ಹೋಗುತ್ತೀರಿ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಎಚ್ಚರಿಸಿದ್ದಾರೆ.

ನಮ್ಮ ಕುಟುಂಬವನ್ನು ಮುಗಿಸಿಯಾಯಿತು. ಇನ್ನು ಪ್ರಬಲ ರಾಜಕಾರಣಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಮುಗಿಸಬೇಕೆಂದು ಕಾಂಗ್ರೆಸ್ ಸರ್ಕಾರ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಟೀಕಿಸಿದರು.

ನರೇಂದ್ರ ಮೋದಿ ಸರ್ಕಾರದಲ್ಲಿ ಮಂತ್ರಿಯಾದ ನಂತರ ಇದೇ ಮೊದಲ ಬಾರಿಗೆ ನಗರಕ್ಕೆ ಬಂದ ಕುಮಾರಸ್ವಾಮಿ, ಪಕ್ಷದ ಕಚೇರಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಆದ ಅಪಮಾನ ತಪ್ಪಿಸಿಕೊಳ್ಳಲು ಇಂತಹ ನೀಚ ರಾಜಕಾರಣಕ್ಕೆ ಇಳಿದಿದ್ದಾರೆ. ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ 82 ವರ್ಷದ ಯಡಿಯೂರಪ್ಪ ಅವರನ್ನು ಬಂಧಿಸಲು ವಾರೆಂಟ್ ಹೊರಡಿಸಿರುವುದು ಎಂತಹ ನೀಚತನ. ನಾಲ್ಕು ತಿಂಗಳಿಂದ ಪ್ರಕರಣದ ಬಗ್ಗೆ ಚಕಾರವೆತ್ತದ ಸಿದ್ದರಾಮಯ್ಯ ಸರ್ಕಾರ, ಇದೀಗ ಏಕಾಏಕಿ ಅವರನ್ನು ಬಂಧಿಸಲು ಮುಂದಾಗಿದೆ. ದೇವೇಗೌಡರ ಕುಟುಂಬವನ್ನು ಮುಗಿಸಿಯಾಯಿತು, ಇನ್ನು ಯಡಿಯೂರಪ್ಪ ಕುಟುಂಬವನ್ನು ಮುಗಿಸಲು ಪೊಲೀಸರು ಮತ್ತು ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದೀರಿ, ನಿಮಗೆ ನಾಚಿಕೆ ಇಲ್ಲವೇ ಎಂದು ಪ್ರಶ್ನಿಸಿದರು. ಪೋಕ್ಸೋ ಪ್ರಕರಣದಲ್ಲಿ ಹಿಂದಿನ ಎರಡು ಘಟನೆಗಳಲ್ಲಿ ಇಬ್ಬರು ಸ್ವಾಮೀಜಿಗಳನ್ನು 24 ಗಂಟೆಯೊಳಗೆ ಬಂಧಿಸಿದ್ದೀರಿ. ಯಡಿಯೂರಪ್ಪ ಪ್ರಕರಣದಲ್ಲಿ ಏಕೆ ನಿಧಾನ ಮಾಡಿದಿರಿ.

ನಾಲ್ಕು ತಿಂಗಳ ನಂತರ ಜ್ಞಾನೋದಯವಾಯಿತೇ, ನಿಮ್ಮ ರಾಜಕೀಯ ದಾಳಗಳಿಗೆ ಬಗ್ಗಲಿಲ್ಲ, ಬಿಜೆಪಿ–ಜೆಡಿಎಸ್ ಮೈತ್ರಿ ಸಹಿಸಲಾಗದೆ ಇಂತಹ ಕೃತ್ಯಕ್ಕೆ ಇಳಿದಿದ್ದೀರಿ. ಎರಡು ಪಕ್ಷಗಳು ಒಂದಾದರೆ ನಿಮಗೆ ಮುಂದೆ ನೆಲೆ ಇಲ್ಲ ಎಂದು ಮೈತ್ರಿಗೆ ದಕ್ಕೆ ತರಲು ಹೊರಟಿದ್ದೀರಿ.

ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಒಂದಾಗಿದ್ದಾರೆ, ಮುಂದೆ ನಿಮಗೆ ನೆಲೆ ಇಲ್ಲದಂತೆ ಮಾಡುತ್ತಾರೆ ಎಂದು ತಿಳಿದು ಇಂತಹ ಕೃತ್ಯಗಳನ್ನು ಮಾಡುತ್ತಿದ್ದೀರಿ.

ನಮ್ಮ ಪಕ್ಷದ ಕಾರ್ಯಕರ್ತರ 16 ವರ್ಷಗಳ ಶ್ರಮದ ನಂತರ ನಮಗೆ ಪ್ರತಿಫಲ ದೊರೆತಿದೆ. ಮೋದಿ ಅವರು ನನಗೆ ದೊಡ್ಡ ಕಾರ್ಯಭಾರ ವಹಿಸಿ ಕೆಲಸ ಮಾಡು ಎಂದಿದ್ದಾರೆ. ನಿಮ್ಮ ರೀತಿ ನಾನು ದ್ವೇಷದ ರಾಜಕಾರಣ ಮಾಡುವುದಿಲ್ಲ. ರಾಜ್ಯದ ಯಾವುದೇ ಸಮಸ್ಯೆ ಇದ್ದರೂ ಮಂತ್ರಿಗಳ ಜೊತೆ ಸಂಬಂಧಪಟ್ಟ ಇಲಾಖೆಗಳಿಗೆ ತೆರಳಿ ಅದನ್ನು ಪರಿಹರಿಸಲು ಶ್ರಮಿಸುತ್ತೇನೆ.

ಕರ್ನಾಟಕದಿಂದ ಕೇಂದ್ರದೊಂದಿಗೆ ಪ್ರತಿನಿಧಿಸುವ ಸಚಿವರುಗಳು ಒಂದಾಗಿ ರಾಜ್ಯದ ನೀರಾವರಿ ಸೇರಿದಂತೆ ಅಭಿವೃದ್ಧಿಗೆ ಕೆಲಸ ಮಾಡುವುದಾಗಿ ಕಾರ್ಯಕರ್ತರಿಗೆ ಭರವಸೆ ನೀಡಿದರು.

ಸಮಸ್ಯೆಗಳು ಒಂದೆರಡು ದಿನದಲ್ಲೇ ಮುಗಿಯುತ್ತವೆ ಎಂದು ಹೇಳಲಾರೆ, ಸಮಸ್ಯೆ ಬಿಡಿಸಿ ಪರಿಹಾರ ಕಂಡುಕೊಳ್ಳಲು ಹಾಗೂ ದೇಶದ ಅಭಿವೃದ್ಧಿಗೆ ಟೊಂಕ ಕಟ್ಟಿ ಕೆಲಸ ಮಾಡುತ್ತೇನೆ ಎಂದರು.

ಮೊದಲು ಮುಖ್ಯಮಂತ್ರಿಯಾಗಿದ್ದಾಗ ಅನುಭವ ಇಲ್ಲದಿದ್ದರೂ ಬೇರೆಯವರನ್ನು ಕೇಳಿ ಉತ್ತಮ ಆಡಳಿತ ನೀಡಿದೆ, ಈಗಲೂ ಅದೇ ರೀತಿ ಕಾರ್ಯನಿರ್ವಹಿಸುವೆ ಎಂದರು.

ಇದಕ್ಕೂ ಮುನ್ನ ಕೇಂದ್ರ ಸಚಿವರಾಗಿ ರಾಜ್ಯಕ್ಕೆ ಮರಳಿದ ಕುಮಾರಸ್ವಾಮಿ ಅವರಿಗೆ ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು. ವಿಮಾನ ನಿಲ್ದಾಣದಿಂದ ಹೊರಬರುತ್ತಿದ್ದಂತೆ ಜೆಡಿಎಸ್ ನಾಯಕರು ಹಾಗೂ ಕಾರ್ಯಕರ್ತರು ಕುಮಾರಸ್ವಾಮಿ ಅವರನ್ನು ಬರಮಾಡಿಕೊಳ್ಳಲು ಮುಗಿಬಿದ್ದರು. ಈ ಸಂದರ್ಭದಲ್ಲಿ ನೂಕುನುಗ್ಗಲು ಉಂಟಾಯಿತು.

ರಾಹುಲ್ ಗಾಂಧಿ ಮೇಲೆ ಕೇಸ್ ಹಾಕಿದರೆ ರಾಜಕಾರಣವಲ್ಲ; ಯಡಿಯೂರಪ್ಪರ ಮೇಲೆ ಹಾಕಿದರೆ ರಾಜಕಾರಣವಾ?...



ಬೆಂಗಳೂರು, ಜೂ.14(ಕೆಎಂಶಿ)– ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಮೇಲೆ ಮೊಕದ್ದಮೆ ಹೂಡಿದರೆ ರಾಜಕಾರಣವಲ್ಲ, ಯಡಿಯೂರಪ್ಪ ಅವರ ಮೇಲೆ ಹೂಡಿದರೆ ರಾಜಕಾರಣವೇ? ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಯಡಿಯೂರಪ್ಪ ಅವರ ವಿರುದ್ಧ ಬಂಧನದ ವಾರೆಂಟ್ ಹೊರಡಿಸಿರುವ ಬೆನ್ನಲ್ಲೇ ತೀವ್ರ ಮಾತಿನ ಚಕಮಕಿ ನಡೆದಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ರಾಹುಲ್ ಗಾಂಧಿ ಏನು ಎಐಸಿಸಿ ಅಧ್ಯಕ್ಷರೇ, ಅವರೇನು ಚುನಾವಣಾ ಸಂದರ್ಭದಲ್ಲಿ ಜಾಹೀರಾತು ಕೊಟ್ಟಿದ್ದರಾ ಎಂದು ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಜಾಹೀರಾತು ಕೊಟ್ಟಿದ್ದು ಕೆಪಿಸಿಸಿ ನಮ್ಮ ಮೇಲೆ ಕೇಸ್ ಹಾಕಿದ್ದಕ್ಕೆ ನಾವು ಕೋರ್ಟ್‌ಗೆ ಹೋಗಿಲ್ಲವೇ, ನಾವು ರಾಜಕೀಯ ಮಾಡಿಲ್ಲ. ಆದರೆ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರಗೆ ಕಾಮನ್‌ಸೆನ್ಸ್ ಇರಲಿಲ್ಲವಾ ಎಂದು ಪ್ರಶ್ನಿಸಿದ್ದಾರೆ. ವಿಧಾನ ಪರಿಷತ್ ಸದಸ್ಯ ಹಾಗೂ ಬಿಜೆಪಿ ಅಡ್ವೋಕೇಟ್ ಅಸೋಸಿಯೇಷನ್ ಅಧ್ಯಕ್ಷರ ಮೂಲಕ ಮೊಕದ್ದಮೆ ಹೂಡಿಸಿದ್ದಾರೆ. ನಾವು ಅಂತಹ ರಾಜಕಾರಣ ಮಾಡಲ್ಲ.

ಯಡಿಯೂರಪ್ಪ ವಿಷಯದಲ್ಲಿ ನಾನು ಹೆಚ್ಚಿಗೆ ಏನೂ ತಿಳಿದುಕೊಂಡಿಲ್ಲ. ನನಗೆ ಅವರನ್ನು ಕಂಡರೆ ಅಯ್ಯೋ ಎನಿಸುತ್ತೆ. ರಾಹುಲ್ ಗಾಂಧಿ ಕಷ್ಟ ಅವರಿಗೂ ಬಂದಿದೆ ಎಂದು ವ್ಯಂಗ್ಯವಾಡಿದರು.

ನಟ ದರ್ಶನ್ ಮೇಲೆ ಕಾನೂನು ಕ್ರಮಕ್ಕೆ ಸಚಿನ್ ನಾಯಕ್ ಆಗ್ರಹ

ಮೈಸೂರು, ಜೂ. 14–ಚಿತ್ರದುರ್ಗದ ರೇಣುಕಾಸ್ವಾಮಿ ಅವರ ಕೊಲೆಗೆ ಸಂಬಂಧಿಸಿದಂತೆ ಚಿತ್ರನಟ ದರ್ಶನ್ ಅವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಾಮಾಜಿಕ ಹೋರಾಟಗಾರ ಸಚಿನ್ ನಾಯಕ್ ಒತ್ತಾಯಿಸಿದ್ದಾರೆ. ಪತ್ರಿಕೆ ಹೇಳಿಕೆ ನೀಡಿದ ಅವರು, ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ. ಯಾರೇ ತಪ್ಪು ಮಾಡಿದರೂ ಶಿಕ್ಷೆಯಾಗ ಬೇಕು, ದರ್ಶನ್ ತನ್ನ ಅಭಿಮಾನಿಗಳ ಮುಖಾಂತರ ಅವರನ್ನು ಬೆಂಗಳೂರಿಗೆ ಕರೆಸಿಕೊಂಡು ಚಿತ್ರ ಹಿಂಸೆ ನೀಡಿ ಹೊಡೆದು ಸಾಯಿಸಿರುವುದು ರಾಕ್ಷಸ ಪ್ರವೃತ್ತಿ. ಚಲನಚಿತ್ರದಲ್ಲಿ ನೀತಿ ಪಾತ್ರಗಳನ್ನು ನಿರ್ವಹಿಸಿ ಸಮಾಜಕ್ಕೆ ಮಾರ್ಗದರ್ಶನ ನೀಡುವ ನಟರು ಎಸಗಿರುವ ಇಂತಹ ಹೇಯ ಕೃತ್ಯವನ್ನು ಸಮಾಜ ಖಂಡಿಸುತ್ತದೆ ಎಂದರು.

ರಾಹುಲ್ ಗಾಂಧಿ, ಸುರ್ಜೇವಾಲರಿಂದ ಯಡಿಯೂರಪ್ಪ ಜೈಲಿಗೆ ಕಳಿಸುವ ಹುನ್ನಾರ: ಬಿಜೆಪಿ ವಾಗ್ದಾಳಿ

ಬೆಂಗಳೂರು, ಜೂ.14(ಕೆಎಂಶಿ)– ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರುಗಳ ರಾಜಕೀಯ ಷಡ್ಯಂತ್ರದಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಜೈಲಿಗೆ ಕಳುಹಿಸುವ ಹುನ್ನಾರ ನಡೆದಿದೆ ಎಂದು ರಾಜ್ಯ ಬಿಜೆಪಿ ಗುರುತರ ಆರೋಪ ಮಾಡಿದೆ.

ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ನಮ್ಮ ಸರ್ಕಾರದ ವಿರುದ್ಧ 40% ಕಮಿಷನ್ ಸೇರಿದಂತೆ ಮಾಡಿರುವ ಸುಳ್ಳು ಆರೋಪಗಳಿಗೆ ಸಂಬಂಧಿಸಿದಂತೆ ಬಿಜೆಪಿ ದಾಖಲಿಸಿದ ಮಾನಹಾನಿ ಮೊಕದ್ದಮೆಯಡಿ ರಾಹುಲ್ ಗಾಂಧಿ ಅವರನ್ನು ಕಟಕಟೆಗೆ ಕರೆಸಿದ್ದಕ್ಕೆ ಸಿದ್ದರಾಮಯ್ಯ ಸರ್ಕಾರ ರಾಜಕೀಯ ಸೇಡು ತೀರಿಸಿಕೊಳ್ಳುತ್ತಿದೆ ಎಂದು ಆರೋಪಿಸಿದೆ.

ಅಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವಕ್ಷೇತ್ರ ಕೊಡಗು–ಮೈಸೂರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ವಕ್ಷೇತ್ರ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಲ್ಲಿನ ಸೋಲು, ಕಾಂಗ್ರೆಸ್‌ಗೆ ಗ್ಯಾರಂಟಿ ಯೋಜನೆಗಳು ಕೈಕೊಟ್ಟಿರುವ ಭಯ ದಿಂದ ಇಂತಹ ಕೃತ್ಯಕ್ಕೆ ಇಳಿದಿದ್ದಾರೆ. ಕಳೆದ ಮೂರು ತಿಂಗಳಿಂದ ಯಡಿ ಯೂರಪ್ಪ ಅವರ ವಿಚಾರವನ್ನು ಕೈಗೆತ್ತಿಕೊಳ್ಳದೆ, ಈಗ ಏಕಾಏಕಿ ತೆಗೆದುಕೊಂಡು ಅವರ ವಿರುದ್ಧ ರಾಜಕೀಯ ಷಡ್ಯಂತ್ರ ನಡೆಸಿ ಜೈಲಿಗೆ ಕಳುಹಿಸಲು ಪಿತೂರಿ ನಡೆಸಿದೆ ಎಂದು ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪ ವಿರುದ್ಧ ಪ್ರಕರಣ ದಾಖಲಾದ ಸಂದರ್ಭದಲ್ಲೇ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು, ದೂರು ದಾಖಲಿಸಿರುವ ವ್ಯಕ್ತಿ ಮಾನಸಿಕ ಅಸ್ವಸ್ಥತೆಯಿಂದ ಇದ್ದಂತಿದೆ, ಆಕೆ 53 ಗಣ್ಯರ ಮೇಲೆ ಇದೇ ರೀತಿ ದೂರು ನೀಡಿದ್ದಾರೆ ಎಂದಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ 'ಬಿ' ರಿಪೋರ್ಟ್ ಹಾಕುವ ಸಂದರ್ಭದಲ್ಲಿ ರಾಹುಲ್ ಗಾಂಧಿ ಹಾಗೂ ಸುರ್ಜೇವಾಲ ಅವರು ಮಧ್ಯಪ್ರವೇಶ ಮಾಡಿ ಯಡಿಯೂರಪ್ಪ ಅವರನ್ನು ಜೈಲಿಗೆ ಕಳುಹಿಸಲು ಷಡ್ಯಂತ್ರ ಮಾಡಿದ್ದಾರೆ. ಗೃಹ ಸಚಿವರ ಅಂದಿನ ಹೇಳಿಕೆ ಹಾಗೂ ಇಂದು ನೀಡುತ್ತಿರುವ ಹೇಳಿಕೆಗಳನ್ನು ಗಮನಿಸಿದರೆ, ಇದರ ಹಿಂದೆ ಯಾರಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ, ಅಲ್ಲದೆ ನಮಗೆ ಅಧಿಕಾರಿಗಳೂ ಮಾಹಿತಿ ನೀಡಿದ್ದಾರೆ, ಅದನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲ ಎಂದರು. ಯಡಿಯೂರಪ್ಪ ವಿರುದ್ಧ 2024ರ ಫೆಬ್ರವರಿ 2ರಂದು ಪ್ರಕರಣ ನಡೆದಿದೆ ಎಂದಿದೆ. ಆದರೆ, ಅವರ ವಿರುದ್ಧ ಮಾರ್ಚ್ 14ರಂದು ದೂರು ದಾಖಲಾಯಿತು.

ಏಪ್ರಿಲ್ 12ರಂದು ಯಡಿಯೂರಪ್ಪ ಅವರು ಸಿಐಡಿ ಮುಂದೆ ಹೇಳಿಕೆ ನೀಡಿದ್ದಾರೆ. ಮೂರು ತಿಂಗಳಿಂದ ಏನೂ ಆಗದ ವಿಚಾರ ಏಕಾಏಕಿ ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲು ಅನುಮತಿ ಪಡೆಯಲಾಗಿದೆ. ಯಡಿಯೂರಪ್ಪ ಅವರು ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ, ಕಾಂಗ್ರೆಸ್ ಸರ್ಕಾರ ಯಡಿಯೂರಪ್ಪ ಅವರನ್ನು ಮಾನಸಿಕವಾಗಿ ಕುಗ್ಗಿಸಲು ಹೊರಟಿದೆ. ಕಾಂಗ್ರೆಸ್ ಮಾಡುತ್ತಿರುವ ರಾಜಕೀಯ ಅವರಿಗೇ ತಿರುಗುಬಾಣವಾಗಲಿದೆಯೇ ಹೊರತು ಅದರಿಂದ ಯಾವುದೇ ರಾಜಕೀಯ ಲಾಭ ಸಿಗುವುದಿಲ್ಲ ಎಂದು ಸಿ.ಟಿ.ರವಿ ಎಚ್ಚರಿಸಿದರು.

ಮೈಸೂರು ಮಿತ್ರ

ಶನಿವಾರ 15 ಜೂನ್ 2024

ಒಂದನೇ ಪುಟದಿಂದ

ರಾಜ್ಯದ ಜನರಿಗೆ ಅರ್ಪಣೆ

ಬಂದು ಒತ್ತಾಯ ಹಾಕಿ, ನನಗೆ ಬಲವಂತವಾಗಿ ಸಿಎಂ ಸ್ಥಾನ ಕೊಟ್ಟಿದ್ದರು. ಆವತ್ತು ನಾನು ಸಿಎಂ ಇದ್ದಾಗ ಇದೇ ಜಾಗದಲ್ಲಿ ಸನ್ಮಾನ ಮಾಡಿದ್ರಿ ಅಂದು ಕಣ್ಣಲ್ಲಿ ನೀರು ಹಾಕಿದ್ದೆ. ಕಾಂಗ್ರೆಸ್ ಜೊತೆ ಸರ್ಕಾರ ಮಾಡಿದಾಗ ನಮ್ಮನ್ನ ಯಾವ ರೀತಿ ನಡೆಸಿ ಕೊಂಡಿದ್ದರು ಅಂತ ಹೇಳಿದ್ದೆ. ವಿಷಕಂಠ ಆಗಿದ್ದೇ ಅಂತ ಹೇಳಿದ್ದೆ. ಆದರೆ ಇವತ್ತು ನಾನು ಅತ್ಯಂತ ಸಂತೋಷದಿಂದ ಯಾವುದೇ ಕಲ್ಮಷ ಇಟ್ಟುಕೊಳ್ಳದೇ ಪ್ರಾಮಾಣಿಕವಾಗಿ ಹೇಳ್ತಿದ್ದೇನೆ. ಮೊದಲಿಗೆ ಮೋದಿ ಅವರಿಗೆ ಕಾರ್ಯಕರ್ತರ ಸಮ್ಮುಖದಲ್ಲಿ ಧನ್ಯವಾದ ಸಲ್ಲಿಸುತ್ತೇನೆ ಎಂದು ನುಡಿದರು.

ನಾನೂ ಕುತಂತ್ರಕ್ಕೆ ಬಲಿಯಾಗಿದ್ದೆ: ಕಾಂಗ್ರೆಸ್ ಜೊತೆ ರಾಜ್ಯದಲ್ಲಿ ಸರ್ಕಾರ ಮಾಡಿ ಏನಾಯಿತು ಅಂತ ಜನರಿಗೆ ಗೊತ್ತಿದೆ. ಆವತ್ತು ಸಹ ಕಾಂಗ್ರೆಸ್ ನಮ್ಮ ಕಾರ್ಯಕರ್ತರಿಗೆ ಅಧಿಕಾರ ಕೊಡೋಕೆ ಬಿಡಲಿಲ್ಲ. ಹೀಗಾಗಿ ನಾನು ಶಾಸಕರ ಜೊತೆ ಸೇರಿ ಮುಂದೆ ಹೆಜ್ಜೆ ಇಟ್ಟಿದ್ವಿ. ಬಳಿಕ ನಮ್ಮ ಮತ್ತು ಬಿಜೆಪಿ ಶಾಸಕರು ಸರ್ಕಾರ ಮಾಡೋಣ ಅಂತ ಹೋದೆವು. ನಾನು ಆವತ್ತು ಎಂ.ಪಿ ಪ್ರಕಾಶ್ ಅವರಿಗೆ ನೀವೇ ಮುಖ್ಯಮಂತ್ರಿ ಆಗಿ ಎಂದು ಹೇಳಿದ್ದೆ. ಯಡಿಯೂರಪ್ಪಗೆ ಅಧಿಕಾರ ಕೊಡಬೇಕು ಅಂತ ಇದ್ದವನು ನಾನು. ಆದರೆ ಅವರಿಗೆ ಅಧಿಕಾರ ಕೊಡಬಾರದು ಅಂತ ಕುತಂತ್ರ ನಡೆಯಿತು. ನಾನೂ ಸಹ ಆ ಕುತಂತ್ರಕ್ಕೆ ಬಲಿಯಾದೆ. ನಾನು ಪಕ್ಷ ಉಳಿಸಿಕೊಳ್ಳೋಕೆ 20 ತಿಂಗಳು ಕೆಲಸ ಮಾಡಿದೆ. ಅಂದು ಸಹ ನಾನು ಹಣದ ವ್ಯಾಮೋಹಕ್ಕೆ ಬಲಿಯಾಗಿಲ್ಲ. ಲಾಟರಿ ನಿಷೇಧ ಮಾಡಿದೆ, ಸಾರಾಯಿ ನಿಷೇಧ ಮಾಡಿದೆ. ಪಕ್ಷ ಕಟ್ಟಬೇಕು ಅಂತ ಗ್ರಾಮ ವಾಸ್ತವ್ಯ ಮಾಡಿದೆ. ಹಣ ಮಾಡೋಕೆ ಇಷ್ಟಪಡಲಿಲ್ಲ ಎಂದು ಭಾವುಕರಾದರು.

ಜೆಡಿಎಸ್ ನಾಶ ಮಾಡ್ತೀವಿ ಅಂದಿದ್ದರು: ರಾಜ್ಯದಲ್ಲಿ ಸ್ವತಂತ್ರ ಸರ್ಕಾರ ತರೋಣ ಅಂತ ಪ್ರಯತ್ನ ಮಾಡಿದೆ. ನನ್ನ ಆರೋಗ್ಯ ಲೆಕ್ಕಿಸದೇ ಕೆಲಸ ಮಾಡಿದೆ. ಅದರಲ್ಲಿ ಯಶಸ್ವಿಯಾಗಲಿಲ್ಲ. ನಾನು ಹೋದ ಕಡೆ 'ಪಂಚರತ್ನ' ಯಾತ್ರೆಗೆ ಲಕ್ಷಾಂತರ ಜನ ಸೇರಿದ್ದರು. ವಿವಿಧ ಬಗೆಯ ಹಾರಗಳನ್ನ ಹಾಕಿದ್ರು, ಗಿನ್ನಿಸ್ ರೇಕಾರ್ಡ್ ಆಯ್ತು. ಇಷ್ಟೆಲ್ಲ ಶ್ರಮ ಹಾಕಿದರೂ 19 ಸೀಟ್‌ಗೆ ಇಳಿಯಿತು. ಜೆಡಿಎಸ್ ಮುಗಿದೇ ಹೋಯ್ತು. ಪಕ್ಷಕ್ಕೆ ಬನ್ನಿ ಅಂತ ಕಾಂಗ್ರೆಸ್‌ನವರು ಕರೆಯುತ್ತಿದ್ದರು. ಕ್ಷೇತ್ರದ ಕೆಲಸಕ್ಕೆ ಹೋದ್ರೆ ಹಣ ಕೊಡ್ತೀವಿ ಪಕ್ಷಕ್ಕೆ ಬನ್ನಿ ಅಂತ ಹಣ ಕೋಡೋಕೆ ಬಂದಿದ್ದರು. ಇವತ್ತು ಎಲ್ಲಿಗೆ ಬಂದು ನಿಂತಿದೆ! 2018ರಲ್ಲಿ ರಾಜ್ಯದ ವಿಷಯಗಳ ಬಗ್ಗೆ ಮೋದಿ ಅವರಿಗೆ ಮಾತಾಡೋಕೆ ಹೋಗಿದ್ದೆ. ಆಗ ನಿನ್ನ ಕೆಲಸಕ್ಕೆ ಬೆಲೆ ಇಲ್ಲ. ನೀನು ರಾಜೀನಾಮೆ ಕೊಟ್ಟು ಬಾ, ನೀನೇ ಸಿಎಂ ಆಗು ಅಂತ ಮೋದಿ ಹೇಳಿದ್ದರು. ಆವತ್ತು ಮೋದಿ ಅವರ ಮಾತು ಕೇಳಿದ್ದರೆ ಕಾರ್ಯಕರ್ತರು ಇಷ್ಟು ಕಷ್ಟಪಡುತ್ತಿರಲಿಲ್ಲ. ಆ ಅವಕಾಶ ನಾನೇ ಕಳೆದುಕೊಂಡೆ ಎಂದು ಕಹಿ ಸತ್ಯಗಳನ್ನು ಕಾರ್ಯಕರ್ತರ ಮುಂದೆ ಬಿಚ್ಚಿಟ್ಟರು. ಈಗಲೂ ನಮ್ಮ ಜೊತೆಗೂಡಿ ಕೆಲಸ ಮಾಡು ಅಂತ ಮೋದಿ ಅವರು ಗೌರವ ಕೊಟ್ಟಿದ್ದಾರೆ. ಈ ಗೌರವ ಕಾರ್ಯಕರ್ತರಿಗೆ ಸಲ್ಲುತ್ತದೆ. ಕಾರ್ಯಕರ್ತರ ಪ್ರೀತಿಗೆ ಫಲ ಸಿಕ್ಕಿದೆ. ನಾವು ಗೆದ್ದಿರೋದು ಎರಡು ಸ್ಥಾನ. ಹಾಸನ ಜನರಿಗೆ ದೋಷ ಕೊಡೊಲ್ಲ, ಹಾಸನದ ಜನ ಕೊಟ್ಟಿರೋ ಶಕ್ತಿ ಕೊನೆ ಉಸಿರು ಇರೋವರೆಗೂ ಮರೆಯೊಲ್ಲ. ಕೆಲವು ರಾಜಕೀಯ ಆಯ್ತು. ಅದಕ್ಕೂ ಕಾಲ ಬರುತ್ತದೆ ಎಂದು ಹೇಳಿದರು.

ಅಭಿನಂದನಾ ಸಮಾರಂಭದಲ್ಲಿ ಮಾಜಿ ಸಚಿವ ಜಿ.ಟಿ ದೇವೇಗೌಡ, ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಸಮೃದ್ಧಿ ಮಂಜುನಾಥ್, ಸಂಸದ ಮಲ್ಲೇಶ್ ಬಾಬು, ವೈಎಸ್‌ವಿ ದತ್ತಾ ಸೇರಿ ಶಾಸಕರು, ಮಾಜಿ ಶಾಸಕರು, ಪಕ್ಷದ ನಾಯಕರು ಭಾಗಿ ಪಾಲ್ಗೊಂಡಿದ್ದರು.

ಮುಂದೆ ದೇಶದ ಪ್ರಧಾನಿ ಆಗಬಹುದು!

ಅದೇ ರೀತಿ ಚಿಕ್ಕಬಳ್ಳಾಪುರ ಸೇರಿ ಬೇರೆ ಬೇರೆ ಕ್ಷೇತ್ರಗಳಲ್ಲಿಯೂ ಜೆಡಿಎಸ್ ಕೊಡುಗೆ ನೀಡಿದೆ ಎಂದರು.

ಜೆಡಿಎಸ್‌ನವರದ್ದು ಕುಟುಂಬ ರಾಜಕಾರಣ ಅಂತಾರೆ. ದೇವೇಗೌಡರು, ಕುಮಾರಸ್ವಾಮಿಯವರು ಇಲ್ಲದಿದ್ದರೆ ಪಕ್ಷ ಉಳಿತಿತ್ತಾ? ಈಗ ಮತ್ತೊಂದು ಹುಲಿ ಬರ್ತಿದೆ(ನಿಖಿಲ್ ಕುಮಾರಸ್ವಾಮಿ). ಕುಮಾರಸ್ವಾಮಿ ನಮಗೆ ಆಶಾಕಿರಣವಾಗಿದ್ದಾರೆ. ಕುಮಾರಸ್ವಾಮಿ, ರೇವಣ್ಣ ಇಬ್ಬರೂ ರಾಜ್ಯಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ನಾವು ಮೂಲೆಯಲ್ಲಿ ಕುಳಿತಿದ್ದೆವು. ದೇವರು ಒಂದು ಅವಕಾಶ ಕೊಟ್ಟಿದ್ದಾನೆ. ಹೀಗಾಗಿ ಬಿಜೆಪಿಯೊಂದಿಗೆ ಸೇರಿ ಮುಂದೆ ಹೋಗಬೇಕಿದೆ. ಎಷ್ಟೇ ಕಷ್ಟ ಬಂದರೂ ಒಂದಾಗಿ ಹೋರಾಟ ಮಾಡಿ ಸರ್ಕಾರ ರಚನೆ ಮಾಡಬೇಕು. ನೀವೇ (ಕಾರ್ಯಕರ್ತರು) ಕುಮಾರಸ್ವಾಮಿ ಆಗಬೇಕು. ಇಡೀ ದೇಶವನ್ನು ಕುಮಾರಸ್ವಾಮಿ ಸುತ್ತಬೇಕಿದೆ, ಸಂಘಟನೆ ಮಾಡಬೇಕಿದೆ ಎಂದರು. ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಯಲ್ಲಿ ನಾವು ಗೂಳಿಗೆ ಕಡಿವಾಣ ಹಾಕಬೇಕಿದೆ. ಗೂಳಿಗೆ ಕಡಿವಾಣ ಹಾಕಲಿಲ್ಲ ಅಂದರೆ ನಮಗೆ ಉಳಿಗಾಲವಿಲ್ಲ. ನಾವು ಮತ್ತೆ ಅಧಿಕಾರಕ್ಕೆ ಬರಬೇಕು. ದೇವೇಗೌಡರು ಇರುವಾಗಲೇ ನಮ್ಮ ಪಕ್ಷ ಬೆಳೆಯಬೇಕು. ಜಿಟಿ ಹೋದ್ರು, ಮಂಜಣ್ಣ ಹೋದ್ರು ಅಂದರು. ಆದರೆ ಯಾರಾದರೂ ಹೋದರಾ! ಇಲ್ಲ, ನಾವೆಲ್ಲ ಕುಮಾರಸ್ವಾಮಿ, ದೇವೇಗೌಡರ ಜೊತೆ ಇದ್ದೇವೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಮತ್ತಿಬ್ಬರು ಶರಣು

ನಟ ದರ್ಶನ್ ಅವರನ್ನು ನೋಡಬಹುದು ಎಂಬ ಅಭಿಲಾಷೆಯೊಂದಿಗೆ ಬೆಂಗಳೂರಿಗೆ ತೆರಳಿದವರು. ಇವರಿಗೆ ದರ್ಶನ್‌ನ ದರ್ಶನ ಭಾಗ್ಯವಂತೂ ಸಿಗಲಿಲ್ಲ. ವಿಪರ್ಯಾಸವೆಂದರೆ ದರ್ಶನ್ ಭಾಗಿಯಾಗಿರುವ ಕೊಲೆ ಪ್ರಕರಣದಲ್ಲಿ ಜೈಲು ಸೇರಬೇಕಾದ ದುಸ್ಥಿತಿ ಒದಗಿ ಬಂದಿದೆ.

ಅಮಾಯಕ ರವಿಕುಮಾರ್ ಸಂಕಷ್ಟಕ್ಕೆ ಸಿಲುಕಿದ್ದು ಹೇಗೆ?: ಅಂಗವಿಕಲ ತಾಯಿ, ಪತ್ನಿ ಹಾಗೂ ಪುತ್ರನೊಂದಿಗೆ ಚಿತ್ರದುರ್ಗದಲ್ಲಿ ವಾಸಿಸುತ್ತಿರುವ ರವಿಕುಮಾರ್ ಟ್ಯಾಕ್ಸಿ ಚಾಲಕ. ಜೂನ್ 8ರಂದು ಬೆಳಗ್ಗೆ ಸುರೇಶ್ ಎಂಬ ಟ್ಯಾಕ್ಸಿ ಚಾಲಕನಿಗೆ ಕರೆ ಮಾಡಿ ಬೆಂಗಳೂರಿಗೆ ಬಾಡಿಗೆಗೆ ಹೋಗಲು ಜಗದೀಶ್ ಕೇಳಿದ್ದಾನೆ. ಆದರೆ, ಸುರೇಶ್ ಚಿಕ್ಕಮಗಳೂರಿಗೆ ಬಾಡಿಗೆಗೆ ಹೋಗಿದ್ದರಿಂದ ರವಿಕುಮಾರ್‌ಗೆ ಕರೆ ಮಾಡಿ ಬೆಂಗಳೂರಿಗೆ ಬಾಡಿಗೆ ಇದೆ ಎಂದು ತಿಳಿಸಿ ಜಗದೀಶ್‌ನ ಸಂಪರ್ಕ ನೀಡಿದ್ದಾನೆ.

ಜಗದೀಶ್ ಜೊತೆ ಮೊಬೈಲ್ ಮೂಲಕ ಬಾಡಿಗೆ ಮಾತನಾಡಿಕೊಂಡ ರವಿಕುಮಾರ್‌ಗೆ ಚಿತ್ರದುರ್ಗ ಹೊರವಲಯದ ಕುಂಚಿಗಗಾಳದ ಪೆಟ್ರೋಲ್ ಬಂಕ್ ಬಳಿಗೆ ಬರುವಂತೆ ಜಗದೀಶ್ ತಿಳಿಸಿದ ಮೇರೆಗೆ ರವಿಕುಮಾರ್ ಅಲ್ಲಿಗೆ ತೆರಳಿದ್ದಾನೆ. ಕಾರಿಗೆ ಡೀಸೆಲ್ ಹಾಕಿಸಿಕೊಂಡು ಸ್ವಲ್ಪ ಮುಂದೆ ಬರುವಂತೆ ತಿಳಿಸಿದಾಗ ನನ್ನ ಬಳಿ ಹಣ ಇಲ್ಲ ಎಂದು ರವಿಕುಮಾರ್ ಹೇಳಲಾಗಿ ಜಗದೀಶ್ ಪೆಟ್ರೋಲ್ ಬಂಕ್‌ಗೆ ಬಂದು 2 ಸಾವಿರ ರೂ.ಗಳಿಗೆ ಡೀಸೆಲ್ ಹಾಕಿಸಿ ರವಿಕುಮಾರ್‌ನನ್ನು ಕರೆದೊಯ್ದಿದ್ದಾನೆ.

ಸ್ವಲ್ಪ ದೂರ ತೆರಳಿದ ನಂತರ ಆಟೋದಲ್ಲಿದ್ದ ರಾಘವೇಂದ್ರ ಅಲಿಯಾಸ್ ರಾಘು, ಅನುಕುಮಾರ್ ಅಲಿಯಾಸ್ ಅನು ಅವರುಗಳು ರೇಣುಕಾಸ್ವಾಮಿಯೊಂದಿಗೆ ಕಾರು ಹತ್ತಿದ್ದಾರೆ. ಪ್ರಯಾಣದ ಮಧ್ಯೆ ಮಹಿಳೆಯರಿಗೆ ಮೆಸೇಜ್ ಮಾಡುವ ಬಗ್ಗೆ ರೇಣುಕಾಸ್ವಾಮಿಯನ್ನು ರಾಘವೇಂದ್ರ ಕೇಳಲಾಗಿ, ಆತ ತಾನು 500 ಹುಡುಗಿಯರಿಗೆ ಮೆಸೇಜ್ ಮಾಡುತ್ತೇನೆ ಎಂದು ಮಾಮೂಲಿಯಾಗೇ ಹೇಳಿದನಂತೆ. ಆಗ ದರ್ಶನ್ ಅವರು ಎರಡು ಮಾತಾಡಿ ಕಳುಹಿಸಿ ಕೊಡುತ್ತಾರೆ ಎಂದು ರೇಣುಕಾಸ್ವಾಮಿಗೆ ರಾಘವೇಂದ್ರ ಹೇಳಿದ್ದಾನೆ.

ಇವರು ತುಮಕೂರು ಟೋಲ್ ಬಳಿಯ ಹೋಟೆಲ್‌ನಲ್ಲಿ ಬೆಳಗಿನ ಉಪಾಹಾರ ಸೇವಿಸಿದ್ದು, ಅದಕ್ಕೆ ರೇಣುಕಾಸ್ವಾಮಿಯೇ ಬಿಲ್ ಹಣ ನೀಡಿದ್ದಾನೆ ಎಂದು ರವಿಕುಮಾರ್ ತುಮಕೂರು ಟ್ಯಾಕ್ಸಿ ಸಂಘದ ಮುಖಂಡರಿಗೆ ತಿಳಿಸಿದ್ದಾನೆ. ರೇಣುಕಾಸ್ವಾಮಿ ಮನಸ್ಸು ಮಾಡಿದ್ದರೆ ತಪ್ಪಿಸಿಕೊಂಡು ಓಡಬಹುದಿತ್ತು. ಮೂತ್ರ ವಿಸರ್ಜನೆಗಾಗಿ ಆತ ಕಾರು ಇಳಿದಾಗಲೂ ಆತನೊಂದಿಗೆ ಯಾರೂ ಹೋಗಿರಲಿಲ್ಲ. ತಪ್ಪಿಸಿಕೊಂಡು ಹೋಗುವ ಅವಕಾಶಗಳು ಸಿಕ್ಕರೂ ಕೂಡ ರೇಣುಕಾಸ್ವಾಮಿ ತಪ್ಪಿಸಿಕೊಂಡು ಹೋಗಿಲ್ಲ ಎಂದು ರವಿಕುಮಾರ್ ತಿಳಿಸಿದ್ದಾನೆ.

ಚಿತ್ರದುರ್ಗದಿಂದ ತೆರಳಿದ ರಾಘವೇಂದ್ರನಿಗೂ ಕೂಡ ರೇಣುಕಾಸ್ವಾಮಿಯನ್ನು ಹತ್ಯೆಗೈದ ಶೆಡ್ ಗೊತ್ತಿರಲಿಲ್ಲವೆಂದು ಕಾಣುತ್ತದೆ. ಹೀಗಾಗಿ ಗೂಗಲ್ ಲೊಕೇಶನ್ ಅನುಸರಿಸಿ ಶೆಡ್‌ಗೆ ಹೋಗಿದ್ದಾರೆ. ಅಲ್ಲಿ ಕಾರು ಚಾಲಕ ರವಿಕುಮಾರ್, ಜಗದೀಶ್ ಮತ್ತು ಅನುಕುಮಾರ್‌ನನ್ನು ಹೊರಗೆ ನಿಲ್ಲಿಸಿ ರೇಣುಕಾಸ್ವಾಮಿಯನ್ನು ರಾಘವೇಂದ್ರ ಶೆಡ್‌ನೊಳಗೆ ಕರೆದೊಯ್ದಿದ್ದಾನೆ. ತಾವು ಶೆಡ್‌ಗೆ ಹೋದಾಗ ಅಲ್ಲಿ ಸುಮಾರು 40 ಮಂದಿ ಇದ್ದರು. ರೇಣುಕಾಸ್ವಾಮಿಯನ್ನು ನೋಡುತ್ತಿದ್ದಂತೆಯೇ "ಇವನನ್ನು ಹೊಡೆಯಲು ನಾವು ಇಷ್ಟು ಮಂದಿ ಬೇಕಾ" ಎಂದು ಹೇಳುತ್ತಾ 10–15 ಮಂದಿ ಅಲ್ಲಿಂದ ಹೋಗಿಬಿಟ್ಟರು ಎಂದು ರವಿಕುಮಾರ್ ಟ್ಯಾಕ್ಸಿ ಸಂಘದ ಮುಖಂಡರಿಗೆ ತಿಳಿಸಿದ್ದಾನೆ.

ರವಿಕುಮಾರ್‌ನನ್ನು ಶರಣಾಗಿಸಲು ಪ್ರಯತ್ನ: ರವಿಕುಮಾರ್ ಮತ್ತು ಇತರರು ಶೆಡ್‌ನ ಹೊರಗಡೆ ಕಾಯುತ್ತಿದ್ದಾಗಲೇ ಶೆಡ್ ಒಳಗೆ ರೇಣುಕಾಸ್ವಾಮಿಯ ಹತ್ಯೆ ನಡೆದುಹೋಗಿದೆ. ಆಗ ಶೆಡ್‌ನಿಂದ ಹೊರಬಂದ ರಾಘವೇಂದ್ರ ವಿಷಯವನ್ನು ಇವರಿಗೆ ತಿಳಿಸಿ ಅಪ್ರೂವರ್ ಆಗುತ್ತೀಯಾ ಎಂದು ರವಿಕುಮಾರ್‌ನನ್ನು ಕೇಳಿದ್ದಾನೆ. ಆದರೆ, ಅದಕ್ಕೆ ನಿರಾಕರಿಸಿದ ರವಿಕುಮಾರ್, ನನ್ನ ಬಾಡಿಗೆ ಹಣ ಕೊಡಿ ನಾನು ಹೋಗುತ್ತೇನೆ ಎಂದು ಹೇಳಲಾಗಿ ರಾಘವೇಂದ್ರ 4 ಸಾವಿರ ರೂ. ನೀಡಿ ರವಿಕುಮಾರ್ ಜೊತೆ ಜಗದೀಶ್ ಮತ್ತು ಅನುಕುಮಾರ್‌ನನ್ನು ಚಿತ್ರದುರ್ಗಕ್ಕೆ ಕಳುಹಿಸಿ ತಾನು ಶೆಡ್‌ನಲ್ಲೇ ಉಳಿದುಕೊಂಡಿದ್ದಾನೆ. ಈ ಎಲ್ಲಾ ವಿಚಾರಗಳನ್ನು ಚಿತ್ರದುರ್ಗ ಟ್ಯಾಕ್ಸಿ ಸಂಘದ ಮುಖಂಡರಿಗೆ ರವಿಕುಮಾರ್ ವಿವರಿಸಿದ್ದು, ನಂತರ ಅವರ ಸಹಕಾರದೊಂದಿಗೆ ಡಿವೈಎಸ್ಪಿ ದಿನಕರ್ ಮುಂದೆ ಶರಣಾಗಿದ್ದಾನೆ. ಇದರ ಬೆನ್ನಲ್ಲೇ ಇಂದು ಜಗದೀಶ್ ಮತ್ತು ಅನುಕುಮಾರ್ ಕೂಡ ಡಿವೈಎಸ್ಪಿ ದಿನಕರ್ ಮುಂದೆ ಶರಣಾಗಿದ್ದು, ಅವರನ್ನು ಬೆಂಗಳೂರು ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ.

ಜೂ.21, ಮೈಸೂರು ಅರಮನೆ ಆವರಣದಲ್ಲಿ ಯೋಗ ಪ್ರದರ್ಶನ

● 10 ಸಾವಿರ ಯೋಗಪಟುಗಳು ಭಾಗಿ ● ಅರ್ಥಪೂರ್ಣ ವಿಶ್ವ ಯೋಗ ದಿನಾಚರಣೆಗೆ ಸರ್ವ ಸಿದ್ಧತೆ





ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದ ಪೂರ್ವ ಸಿದ್ಧತೆ ಕುರಿತಂತೆ ಶುಕ್ರವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿದರು. ಈ ವೇಳೆ ಯೋಗ ದಿನಾಚರಣೆ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ. 14 (ಆರ್‌ಕೆ)– ಮೈಸೂರಿನ ಅರಮನೆ ಆವರಣದಲ್ಲಿ ಜೂನ್ 21ರಂದು ವಿಶ್ವ ಯೋಗ ದಿನಾಚರಣೆ ಅಂಗವಾಗಿ ಬೃಹತ್ ಯೋಗ ಪ್ರದರ್ಶನ ಆಯೋಜಿಸಲಾಗಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಸೂರಲ್ಲಿ ಪ್ರತಿ ವರ್ಷ ನಡೆಯುವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ನಾನು ಭಾಗವಹಿಸುತ್ತೇನೆ. ಸರ್ಕಾರದಿಂದ ನೀಡುವ ಅನುದಾನದ ಜೊತೆಗೆ ವಿವಿಧ ಸಂಘ ಸಂಸ್ಥೆಗಳು, ಯೋಗ ತರಬೇತಿ ಕೇಂದ್ರಗಳ ಸಹಯೋಗದೊಂದಿಗೆ ಅರ್ಥಪೂರ್ಣವಾಗಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.


ಅರಮನೆ ಆವರಣದಲ್ಲಿ ಸ್ವಚ್ಛತೆ, ವೇದಿಕೆ, ಕುಡಿಯುವ ನೀರು, ಮೊಬೈಲ್ ಟಾಯ್ಲೆಟ್‌ಗಳಂತಹ ಮೂಲ ಸೌಲಭ್ಯ ಕಲ್ಪಿಸಿ ಯೋಗ ಪಟುಗಳನ್ನು ಕರೆತರಲು ವಾಹನ ವ್ಯವಸ್ಥೆ ಮಾಡುವ ಮೂಲಕ ಹೆಚ್ಚಿನ ಸಂಖ್ಯೆಯ ಯೋಗಪಟುಗಳು ಭಾಗವಹಿಸುವಂತೆ ಮಾಡಬೇಕು ಎಂದು ಸಂಸದರು ಇದೇ ಸಂದರ್ಭ ತಿಳಿಸಿದರು.

ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಮಾತನಾಡಿ, ವಿಶ್ವದಾದ್ಯಂತ ಪ್ರಸಿದ್ಧಿಯಾಗಿರುವ ವಿಶ್ವ ಯೋಗ ದಿನಾಚರಣೆಯನ್ನು ಮೈಸೂರಲ್ಲಿ ಅಚ್ಚುಕಟ್ಟಾಗಿ ಆಚರಿಸುತ್ತಾ ಬಂದಿದ್ದು, ಜೂನ್ 21 ರಂದು ಬೆಳಗ್ಗೆ 7 ರಿಂದ 8.30 ರವರೆಗೆ ನಡೆಯಲಿರುವ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮೈಸೂರು ನಗರದಾದ್ಯಂತ 10,000 ಮಂದಿ ಪಾಲ್ಗೊಂಡು ಯೋಗ ಪ್ರದರ್ಶನ ನೀಡಲಿದ್ದಾರೆ ಎಂದರು.

ಅಂದು ಬೆಳಗ್ಗೆ 6.30 ಗಂಟೆಗೆ ಅರಮನೆ ಆವರಣದಲ್ಲಿ ಆರಂಭವಾಗುವ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಯೋಗಪಟುಗಳು, ವಿವಿಧ ಯೋಗ ತರಬೇತಿ ಕೇಂದ್ರಗಳ ಯೋಗ ಶಿಕ್ಷಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಅವರು ತಿಳಿಸಿದರು.

ಅರಮನೆ ಗೇಟ್‌ಗಳು, ವಾಹನ ಪಾರ್ಕಿಂಗ್ ಸ್ಥಳ, ಆವರಣದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಿ, ಎಲ್ಲಾ ಯೋಗ ತರಬೇತಿ ಕೇಂದ್ರಗಳು, ಶಾಲಾ–ಕಾಲೇಜು, ವಿವಿಧ ಸಂಘ ಸಂಸ್ಥೆಗಳು, ಸರ್ಕಾರಿ ಇಲಾಖಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಆಯೋಜಿಸಿ ಕನಿಷ್ಠ 10,000 ಮಂದಿ ಯೋಗ ಪ್ರದರ್ಶನ ಮಾಡಲು ಅನುವು ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜೂ.27ರಂದು ಮೈಸೂರಲ್ಲಿ ಕೆಂಪೇಗೌಡ ಜಯಂತಿ ಆಚರಣೆ



ಮೈಸೂರು, ಜೂ. 14 (ಆರ್‌ಕೆ)– ಜೂನ್ 27 ರಂದು ಮೈಸೂರಲ್ಲಿ ನಾಡ ಪ್ರಭು ಕೆಂಪೇಗೌಡರ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ.

ಈ ಕುರಿತು ಇಂದು ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪೂರ್ವಭಾವಿ ಸಭೆ ನಡೆಸಿದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರು, ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜೂನ್ 27 ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದಲ್ಲಿ ಜಯಂತಿ ಕಾರ್ಯಕ್ರಮ ನಡೆಯಲಿದ್ದು, ಸರ್ಕಾರದ ಶಿಷ್ಟಾಚಾರಗಳಿಗೆ ಅನುಸಾರ ತಯಾರಿ ನಡೆಸಬೇಕು. ಸ್ಥಳದಲ್ಲಿ ಸ್ವಚ್ಛತೆ, ಕುಡಿಯುವ ನೀರು, ಶಾಮಿಯಾನ ವ್ಯವಸ್ಥೆ, ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರಿಗೆ ತಲುಪಿಸಬೇಕು ಎಂದು ಅವರು ತಿಳಿಸಿದರು.

ಈ ಸಂದರ್ಭ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಅವರು, ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಕಲಾ ತಂಡಗಳಿಂದ ಗೀತ ಗಾಯನ ಏರ್ಪಡಿಸಲಾಗುವುದು. ಹಾಗೂ ಆಹ್ವಾನ ಪತ್ರಿಕೆಯನ್ನು ಗಣ್ಯರು ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ತಲುಪಿಸಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಲು ಸಿಬ್ಬಂದಿ ಸಹಕರಿಸಬೇಕು ಎಂದರು.

ಕೆಂಪೇಗೌಡರು ಬೆಂಗಳೂರು ಮತ್ತು ಇಡೀ ರಾಜ್ಯಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿ ಮುಂದಿನ ಪೀಳಿಗೆ ಅವರ ಆದರ್ಶವನ್ನು ಮರೆಯುವಂತಿಲ್ಲ. ಆದ್ದರಿಂದ ಅವರ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಿ ಗೌರವ ಸಮರ್ಪಿಸಬೇಕೆಂದು ಅವರು ಸಲಹೆ ನೀಡಿದರು.

ಕೇಂದ್ರ ಸಚಿವ ಹೆಚ್‌ಡಿಕೆಗೆ ಅಭಿನಂದನೆ



ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ರಾಜ್ಯಕ್ಕೆ ಆಗಮಿಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀಮತಿ ಕೆ.ಲಲಿತಾ ಜಿ.ಟಿ.ದೇವೇಗೌಡರು ಬೆಂಗಳೂರಿನ ಜೆಡಿಎಸ್ ಕಚೇರಿಯಲ್ಲಿ ಅಭಿನಂದಿಸಿದರು. ಈ ವೇಳೆ ಶಾಸಕರಾದ ಜಿ.ಟಿ.ದೇವೇಗೌಡರು, ಸಮೃದ್ಧಿ ಮಂಜುನಾಥ್, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಉಪಾಧ್ಯಕ್ಷ ಮಹೇಂದ್ರ ಪ್ರಸಾದ್ ಗೌಡರು ಉಪಸ್ಥಿತರಿದ್ದರು.

ಅಧಿಕ ಸಲ ರಕ್ತದಾನ ಮಾಡಿದವರಿಗೆ ಅಭಿನಂದನೆ




ಮೈಸೂರಿನ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ಆವರಣದಲ್ಲಿ ಹಲವು ಬಾರಿ ರಕ್ತದಾನ ಮಾಡಿದವರನ್ನು ಅಭಿನಂದಿಸಲಾಯಿತು.

ಮೈಸೂರು, ಜೂ.14– ಹಲವು ಬಾರಿ ರಕ್ತದಾನ ಮಾಡುವ ಮೂಲಕ ಜೀವ ರಕ್ಷಣೆಗೆ ನೆರವಾಗಿರುವ ರಕ್ತದಾನಿಗಳನ್ನು ಅಭಿನಂದಿಸುವ ಮೂಲಕ ಸಮೃದ್ಧಿ ವಾರ್ತೆ ಪತ್ರಿಕೆ, ರಿಲಯನ್ಸ್ ಇನ್ಸೂರೆನ್ಸ್ ಹಾಗೂ ಒಂದು ಹೆಜ್ಜೆ ದಾನಿಗಳ ಬಳಗದ ವತಿಯಿಂದ ವಿಶ್ವ ರಕ್ತದಾನಿಗಳ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು ವಿಜಯನಗರದ ಶ್ರೀ ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದೇವಸ್ಥಾನದ ಕಾರ್ಯದರ್ಶಿ ಶ್ರೀನಿವಾಸ್ ಸ್ವಾಮೀಜಿ ಮತ್ತು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅತೀ ಹೆಚ್ಚು ಬಾರಿ ರಕ್ತದಾನ ಮಾಡಿದ ಅನಿಲ್(10 ಬಾರಿ), ಉಮೇಶ್(10 ಬಾರಿ), ಮಧುಸೂದನ್ (12 ಬಾರಿ), ಅಭಿ(20 ಬಾರಿ), ಪ್ರಿಯದರ್ಶಿನಿ ಹೋಟೆಲ್ ಸುರೇಶ್(10 ಬಾರಿ) ಅವರಿಗೆ 'ಕರುನಾಡ ಸೇನಾನಿ' ಪ್ರಶಂಸನಾ ಪತ್ರ ನೀಡಿ, ಗೌರವಿಸಿದರು.

ಕಾರ್ಯಕ್ರಮದಲ್ಲಿ ಒಂದು ಹೆಜ್ಜೆ ರಕ್ತದಾನಿ ಬಳಗದ ಅಧ್ಯಕ್ಷ ಮಂಜು, ಸಮೃದ್ಧಿ ವಾರ್ತೆ ಪತ್ರಿಕೆಯ ಸಹನಾ ಮತ್ತು ರಿಲಯನ್ಸ್ ಇನ್ಸೂರೆನ್ಸ್‌ನ ಅಜಯ್ ಮತ್ತಿತರರು ಉಪಸ್ಥಿತರಿದ್ದರು.

ಕಾವೇರಿ ನೀರಿನ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿ ಇಂದು ಮೇಕೆದಾಟುವಿನಲ್ಲಿ ಧರಣಿ



ಮೈಸೂರು, ಜೂ.14(ಜಿಎ)–ಕಾವೇರಿ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಬೇಕು ಹಾಗೂ ಮೇಕೆದಾಟು ಯೋಜನೆಯನ್ನು ಶೀಘ್ರವಾಗಿ ಆರಂಭಿಸಬೇಕೆಂದು ಒತ್ತಾಯಿಸಿ ಜೂ.15ರಂದು 11.30ಕ್ಕೆ ಮೇಕೆದಾಟಿನಲ್ಲಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಜಯಪ್ರಕಾಶ್(ಜೆಪಿ) ತಿಳಿಸಿದರು..

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳುನಾಡಿನ ವಿಚಾರದಲ್ಲಿ ಅಲ್ಲಿನ ರಾಜಕಾರಣಿಗಳಿಗಿರುವ ಇಚ್ಛಾ ಶಕ್ತಿಯನ್ನು ಕರ್ನಾಟಕದ ರಾಜಕಾರಣಿಗಳಿಗೆ ಮನವರಿಕೆ ಮಾಡಿಕೊಡಲು ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಮೇಕೆದಾಟಿನಲ್ಲಿ ಧರಣಿ ನಡೆಸಲಾಗುತ್ತಿದೆ ಎಂದರು. ಅಂದು ಬೆಳಗ್ಗೆ 8.30ಕ್ಕೆ ನಗರದ ಕೋಟೆ ಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಎಲ್ಲಾ ಹೋರಾಟಗಾರರು ಎರಡು ವಾಹನಗಳಲ್ಲಿ ಮೇಕೆದಾಟಿಗೆ ತೆರಳಿ 11.30ರಿಂದ 1.30ರವರೆಗೆ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರ ಮೇಕೆದಾಟು ಯೋಜನೆಗೆ ಬೇಕಾದ ಅನುಮತಿಯನ್ನು ಪಡೆಯಲು ಮತ್ತು ಯೋಜನೆ ಪ್ರಾರಂಭಿಸಲು ಕಾರ್ಯ ಪ್ರವೃತ್ತರಾಗಬೇಕೆಂದು ಹಾಗೂ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಕಾವೇರಿ ನೀರಿನ ಸಮಸ್ಯೆ ಶಾಶ್ವತವಾಗಿ ಪರಿಹರಿಸಬೇಕೆಂದು ಒತ್ತಾಯಿಸಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೂಗೂರು ನಂಜುಂಡಸ್ವಾಮಿ, ಎಂ.ಜೆ.ಸುರೇಶ್‌ಗೌಡ, ತೇಜಸ್ ಲೋಕೇಶ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಸುಳಿದಾಡುತ್ತಿವೆ ಡೆಂಗ್ಯೂ, ಚಿಕೂನ್ ಗುನ್ಯಾ ಮಹಾ ಮಾರಿಯರು!

● ಅಗತ್ಯ ಎಚ್ಚರಿಕಾ ಕ್ರಮ ವಹಿಸುವಂತೆ ಮೈಸೂರು ಪಾಲಿಕೆ ಆಯುಕ್ತರ ಸಲಹೆ ● ಪ್ರಮುಖವಾಗಿ ಸೊಳ್ಳೆಗಳ ಬಗ್ಗೆ ಎಚ್ಚರ ವಹಿಸಲು ಸೂಚನೆ

ಮೈಸೂರು, ಜೂ.14– ಮೈಸೂರಿನಲ್ಲಿ ಡೆಂಗ್ಯೂ ಮತ್ತು ಚಿಕೂನ್ ಗುನ್ಯಾ ಕಾಯಿಲೆಗಳನ್ನು ಹರಡುವ ಈಡಿಸ್ ಈಜಿಪ್ಟ್ ಸೊಳ್ಳೆಯ ಉತ್ಪತ್ತಿಯು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಎಚ್ಚರ ವಹಿಸಬೇಕು ಎಂದು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್–ರೆಹಮಾನ್ ಷರೀಫ್ ಮನವಿ ಮಾಡಿದ್ದಾರೆ.

ಪಾಲಿಕೆ ವ್ಯಾಪ್ತಿಯ 65 ವಾರ್ಡ್‌ಗಳಲ್ಲೂ ಪರಿಶೀಲನೆ ನಡೆಸಿ, ಹಳೇ ಟೈರು, ಎಳನೀರಿನ ಚಿಪ್ಪು, ಮರದ ಪೊಟರೆ, ಹೂವಿನ ಕಪಾಟು, ಒಡೆದ ಬಾಟಲಿ ಮತ್ತಿತರ ತ್ಯಾಜ್ಯದಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರ ವಹಿಸುವುದರ ಜೊತೆಗೆ ಸ್ವಚ್ಛತಾ ಕಾರ್ಯ ಕೈಗೊಂಡು ಸೂಕ್ತ ರೀತಿಯಲ್ಲಿ ತ್ಯಾಜ್ಯ ವಿಲೇವಾರಿ ಮಾಡಿಸಬೇಕು. ಡೆಂಗ್ಯೂ ಉಲ್ಬಣಗೊಳ್ಳದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಸೊಳ್ಳೆ ನಿಯಂತ್ರಣ ಔಷಧಿ ಸಿಂಪಡಣೆ ಮಾಡಿಸಬೇಕು. ಪ್ರತಿ ಮನೆಗೂ ಭೇಟಿ ನೀಡಿ ಡೆಂಗ್ಯೂ ರೋಗ ನಿಯಂತ್ರಣ ಕುರಿತಾದ ಕರಪತ್ರ ವಿತರಿಸಿ ಅರಿವು ಮೂಡಿಸಬೇಕು. ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ವಲಯ ಆಯುಕ್ತರು, ಪರಿಸರ ಅಭಿಯಂತರರು ಹಾಗೂ ಆರೋಗ್ಯ ನಿರೀಕ್ಷಕರು ಹಾಗೂ ಸಿಬ್ಬಂದಿಯನ್ನು ನೇರ ಹೊಣೆಗಾರರನ್ನಾಗಿ ಮಾಡಿ, ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.



ಅಶಾದ್

ಡೆಂಗ್ಯೂ ಲಕ್ಷಣಗಳು: ಡೆಂಗ್ಯೂ ಜ್ವರ ಈಡಿಸ್ ಈಜಿಪ್ಟ್ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗ, ಮಾಂಸಖಂಡ ಮತ್ತು ಕೀಲುಗಳಲ್ಲಿ ವಿಪರೀತ ನೋವು ಕಾಣಿಸಿಕೊಳ್ಳುವುದು, ತೀವ್ರ ಸ್ಥಿತಿಯಲ್ಲಿ ಬಾಯಿ, ಮೂಗು ಮತ್ತು ಒಸಡುಗಳಿಂದ ರಕ್ತಸ್ರಾವ ಹಾಗೂ ಚರ್ಮದ ಮೇಲೆ ಅಲ್ಲಲ್ಲಿ ರಕ್ತಸ್ರಾವದ ಗುರುತುಗಳು ಕಾಣಿಸಿಕೊಳ್ಳುತ್ತವೆ.

ರೋಗ ನಿಯಂತ್ರಣ ವಿಧಾನಗಳು: ಎಲ್ಲಾ ನೀರಿನ ತೊಟ್ಟಿಗಳು, ಡ್ರಮ್, ಬ್ಯಾರೆಲ್‌ಗಳು, ಏರ್ ಕೂಲರ್ ಇತ್ಯಾದಿಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಒಣಗಿಸಿ, ಮತ್ತೆ ಭರ್ತಿ ಮಾಡಿಕೊಳ್ಳುವುದು. ನೀರು ಖಾಲಿ ಮಾಡಲಾಗದಿದ್ದರೆ ಸೊಳ್ಳೆಗಳು ಒಳಗೆ ನುಸುಳದಂತೆ ಸರಿಯಾದ ಮುಚ್ಚಳದಿಂದ ಮುಚ್ಚುವುದು. ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳಾದ ಟೈರು, ಎಳನೀರಿನ ಚಿಪ್ಪು, ಮರದ ಪೊಟರೆ, ಹೂವಿನ ಕಪಾಟು, ಒಡೆದ ಬಾಟಲಿಯಲ್ಲಿ ಮಳೆನೀರು ಸಂಗ್ರಹವಾಗದಂತೆ ಎಚ್ಚರ ವಹಿಸುವುದು ಅಥವಾ ವಿಲೇವಾರಿ ಮಾಡುವುದು. ಸ್ವಯಂ ರಕ್ಷಣಾ ವಿಧಾನಗಳಾದ ಸೊಳ್ಳೆ ನಿರೋಧಕಗಳನ್ನು ಹಾಗೂ ಸೊಳ್ಳೆ ಪರದೆಯನ್ನು ಬಳಸುವ ಮೂಲಕ ಸೊಳ್ಳೆಗಳ ಕಚ್ಚುವಿಕೆಯಿಂದ ರಕ್ಷಣೆ ಪಡೆಯುವುದು.



ಮುನ್ನೆಚ್ಚರಿಕೆ ಕ್ರಮಗಳು: ಸಾರ್ವಜನಿಕ ನೀರಿನ ಕೊಳಾಯಿ ಮತ್ತು ಕುಡಿಯುವ ನೀರನ್ನು ಸಂಗ್ರಹಿಸುವ ಸ್ಥಳವನ್ನು ಸ್ವಚ್ಛವಾಗಿಡುವುದು. ಕುದಿಸಿ ಆರಿಸಿದ ನೀರನ್ನೇ ಕುಡಿಯುವುದು. ಶುದ್ಧ ನೀರಿನ ಘಟಕದಲ್ಲಿನ (ROPLANT) ನೀರನ್ನು ಉಪಯೋಗಿಸುವುದು. ಹೋಟೆಲ್‌ಗಳಲ್ಲಿ ಕಡ್ಡಾಯವಾಗಿ ಗ್ರಾಹಕರಿಗೆ ಬಿಸಿ ನೀರು ನೀಡುವುದು. ರಸ್ತೆ ಬದಿಯಲ್ಲಿ ಮಾರಾಟ ಮಾಡುವ ಪಾನಿಪುರಿ, ತಂಪು ಪಾನೀಯ ಮತ್ತು ಸೋಡಾ ಹಾಗೂ ಇತರೆ ಆಹಾರ ಪದಾರ್ಥಗಳನ್ನು ಸಾರ್ವಜನಿಕರು ಸಾಧ್ಯವಾದಷ್ಟು ಜಾಗೃತೆಯಿಂದ ಉಪಯೋಗಿಸುವುದು. ಊಟ ಮಾಡುವ ಮುನ್ನ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಸ್ವಚ್ಛಗೊಳಿಸುವುದು. ಹೋಟೆಲ್, ರೆಸ್ಟೋರೆಂಟ್, ಬೇಕರಿಗಳಲ್ಲಿ ಬಿಸಿಯಾದ ಆಹಾರ ಪದಾರ್ಥಗಳನ್ನೇ ಗ್ರಾಹಕರಿಗೆ ನೀಡುವುದು. ತಿಂಡಿ ತಿನಿಸು ಮಾರಾಟ ಮಾಡುವ ಎಲ್ಲಾ ವ್ಯಾಪಾರಿಗಳು ಮತ್ತು ಹೋಟೆಲ್‌ನಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ಕಾರ್ಮಿಕರು ಕಡ್ಡಾಯವಾಗಿ ಸುರಕ್ಷಾ ಧಿರಿಸು(ಹ್ಯಾಂಡ್ ಗ್ಲೌಸ್, ಹೆಡ್‌ಕ್ಯಾಪ್, ಮಾಸ್ಕ್, ಏಪ್ರನ್)ಗಳನ್ನು ಬಳಸುವುದು. ರಸ್ತೆ ಬದಿಯಲ್ಲಿ ತೆರೆದ ರೀತಿಯಲ್ಲಿ ಮಾರಾಟ ಮಾಡುವ ಆಹಾರ ಪದಾರ್ಥ, ತಿಂಡಿ ತಿನಿಸುಗಳು, ಕತ್ತರಿಸಿದ ಹಣ್ಣು ಹಂಪಲುಗಳನ್ನು ತಿನ್ನಬಾರದು. ಹೊರಗಡೆ ಹೋಗುವಾಗ ಸಾಧ್ಯವಾದಷ್ಟು ನೀರನ್ನು ಬಾಟಲ್‌ಗಳಲ್ಲಿ ಕೊಂಡೊಯ್ಯುವುದು. ಸಿದ್ಧಪಡಿಸಿದ ಆಹಾರ ಪದಾರ್ಥಗಳ ಮೇಲೆ ಕ್ರಿಮಿಕೀಟಗಳು ಕುಳಿತುಕೊಳ್ಳದಂತೆ ಮುನ್ನೆಚ್ಚರಿಕೆ ವಹಿಸುವುದು.

ಈ ಎಲ್ಲಾ ಮಾರ್ಗಸೂಚಿಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿನ ಸಾರ್ವಜನಿಕರು, ಹೋಟೆಲ್ ಮಾಲೀಕರು, ಬೀದಿಬದಿ ವ್ಯಾಪಾರಿಗಳು ಸೇರಿದಂತೆ ಎಲ್ಲರೂ ಪಾಲಿಸುವ ಮೂಲಕ ಸಾಂಕ್ರಾಮಿಕ ರೋಗಗಳು ಹರಡದಂತೆ ಮೈಸೂರು ಮಹಾನಗರ ಪಾಲಿಕೆಯೊಂದಿಗೆ ಸಹಕರಿಸುವಂತೆ ಆಯುಕ್ತರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಹೆದ್ದಾರಿಯಲ್ಲಿ ಕಾರು ಡಿಕ್ಕಿಯಾಗಿ ಜಿಂಕೆ ಸಾವು



ಕುಶಾಲನಗರ: ಸಮೀಪದ ಆನೆಕಾಡು ಮೀಸಲು ಅರಣ್ಯ ಪ್ರದೇಶದ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ಕಾರು ಡಿಕ್ಕಿ ಹೊಡೆದ ಪರಿಣಾಮ ಜಿಂಕೆ ಸ್ಥಳದಲ್ಲೇ ಮೃತಪಟ್ಟಿದೆ.

ಕುಶಾಲನಗರದಿಂದ ಸುಂಟಿಕೊಪ್ಪ ಕಡೆಗೆ ಹೋಗುತ್ತಿದ್ದ ಕಾರು ಆನೆಕಾಡಿನಲ್ಲಿ ರಸ್ತೆ ದಾಟುತ್ತಿದ್ದ 11 ವರ್ಷದ ಗಂಡು ಜಿಂಕೆಗೆ ಡಿಕ್ಕಿ ಹೊಡೆದಿದೆ. ಇದರಿಂದ ಜಿಂಕೆ ಸ್ಥಳದಲ್ಲೇ ಮೃತಪಟ್ಟಿದೆ. ಸ್ಥಳಕ್ಕೆ ಕುಶಾಲನಗರ ವಲಯ ಅರಣ್ಯಾಧಿಕಾರಿ ರತನ್ ಕುಮಾರ್, ಆನೆಕಾಡು ಮೀಸಲು ಅರಣ್ಯ ಪ್ರದೇಶ ಡಿಆರ್‌ಎಫ್‌ಓ ದೇವಯ್ಯ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಕಾರು ಚಾಲಕ ರವಿ ವಿರುದ್ಧ ವನ್ಯಜೀವಿ ಸಂರಕ್ಷಣೆ ಕಾಯ್ದೆಯಡಿ ಪ್ರಕರಣ ದಾಖಲಿಸಿದರು.

ಆನೆಕಾಡು ಮೀಸಲು ಅರಣ್ಯ ಪ್ರದೇಶದಲ್ಲಿ ಹೆದ್ದಾರಿ ಹಾದು ಹೋಗಿದ್ದು, ಯಾವಾಗಲು ವನ್ಯಜೀವಿಗಳು ರಸ್ತೆ ದಾಟುತ್ತವೆ. ಆದ್ದರಿಂದ ಚಾಲಕರು ನಿಧಾನವಾಗಿ ವಾಹನ ಚಾಲನೆ ಮಾಡಬೇಕು ಎಂದು ಸೂಚನಾ ಫಲಕ ಅಳವಡಿಸಲಾಗಿದೆ. ಆದರೂ, ಇಂತಹ ಘಟನೆಗಳು ಆಗಾಗ್ಗೆ ನಡೆಯುತ್ತಿರುತ್ತವೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಜೂ.14– ಪೊನ್ನಂಪೇಟೆ ವಿದ್ಯುತ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ಜೂ.15ರಂದು ಬೆಳಗ್ಗೆ 9.30ರಿಂದ ಸಂಜೆ 4.30ರವರೆಗೆ ಪೊನ್ನಂಪೇಟೆ, ವಿರಾಜಪೇಟೆ, ಶ್ರೀಮಂಗಲ, ಸಿದ್ದಾಪುರ, ಮೂರ್ನಾಡು ವಿದ್ಯುತ್ ಉಪ ಕೇಂದ್ರ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಗೋಣಿಕೊಪ್ಪಲು, ನಲ್ಲೂರು, ಹುದಿಕೇರಿ, ತಿತಿಮತಿ, ಹಾತೂರು, ಪಾಲಿಬೆಟ್ಟ, ಬಾಳಲೆ, ಕಾನೂರು, ಬಿರುನಾಣಿ, ಕುಟ್ಟ, ಬಿ.ಶೆಟ್ಟಿಗೇರಿ, ಬೇತ್ರಿ, ಕಡಂಗಮರೂರು, ಕಾಕೋಟುಪರಂಬು, ಅಮ್ಮತ್ತಿ, ಮಾಲ್ದಾರೆ, ಮೂರ್ನಾಡು, ಮರುಗೋಡು, ನಾಪೋಕ್ಲು, ಕಕ್ಕಬೆ, ಅರೆಕಾಡು, ಐಯ್ಯಂಗೇರಿ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಮಡಿಕೇರಿ ವಿಭಾಗದ ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ವ್ಯಾಪಾರಿಗಳಿಗೆ ದಂಡದ ಬಿಸಿ

ಅಂಗಡಿ, ಹೋಟೆಲ್‌ಗಳಿಗೆ ತಂಬಾಕು ನಿಯಂತ್ರಣ ಕೋಶಾಧಿಕಾರಿಗಳ ದಿಢೀರ್ ದಾಳಿ

ಮಡಿಕೇರಿ, ಜೂ.14–ಕುಶಾಲನಗರ ತಾಲೂಕಿನ ಹೆಬ್ಬಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಗಡಿ, ಹೋಟೆಲ್‌ಗಳಿಗೆ ತಂಬಾಕು ನಿಯಂತ್ರಣ ಕೋಶಾಧಿಕಾರಿಗಳ ತಂಡ ಶುಕ್ರವಾರ ದಿಢೀರ್ ದಾಳಿ ನಡೆಸಿ, ನಿಯಮ ಉಲ್ಲಂಘಿಸಿದ ಮಾಲೀಕರು ಹಾಗೂ ವ್ಯಾಪಾರಿಗಳಿಗೆ ದಂಡದ ಬಿಸಿ ಮುಟ್ಟಿಸಿದೆ.

ಜಿಲ್ಲಾ ಮತ್ತು ತಾಲೂಕು ತಂಬಾಕು ನಿಯಂತ್ರಾ ಕೋಶ, ಕುಶಾಲನಗರ ತಾಲೂಕು ಆರೋಗ್ಯ ಅಧಿಕಾರಿ ಕಚೇರಿ, ತಂಬಾಕು ತನಿಖಾ ತಂಡದ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಬ್ಬಾಲೆ ಗ್ರಾಪಂ ವ್ಯಾಪ್ತಿಯ ಅಂಗಡಿ, ಹೋಟೆಲ್, ಬಾರ್ ಮತ್ತು ರಸ್ತೆ ಬದಿಯ ಪಾನಿಪುರಿ, ಗೋಬಿ ಅಂಗಡಿಗಳು ಸೇರಿದಂತೆ ವಿವಿಧ ತಿಂಡಿ ತಿನಿಸು ಮಾರಾಟ ಅಂಗಡಿಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಇದೇ ವೇಳೆ ನಿಯಮ ಉಲ್ಲಂಘಿಸಿದ ಅಂಗಡಿ ಹಾಗೂ ಹೋಟೆಲ್‌ಗಳ ಮಾಲೀಕರಿಗೆ ದಂಡ ವಿಧಿಸಿ, ಎಚ್ಚರಿಸಿದರು.



ಹೆಬ್ಬಾಲೆ ಗ್ರಾಪಂ ವ್ಯಾಪ್ತಿಯ ಹೋಟೆಲ್‌ವೊಂದಕ್ಕೆ ತಾಲೂಕು ಆರೋಗ್ಯಾಧಿಕಾರಿ ಶಾಂತಿ ನೇತೃತ್ವದಲ್ಲಿ ದಿಢೀರ್ ದಾಳಿ ನಡೆಸಿ, ಪರಿಶೀಲಿಸಲಾಯಿತು.

ಹೋಟೆಲ್ ಮತ್ತು ಬಾರ್‌ಗಳಲ್ಲಿ ಕುಡಿಯಲು ಕುದಿಸಿ ಆರಿಸಿದ ನೀರನ್ನು ಉಪಯೋಗಿಸುವಂತೆ, ಶುಚಿತ್ವ ಕಾಪಾಡುವಂತೆ ಹಾಗೂ ಎಫ್‌ಎಸ್‌ಎಸ್‌ಓ ಲೈಸನ್ಸ್ ಪಡೆಯುವಂತೆ, ಈಗಾಗಲೇ ಲೈಸೆನ್ಸ್ ಪಡೆದಿದ್ದರೇ ಅದನ್ನು ನವೀಕರಣಗೊಳಿಸುವಂತೆ ಆರೋಗ್ಯ ಇಲಾಖೆ ವತಿಯಿಂದ ಎಚ್ಚರಿಸಲಾಯಿತು.

ಇದೇ ವೇಳೆ ಇತ್ತೀಚಿಗೆ ಡೆಂಗ್ಯೂ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಲ್ಲರೂ ಸ್ವಚ್ಛತೆ ಕಾಪಾಡಬೇಕು ಎಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಅಂಗಡಿ ಮತ್ತು ಹೋಟೆಲ್‌ಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಯಿತು.

> "ಜಿಲ್ಲಾ ಮತ್ತು ತಾಲೂಕು ತಂಬಾಕು ನಿಯಂತ್ರಣ ಕೋಶ ವತಿಯಿಂದ ಹೆಬ್ಬಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಗಡಿ, ಹೋಟೆಲ್, ಬಾರ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಜೊತೆಗೆ ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗಿದೆ. ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಯಿತು.
>
> –ಶಾಂತಿ, ತಾಲೂಕು ಆರೋಗ್ಯಾಧಿಕಾರಿ

ಎಸ್‌ಪಿಗೆ ದಲಿತ ಸಂಘರ್ಷ ಸಮಿತಿ ದೂರು ಸಲ್ಲಿಕೆ



ಅತ್ತೂರು ನಲ್ಲೂರಿನಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ಆಗ್ರಹಿಸಿ ಗ್ರಾಮಸ್ಥರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ದೂರು ಸಲ್ಲಿಸಿದರು.

ಮಡಿಕೇರಿ: ಸುಂಟಿಕೊಪ್ಪ ಹೋಬಳಿಯ ಅತ್ತೂರು ನಲ್ಲೂರು ಗ್ರಾಮದಲ್ಲಿ ದಲಿತರು ಹಾಗೂ ಹಿಂದುಳಿದವರ ಮೇಲೆ ನಾಲ್ವರು ಯುವಕರು ನಿರಂತರವಾಗಿ ದೌರ್ಜನ್ಯ ನಡೆಸುತ್ತಿದ್ದು, ತಕ್ಷಣ ಇವರನ್ನು ಗಡಿಪಾರು ಮಾಡಬೇಕು ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಗ್ರಾಮಸ್ಥರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ದೂರು ಸಲ್ಲಿಸಿದರು.

ಅತ್ತೂರು–ನಲ್ಲೂರು ಗ್ರಾಮದಲ್ಲಿ ಸುಮಾರು 150 ದಲಿತರು ಹಾಗೂ ಹಿಂದುಳಿದವರು ಕೂಲಿ ಮಾಡಿ ಜೀವನ ನಡೆಸುತ್ತಿದ್ದಾರೆ. ಆದರೆ, ಅದೇ ಗ್ರಾಮದ ನಾಲ್ವರು ಯುವಕರು ಸಂಘಟನೆಗಳ ಹೆಸರಿನಲ್ಲಿ ದೌರ್ಜನ್ಯ ನಡೆಸಿ ನೆಮ್ಮದಿ ಹಾಳು ಮಾಡುತ್ತಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದರು.

ಕೆಲ ದಿನಗಳ ಹಿಂದೆ ಗ್ರಾಮದ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿ, ಪ್ರಕರಣದ ಹಾದಿ ತಪ್ಪಿಸಲು ಯತ್ನಿಸಿದ್ದಾರೆ. ಇದೇ ರೀತಿ ಮುಂದುವರೆದರೆ ಮುಂದೆ ದೊಡ್ಡ ಅನಾಹುತ ನಡೆಯಲಿದೆ. ಆದ್ದರಿಂದ ತಕ್ಷಣ ನಾಲ್ವರನ್ನು ಗಡಿಪಾರು ಮಾಡ ಬೇಕೆಂದು ಒತ್ತಾಯಿಸಿದರು.

ದಸಂಸ ಜಿಲ್ಲಾಧ್ಯಕ್ಷ ಹೆಚ್.ಎಲ್.ದಿವಾಕರ್, ಗ್ರಾಮಸ್ಥರಾದ ಸ್ವಾತಿ, ಹೆಚ್.ಎಸ್.ಚೈತ್ರಾ, ಜೆ.ಬಿ.ಲಲಿತಾ, ಹೆಚ್.ಡಿ.ಪ್ರಸಾದ್, ಅಂಕಶೆಟ್ಟಿ, ಆನಂದ್ ಮತ್ತಿತರರು ಇದ್ದರು.

ಕುಶಾಲನಗರದಲ್ಲಿ ಸಹಕಾರ ಕಪ್ ಕ್ರೀಡೋತ್ಸವ

ಕುಶಾಲನಗರ, 14–ಪಟ್ಟಣದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಶುಕ್ರವಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರಿಗೆ ಸಹಕಾರ ಕಪ್‌ನ ಗ್ರಾಮೀಣ ಕ್ರೀಡಾಕೂಟ ಆಯೋಜಿಸಲಾಗಿತ್ತು.

ಕೊಡಗು ಜಿಲ್ಲೆಯ ಸಹಕಾರ ಕ್ಷೇತ್ರ ತನ್ನದೇ ಆದ ಛಾಪು ಮೂಡಿಸುವ ಮೂಲಕ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದು, ಶತಮಾನ ಕಂಡ ಕೃಷಿ ಪತ್ತಿನ ಸಹಕಾರ ಸಂಘವಾಗಿದೆ. ಕೇವಲ ಬ್ಯಾಂಕ್ ವ್ಯವಹಾರಕ್ಕೆ ಸೀಮಿತವಾಗದೆ ಇನ್ನಿತರ ಕ್ಷೇತ್ರದಲ್ಲೂ ತೊಡಗಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಪ್ರಥಮ ಬಾರಿಗೆ ಕ್ರೀಡಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸದಸ್ಯರಿಗೆ ಆಯೋಜಿಸಿದೆ. ಜೊತೆಗೆ ಸದಸ್ಯರ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಬಹುಮಾನ ನೀಡುವ ಮೂಲಕ ಅವರ ಶೈಕ್ಷಣಿಕ ಪ್ರಗತಿಗೆ ವಿಶೇಷ ಒತ್ತು ನೀಡುತ್ತಿದೆ. ಕ್ರೀಡಾಕೂಟಕ್ಕೆ ಸಂಘದ ಅಧ್ಯಕ್ಷ ಟಿ.ಆರ್.ಶರವಣಕುಮಾರ್ ಚಾಲನೆ ನೀಡಿದರು.



ಕುಶಾಲನಗರದಲ್ಲಿ ನಡೆದ ಸಹಕಾರ ಕಪ್‌ನ ಗ್ರಾಮೀಣ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರು.

ಕ್ರೀಡಾಕೂಟದ ಜರ್ಸಿ ಅನ್ನು ಅಕ್ರಮ–ಸಕ್ರಮ ತಾಲೂಕು ಸಮಿತಿ ಅಧ್ಯಕ್ಷ ಗೋವಿಂದಪ್ಪ ಹಾಗೂ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ಬಿಡುಗಡೆಗೊಳಿಸಿದರು. ಸಂಘದ ಉಪಾಧ್ಯಕ್ಷ ವಿ.ಎಸ್.ಆನಂದ್ ಕುಮಾರ್, ನಿರ್ದೇಶಕರಾದ ಪಿ.ಬಿ.ಯತೀಶ್, ಮಧುಸೂದನ್, ಮಧು, ನೇತ್ರಾವತಿ, ಕವಿತಾ, ರಾಜೇಶ್, ಹಿರಿಯ ಸದಸ್ಯ ಶಶಿಧರ್ ಮೂರ್ತಿ, ಮುಖ್ಯ ಶಿಕ್ಷಕಿ ಕೆ.ಆರ್.ರಾಣಿ, ಹೆಬ್ಬಾಲೆ ಗ್ರಾಪಂ ಮಾಜಿ ಅಧ್ಯಕ್ಷ ಎಚ್.ಎಸ್.ರಾಜಶೇಖರ್, ಸಂಘದ ಕಾರ್ಯನಿರ್ವಣಾಧಿಕಾರಿ ಲೋಕೇಶ್, ಸಿಬ್ಬಂದಿ ಪಾಲ್ಗೊಂಡಿದ್ದರು.

'ಅಶ್ವಮೇಧ' ಸಂಚಾರಕ್ಕೆ ಶಾಸಕರ ಚಾಲನೆ



ಮಡಿಕೇರಿ ಕೆಎಸ್‌ಆರ್‌ಟಿಸಿ ನಿಲ್ದಾಣದಲ್ಲಿ 'ಅಶ್ವಮೇಧ' ಬಸ್ ಸಂಚಾರಕ್ಕೆ ಶಾಸಕ ಡಾ.ಮಂತರ್‌ಗೌಡ ಚಾಲನೆ ನೀಡಿದರು.

ಮಡಿಕೇರಿ ಜೂ.14–ಸಾರಿಗೆ ಸಂಸ್ಥೆಯ ನೂತನ 'ಅಶ್ವಮೇಧ' ಬಸ್ ಸಂಚಾರಕ್ಕೆ ಶಾಸಕ ಡಾ.ಮಂತರ್‌ಗೌಡ ನಗರದ ಕೆಎಸ್‌ಆರ್‌ಟಿಸಿ ನಿಲ್ದಾಣದಲ್ಲಿ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು, ಮಡಿಕೇರಿ, ಸೋಮವಾರಪೇಟೆ, ಅರಕಲಗೂಡು, ಚೆನ್ನರಾಯಪಟ್ಟಣ ಮಾರ್ಗವಾಗಿ ಪ್ರತಿದಿನ ಬೆಳಗ್ಗೆ 10.15ಕ್ಕೆ ಹೊರಟು ಸಂಜೆ 4.45ಕ್ಕೆ ಬೆಂಗಳೂರು ತಲುಪಲಿದೆ. ಮಡಿಕೇರಿ–ಸೋಮವಾರಪೇಟೆ ಮಾರ್ಗದಲ್ಲಿ ಬೆಂಗಳೂರಿಗೆ ತೆರಳಲು ಸಾರ್ವಜನಿಕರ ಬಹುದಿನದ ಬೇಡಿಕೆಯನ್ನು ಈಡೇರಿಸಲಾಗಿದೆ ಎಂದರು.

ಮಡಿಕೇರಿ ಕೆಎಸ್‌ಆರ್‌ಟಿಸಿ ಘಟಕದಿಂದ ಸೋಮವಾರಪೇಟೆ ಮಾರ್ಗ 3 ಬಸ್, ಕುಶಾಲನಗರದಿಂದ 2 ಬಸ್ ಸಂಚರಿಸುತ್ತಿವೆ. ಮಡಿಕೇರಿ ಘಟಕದಲ್ಲಿ 97 ಬಸ್‌ಗಳು ವಿವಿಧ ಮಾರ್ಗದಲ್ಲಿ ಸಂಚರಿಸುತ್ತಿವೆ. ಕುಶಾಲನಗರದಲ್ಲಿ ಡಿಪೋ ಆರಂಭವಾದ ನಂತರ ಮತ್ತಷ್ಟು ಬಸ್‌ಗಳು ಸಂಚರಿಸಲಿವೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ಮಡಿಕೇರಿ ಕೆಎಸ್‌ಆರ್‌ಟಿಸಿ ಘಟಕದ ವ್ಯವಸ್ಥಾಪಕ ವೀರಭದ್ರಸ್ವಾಮಿ, ಸಂಚಾರಿ ನಿಯಂತ್ರಕರು ಇತರರು ಇದ್ದರು.

ಆರ್.ಸಮರ್ಥಗೆ ಚಿನ್ನದ ಪದಕ



ಆರ್.ಸಮರ್ಥ

ಮಡಿಕೇರಿ, ಜೂ.14– ಇತ್ತೀಚೆಗೆ ಗೋವಾದಲ್ಲಿ ನಡೆದ ರಾಷ್ಟ್ರೀಯ ಮುಕ್ತ ಕಬಡ್ಡಿ ಪಂದ್ಯಾವಳಿಯಲ್ಲಿ 'ರೈಸಿಂಗ್ ಸ್ಟಾರ್ ಕೊಡಗು' ತಂಡ ಚಿನ್ನದ ಪದಕ ಗೆದ್ದುಕೊಂಡಿದೆ.

ಡಿಫೆಂಡರ್ ಆಗಿ ಉತ್ತಮ ಪ್ರದರ್ಶನ ತೋರಿದ ಪಾಲೂರು ಗ್ರಾಮದ ಆರ್.ಸಮರ್ಥ ಚಿನ್ನದ ಪದಕ ಗೆದ್ದಿದ್ದಾರೆ. ಇವರು ರಾಜೇಶ್ ಬಂಗೇರ ಹಾಗೂ ಕವಿತಾ ದಂಪತಿ ಪುತ್ರ ತರಬೇತುದಾರ ಟಿ.ಸುರೇಶ್ ನೇತೃತ್ವದಲ್ಲಿ ನಡೆದ ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು ಈ ಸಾಧನೆ ಮಾಡಿದ್ದಾರೆ.

7 ಲಕ್ಷ ಶುಲ್ಕ ಬಾಕಿ ಉಳಿಸಿಕೊಂಡ ಹೆಬ್ಬಾಲೆ ಪಂಚಾಯಿತಿಯ ವಿದ್ಯುತ್ ಸಂಪರ್ಕ ಕಡಿತ

ಹೆಬ್ಬಾಲೆ, ಜೂ.14– 7 ಲಕ್ಷಕ್ಕೂ ಹೆಚ್ಚು ಶುಲ್ಕ ಬಾಕಿ ಉಳಿಸಿಕೊಂಡಿರುವ ಕುಶಾಲನಗರ ತಾಲೂಕಿನ ಹೆಬ್ಬಾಲೆ ಗ್ರಾಮ ಪಂಚಾಯಿತಿಯ ವಿದ್ಯುತ್ ಸಂಪರ್ಕವನ್ನು ಚೆಸ್ಕಾಂ ಅಧಿಕಾರಿಗಳು ಕಡಿತಗೊಳಿಸಿದ್ದಾರೆ.

ಸೋಮವಾರಪೇಟೆ ಮತ್ತು ಕುಶಾಲನಗರ ಎರಡು ತಾಲೂಕುಗಳಿಗೆ ಹೆಬ್ಬಾಲೆ ಗ್ರಾಮ ಪಂಚಾಯಿತಿ ಅತೀ ದೊಡ್ಡ ಮತ್ತು ಗ್ರೇಡ್ 1 ಪಂಚಾಯಿತಿಯಾಗಿದ್ದು, ಈ ಪಂಚಾಯಿತಿಗೆ ಕಳೆದ ಒಂದು ತಿಂಗಳಿನಿಂದ ವಿದ್ಯುತ್ ಸಂಪರ್ಕವಿಲ್ಲ. ಇದರ ಪರಿಣಾಮವಾಗಿ ಸಾರ್ವಜನಿಕರು ಯಾವುದೇ ದಾಖಲೆ ಮಾಡಿಸಿಕೊಳ್ಳಲಾಗದೆ, ತಮ್ಮ ಮನೆ, ನೀರಿನ ಕಂದಾಯಗಳನ್ನು ಕಟ್ಟುವುದಕ್ಕೂ ಆಗದೆ ಪರದಾಡುವಂತಾಗಿದೆ. ಶಾಲಾ ಕಾಲೇಜುಗಳಿಗೆ ದಾಖಲಾಗುತ್ತಿರುವ ಸಮಯವೂ ಇದಾಗಿರುವುದರಿಂದ ವಾಸಸ್ಥಳ ದೃಢೀಕರಣ ಪತ್ರ ಸೇರಿದಂತೆ ಪಂಚಾಯಿತಿಯಿಂದ ಕೆಲವು ದಾಖಲೆಗಳನ್ನು ಮಾಡಿಸಿಕೊಳ್ಳಲಾಗದೆ ವಿದ್ಯಾರ್ಥಿಗಳು ಸಂಕಷ್ಟ ಎದುರಿಸುವಂತಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಶಾಸಕ ಡಾ.ಮಂತರ್‌ಗೌಡ, ಎಷ್ಟೋ ಸಾಧ್ಯವೋ ಅಷ್ಟು ವಿದ್ಯುತ್ ಬಿಲ್ಲು ಪಾವತಿಸಿ ವಿದ್ಯುತ್ ಸಂಪರ್ಕ ಕೊಡಿಸಲು ಪ್ರಯತ್ನಿಸಲಾಗುವುದು ಎಂದಿದ್ದಾರೆ.

ಗುಂಡ್ಲುಪೇಟೆಯಲ್ಲಿ ತೊಂಬೆ ನೀರು ಕಳವು!

ಪುರಸಭೆಯ ತೊಂಬೆಯಲ್ಲಿ ನಿತ್ಯ 3-4 ಟ್ಯಾಂಕರ್‌ಗಳಷ್ಟು ನೀರು ಕಳ್ಳತನ



ಗುಂಡ್ಲುಪೇಟೆ ಪುರಸಭೆಯ ತೊಂಬೆಯಲ್ಲಿ ರಾಜಾರೋಷವಾಗಿ ಟ್ಯಾಂಕರ್‌ಗೆ ನೀರು ತುಂಬಿಸಿಕೊಳ್ಳುತ್ತಿರುವುದು.

ಗುಂಡ್ಲುಪೇಟೆ, ಜೂ.14–ತೊಂಬೆಯಲ್ಲಿ ನೀರು ಕದಿಯುವ ಕಳ್ಳರು ದಿನೇ ದಿನೇ ಹೆಚ್ಚಾಗುತ್ತಿದ್ದು, ಪಟ್ಟಣದ ಹೊರವಲಯದ ಕಲ್ಯಾಣಿಕೊಳದ ದೇವಸ್ಥಾನ ಪಕ್ಕದ ಪುರಸಭೆಯ ತೊಂಬೆಯಲ್ಲಿ ಪ್ರತಿನಿತ್ಯ 3–4 ಟ್ಯಾಂಕರ್‌ಗಳಷ್ಟು ನೀರು ಕಳ್ಳತನವಾಗುತ್ತಿದೆ.

ಕಲ್ಯಾಣಿಕೊಳದ ಪಕ್ಕದಲ್ಲಿ ರುದ್ರಭೂಮಿಯಿದ್ದು, ಇಲ್ಲಿ ಅಂತ್ಯಸಂಸ್ಕಾರ ಮುಗಿಸಿ ಬರುವವರು ಕೈಕಾಲು ತೊಳೆಯಲು ಅನುಕೂಲವಾಗುವಂತೆ ತೊಂಬೆಗೆ ಬೋರ್‌ವೆಲ್ ಮೂಲಕ ನೀರು ಸಂಗ್ರಹಿಸಲಾಗುತ್ತದೆ. ಆದರೆ, ಕಳ್ಳರು ಟ್ಯಾಂಕರ್ ತಂದು ಅಂತ್ಯಸಂಸ್ಕಾರ ಮುಗಿಸಿ ಬಂದವರಿಗೂ ಜಾಗ ಕೊಡದೆ ನೀರು ತುಂಬಿಸಿಕೊಂಡು ಪಟ್ಟಣದಲ್ಲಿ ಮಾರಾಟ ಮಾಡುತ್ತಿದ್ದಾರೆ.

ಸಾರ್ವಜನಿಕರ ತೆರಿಗೆ ದುಡ್ಡಿನಲ್ಲಿ ನಿರ್ಮಿಸಿರುವ ಈ ತೊಂಬೆಯ ನೀರನ್ನು ಕಳ್ಳರು ಮಾರಾಟ ಮಾಡುತ್ತಿರುವುದು ಪುರಸಭೆ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೇ ಎಂದು ಪಟ್ಟಣ ನಿವಾಸಿಗಳ ಪ್ರಶ್ನೆಯಾಗಿದೆ.

ಬಡಾವಣೆಯಲ್ಲಿ ನೀರಿನ ಬವಣೆ: ದಿನೇ ದಿನೆ ಪಟ್ಟಣದಲ್ಲಿ ಜನವಸತಿ ಪ್ರದೇಶಗಳು ಹೆಚ್ಚಾಗುತ್ತಿದ್ದರೂ ಹಲವು ಬಡಾವಣೆಗಳಿಗೆ ಇನ್ನೂ ನೀರಿನ ಬವಣೆ ತಪ್ಪಿಲ್ಲ. ಪ್ರಮುಖ ಬಡಾವಣೆಗಳಲ್ಲಿ ಒಂದಾದ ಬಿಟಿಎ ಬಡಾವಣೆಯಲ್ಲಿ ನೀರಿನ ತೊಂದರೆ ಹೇಳ ತೀರದಾಗಿದೆ.

> ತೊಂಬೆಯಲ್ಲಿ ನೀರನ್ನು ಟ್ಯಾಂಕರ್‌ಗಳಲ್ಲಿ ತುಂಬಿಕೊಂಡು ಹೋಗುವವರನ್ನು ಪತ್ತೆಹಚ್ಚಿ, ಯಾವುದೇ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಲಾಗುವುದು. ಜೊತೆಗೆ ಟ್ಯಾಂಕರ್‌ಗಳನ್ನು ವಶಕ್ಕೆ ಪಡೆಯಲಾಗುವುದು.
>
> –ಶಿವಕುಮಾರ ಆರಾಧ್ಯ, ಪುರಸಭೆ ಇಂಜಿನಿಯರ್

ಸುತ್ತಮುತ್ತ ನೂರಾರು ಮನೆಗಳಿದ್ದರೂ ಸಮರ್ಪಕವಾದ ರಸ್ತೆ, ಬೀದಿದೀಪ, ಚರಂಡಿ ಸ್ವಚ್ಛತೆ ಇಲ್ಲದೆ ನಿವಾಸಿಗಳು ಪರದಾಡುತ್ತಿದ್ದಾರೆ. ನೀರು ವಾರಕ್ಕೊಮ್ಮೆಯೂ ಇಲ್ಲ ಎಂಬಂತಾಗಿದೆ. ವಾಟರ್‌ಮನ್ ಕೇಳಿದರೆ ಉಡಾಫೆ ಉತ್ತರ ನೀಡುತ್ತಾರೆ. ಕೇವಲ ಕಬಿನಿ ನೀರು ನಂಬಿಕೊಂಡಿರುವ ಬಡಾವಣೆ ನಿವಾಸಿಗಳಿಗೆ ಸಮರ್ಪಕ ನೀರಿನ ಸರಬರಾಜಿನ ತೊಂದರೆಯಾಗಿದೆ. ಹಣ ಇರುವವರು ಟ್ಯಾಂಕರ್ ಮೂಲಕ ನೀರನ್ನು ಖರೀದಿಸುತ್ತಾರೆ. ಆದರೆ, ಬಡವರ ಕಥೆ ಏನು? ಎಂಬುದು ನಿವಾಸಿಗಳ ಅಳಲು.

ರಸ್ತೆ ದುರಸ್ತಿಗೆ ಆಗ್ರಹಿಸಿ ಕೆಆರ್‌ಎಸ್ ಪ್ರತಿಭಟನೆ



ಕೊಳ್ಳೇಗಾಲ ನಗರಸಭೆ ಕಚೇರಿ ಎದುರು ರಸ್ತೆ ದುರಸ್ತಿಗೆ ಆಗ್ರಹಿಸಿ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೊಳ್ಳೇಗಾಲ, ಜೂ.14– ಪಟ್ಟಣದಲ್ಲಿ ಹದಗೆಟ್ಟ ರಸ್ತೆಗಳನ್ನು ದುರಸ್ತಿಪಡಿಸುವಂತೆ ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಗುರುಕಾರ್ ವೃತ್ತದ ಬಳಿ ಜಮಾಯಿಸಿದ ಕಾರ್ಯಕರ್ತರು, ನಗರಸಭೆ ಕಚೇರಿವರೆಗೆ ಮೆರವಣಿಗೆ ನಡೆಸಿ ಬಳಿಕ ಧರಣಿ ನಡೆಸಿದರು. ಇದೇ ವೇಳೆ ನಗರಸಭೆ ಆಯುಕ್ತ ರಮೇಶ್ ಹಾಗೂ ವ್ಯವಸ್ಥಾಪಕ ಲಿಂಗರಾಜು ಮಾತನಾಡಿ, ಶೀಘ್ರ ನಗರಸಭೆ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ರಸ್ತೆ ಸರಿಪಡಿಸುವುದಾಗಿ ಭರವಸೆ ನೀಡಿದರು. ಬಳಿಕ ಪ್ರತಿಭಟನೆ ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ಕೆಆರ್‌ಎಸ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ್ ಶಾಸ್ತ್ರಿ, ಜಿಲ್ಲಾಧ್ಯಕ್ಷ ಗಣೇಶ್, ಉಪಾಧ್ಯಕ್ಷ ಸೈಯದ್ ಸಮಿ, ಪ್ರಧಾನ ಕಾರ್ಯದರ್ಶಿ ಗಿರೀಶ್, ಶ್ರೀನಿವಾಸ್ ಬೂದುಬಾಳು, ಜಯಶಂಕರ್, ಯಳಂದೂರು ತಾಲೂಕು ಅಧ್ಯಕ್ಷ ರಂಗರಾಜು, ಹನೂರು ತಾಲೂಕು ಉಪಾಧ್ಯಕ್ಷ ಶಿವಶಂಕರ್, ಈಶ್ವರ ಇತರರು ಭಾಗವಹಿಸಿದ್ದರು.

ಪ್ರತಿ ಗ್ರಾಪಂಗಳಲ್ಲಿ ಮಕ್ಕಳ ಗ್ರಾಮಸಭೆ ನಡೆಸಿ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಸೂಚನೆ

ಚಾಮರಾಜನಗರ, ಜೂ.14– ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಮಕ್ಕಳ ಗ್ರಾಮಸಭೆ ನಡೆಸಿ, ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಸೂಚನೆ ನೀಡಿದರು.

ನಗರದ ಜಿಲ್ಲಾಡಳಿತ ಭವನದ ಕೆಸ್ವಾನ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಬಾಲ್ಯ ವಿವಾಹ ನಿಷೇಧ ಮತ್ತು ನಿಯಂತ್ರಣ ಕಾಯ್ದೆ, ಬಾಲ ನ್ಯಾಯ ಕಾಯ್ದೆ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ನಿಯಂತ್ರಣ ಕ್ರಮಗಳು, ಬಾಲ್ಯ ವಿವಾಹ ತಡೆಗಟ್ಟುವಿಕೆ ಅತ್ಯಂತ ಪ್ರಮುಖವಾಗಿವೆ. ಗ್ರಾಮೀಣ ಪ್ರದೇಶಗಳಲ್ಲೂ ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸಬೇಕಾದ ಅಗತ್ಯವಿದೆ. ಆದ್ದರಿಂದ ಪ್ರತಿ ಗ್ರಾಪಂಗಳಲ್ಲೂ ಮಕ್ಕಳ ಸಭೆ ನಡೆಸಬೇಕು ಎಂದರು.



ಚಾಮರಾಜನಗರದದಲ್ಲಿ ನಡೆದ ಬಾಲ ನ್ಯಾಯ ಕಾಯ್ದೆ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಮಾತನಾಡಿದರು.

ಹಿಂದಿನ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳ ಕುರಿತು ಪ್ರತಿಕ್ರಿಯೆ ಹಾಗೂ ಆ ಸಮಸ್ಯೆಗೆ ತೆಗೆದುಕೊಂಡ ಪರಿಹಾರ ಕ್ರಮಗಳ ಬಗ್ಗೆ ಮಾಹಿತಿ ಪಡೆದ ವೆಂಕಟೇಶ್, ಸಮಸ್ಯೆಗೆ ಪರಿಹಾರ ದೊರೆಯದಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲೆಯಲ್ಲಿ ನಡೆದಿರುವ ಬಾಲ್ಯ ವಿವಾಹಗಳ ಬಗ್ಗೆ ಮಾಹಿತಿ ಪಡೆದು, ಇಂತಹ ಪ್ರಕರಣಗಳಲ್ಲಿ ಯಾವ ಕ್ರಮ ವಹಿಸಲಾಗಿದೆ ಎಂಬ ಬಗ್ಗೆ ವಿವರ ಪಡೆದರು. ಬಾಲ್ಯ ವಿವಾಹ ತಡೆಯುವ ಜವಾಬ್ದಾರಿ ಕೇವಲ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸೀಮಿತವಾಗಿರುವುದಿಲ್ಲ. ಶಿಕ್ಷಣ ಇಲಾಖೆ ಹಾಗೂ ಗ್ರಾಮ ಪಂಚಾಯಿತಿಗಳ ಸಹಕಾರದೊಂದಿಗೆ ಬಾಲ್ಯ ವಿವಾಹ ತಡೆಗಟ್ಟಬೇಕು. ಪ್ರಕರಣಗಳ ಮಾಹಿತಿ, ಸುಳಿವು ದೊರೆತ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕು. ಶಾಲೆಯಲ್ಲಿ ಎಲ್ಲಾ ಮೂಲಸೌಕರ್ಯ ಒದಗಿಸಬೇಕು. ಪ್ರತಿ ವಿದ್ಯಾರ್ಥಿನಿಲಯಗಳಿಗೂ ಭೇಟಿ ನೀಡಿ, ಸಮಸ್ಯೆಗಳು ಕಂಡು ಬಂದಲ್ಲಿ ತಕ್ಷಣ ಪರಿಹರಿಸಬೇಕು. ವಿದ್ಯಾರ್ಥಿ ನಿಲಯಗಳಲ್ಲಿ ಮಕ್ಕಳ ಸ್ನೇಹಿ ವಾತಾವರಣ ನಿರ್ಮಾಣ ಮಾಡಬೇಕು. ಅಂಗನವಾಡಿ ಕೇಂದ್ರ ಹಾಗೂ ಶಾಲೆಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ, ಮೂಲ ಸೌಲಭ್ಯಗಳು ಸಮರ್ಪಕವಾಗಿ ತಲುಪುವಂತೆ ನೋಡಿಕೊಳ್ಳಬೇಕು. ಮಕ್ಕಳ ಹಕ್ಕುಗಳು ಹಾಗೂ ಸೌಲಭ್ಯಗಳ ಬಗ್ಗೆ ನಿರ್ಲಕ್ಷ್ಯ ವಹಿಸಬಾರದು ಎಂದು ಎಚ್ಚರಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಮಂಜುನಾಥ್, ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಶಾಲಾ ಮಕ್ಕಳಿಗೆ ಕಾನೂನಿನ ಅರಿವು ಅಗತ್ಯ



ಮಲ್ಲಯ್ಯನಪುರದ ಮೊರಾರ್ಜಿ ವಸತಿ ಶಾಲೆಯಲ್ಲಿ ಆಯೋಜಿಸಿದ್ದ ಕಾನೂನು ಮತ್ತು ಶಿಕ್ಷಣದ ಅರಿವು ಕಾರ್ಯಕ್ರಮವನ್ನು ಉಮ್ಮತ್ತೂರು ಇಂದುಶೇಖರ್ ಉದ್ಘಾಟಿಸಿದರು.

ಚಾಮರಾಜನಗರ, ಜೂ.14– ವಿದ್ಯಾರ್ಥಿ ದಿಸೆಯಿಂದಲೇ ಮಕ್ಕಳಿಗೆ ಕಾನೂನಿನ ತಿಳುವಳಿಕೆ ನೀಡಿದರೆ ಅಪರಾಧ ಮುಕ್ತ ಸಮಾಜ ನಿರ್ಮಾಣವಾಗಲಿದೆ ಎಂದು ಜಿಲ್ಲಾ ವಕೀಲರ ಸಂಘದ ನಿಕಟಪೂರ್ವ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಅಭಿಪ್ರಾಯಪಟ್ಟರು.

ಸಮೀಪದ ಮಲ್ಲಯ್ಯನಪುರದ ಮೊರಾರ್ಜಿ ವಸತಿ ಶಾಲೆಯಲ್ಲಿ ಜಿಲ್ಲಾಡಳಿತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಯುವ ಸ್ಪಂದನ ಕೇಂದ್ರ ಸಂಯುಕ್ತಾಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಕಾನೂನು ಮತ್ತು ಶಿಕ್ಷಣದ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಗಳು ಕಠಿಣ ಕಾನೂನುಗಳನ್ನು ಜಾರಿಗೆ ತಂದರೂ ದಿನೇ ದಿನೆ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿವೆ. ಈ ನಿಟ್ಟಿನಲ್ಲಿ ಮಕ್ಕಳನ್ನು ಬಾಲ್ಯದಿಂದಲೇ ಸನ್ನಡತೆಯತ್ತ ಕೊಂಡೊಯ್ಯುವ ಮಹತ್ತರ ಜವಾಬ್ದಾರಿಯನ್ನು ಶಿಕ್ಷಕರು ವಹಿಸಬೇಕು. ಶಾಲೆಗಳಲ್ಲಿ ಹೆಚ್ಚು ಹೆಚ್ಚು ಕಾನೂನು ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಮುಂದಾಗಬೇಕು ಎಂದು ತಿಳಿಸಿದರು.

ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಯಾರೂ ಕೂಡ ಅಪಾರಾಧದ ನಂಟು ಹೊಂದದಂತೆ ಎಚ್ಚರವಹಿಸಬೇಕು. ಬಾಲ್ಯ ವಿವಾಹ ತಡೆ, ಜನನ ಮತ್ತು ಮರಣ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಮೋಟಾರು ವಾಹನ ಕಾಯ್ದೆ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಬಾಲ ನ್ಯಾಯ ಮಂಡಳಿ ಸದಸ್ಯ ಟಿ.ಜೆ.ಸುರೇಶ್ ಮಾತನಾಡಿ, ಶಿಕ್ಷಣ ಎಂದರೆ ಪುಸ್ತಕದಲ್ಲಿರುವುದನ್ನು ಓದುವು, ಹೆಚ್ಚಿನ ಅಂಕಗಳಿಸುವುದಷ್ಟೇ ಅಲ್ಲ. ಮಕ್ಕಳಲ್ಲಿ ಮಾನವೀಯ ಮೌಲ್ಯಗಳಾದ ಆತ್ಮವಿಶ್ವಾಸ, ಮನೋಬಲ, ಸಮಸ್ಯೆಗಳನ್ನು ನಿಭಾಯಿಸುವುದಕ್ಕಿಂತ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯ, ವಿನಯವನ್ನು ಕಲಿಸುವುದಾಗಿದೆ ಎಂದರು.

ಪ್ರಾಂಶುಪಾಲ ಎಂ.ಎನ್.ಚಂದ್ರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಯುವ ಸ್ಪಂದನ ಕೇಂದ್ರದ ಜಿಲ್ಲಾ ಪರಿವರ್ತಕ ಎಸ್.ಗುರುರಾಜು, ಶಿಕ್ಷಕರಾದ ರಾಜೇಶ್, ವಿ.ಗರುಡ ರಾಜು, ಎಂ.ಬಿ.ಲೀಲಾವತಿ, ಸಿ.ರಶ್ಮಿ, ಸೌಮ್ಯ ಇದ್ದರು.

ಬೈಕ್, ಗೂಡ್ಸ್ ವಾಹನ ಡಿಕ್ಕಿ: ಸವಾರ ಸಾವು

ಬೇಗೂರು, ಜೂ.14– ಬೈಕ್ ಹಾಗೂ ಗೂಡ್ಸ್ ವಾಹನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಬೈಕ್ ಸವಾರ ಮೃತಪಟ್ಟಿರುವ ಘಟನೆ ಸಮೀಪದ ತೊಂಡವಾಡಿ ಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಚನ್ನಪಟ್ಟಣ ತಾಲೂಕಿನ ಮುಳ್ಳೂರು ಗ್ರಾಮದ ಅರಣ್‌ಗೌಡ(31) ಮೃತಪಟ್ಟ ಯುವಕ. ಈತ ಬೈಕ್‌ನಲ್ಲಿ ಬೇಗೂರಿನಿಂದ ಮೈಸೂರಿಗೆ ಹೋಗುತ್ತಿದ್ದು, ಈ ವೇಳೆ ಮೈಸೂರಿನಿಂದ ಗುಂಡ್ಲುಪೇಟೆಗೆ ಬರುತ್ತಿದ್ದ ಗೂಡ್ಸ್ ವಾಹನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಅರಣ್‌ಗೌಡನನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪನೆಗೆ 2 ಕೋಟಿ ಮಂಜೂರು

